ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



Blog :janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 21 ಮೇ 22, 2011 ರೂ. 5/- ಪುಟ 16

ಲಾಡೆನ್ ಅಂತ್ಯ ಭಯೋತ್ಪಾದನೆಯ ಅಂತ್ಯವೇ ?



...ಅಮೆರಿಕಾ ಪಾಕ್ ಆರ್ಥಿಕ ಮಿಲಿಟರಿ ಬಲಾಬಲ ಇದ್ದಕ್ಕಿದ್ದ ಹಾಗೇ ಆಲ್ ಖೈದಾಗೆ....

▶ 8

ವೃತ್ತಿ ಶಿಕ್ಷಣ ಬಿಕ್ಕಟ್ಟು : ಖಾಸಗಿ ಸಂಸ್ಥೆಗಳ ಹಿಡಿತದಲ್ಲಿ ಸರ್ಕಾರ



▶ 11

... ಇಂಜಿನಿಯರಿಂಗ್ ಶುಲ್ಕ ಕನಿಷ್ಟ 55 ಸಾವಿರದಿಂದ ಗರಿಷ್ಟ 1 ಲಕ್ಷದವರೆಗೆ, ವೈದ್ಯಕೀಯ 2.5 ಲಕ್ಷದಿಂದ 3 ಲಕ್ಷದವರೆಗೆ... ಬಾಲವೇ ನಾಯಿಯನ್ನು ಅಲ್ಲಾಡಿಸುತ್ತಿದೆಯೇ ?



... ಬ್ರೇಕ್ ಇರೋದಿಲ್ಲ, ಕ್ಲಚ್ ಇರೋದಿಲ್ಲ, ಕಿತ್ತೋದ ಟೈರ್, ಕನ್ನಡಿ ಒಡಿಸ್ರೀ.....

ಬಿಎಂಟಿಸಿ ಕಾರ್ಮಿಕರ ಹೆಗಲಿಗೆ ಸಂಕಟಗಳ ಮೂಟೆ

▶ 7



ಭ್ರಷ್ಟಾಚಾರ : ಜನಾಂದೋಲನದ ಸ್ವರೂಪ

▶ 3

....ವಿಶಾಲ ಜನಾಂದೋಲನ ಸಾರುವುದಾಗಿ ಹೇಳಲಾಯಿತಾದರೂ ಅದು ವಿಸ್ತರಿಸಲಿಲ್ಲ, ರಾಜ್ಯ ಸರ್ಕಾರ ಪ್ರಸ್ತಾಪಿತವಾದರೂ ಕೇಂದ್ರದ....

ಉತ್ತರಪ್ರದೇಶ : ಭೂ ಸಂಪನ್ಮೂಲಗಳ ಲೂಟಿ

...ರಿಯಲ್ ಎಸ್ಟೇಟ್ ಕಂಪನಿಗಳಿಗೆ, ಕಾರ್ಪೊರೇಷನ್‌ಗಳಿಗೆ ಪ್ರಭುತ್ವದ ಮಧ್ಯಪ್ರವೇಶದ ಮೂಲಕ ಭೂಮಿಯನ್ನು....

ವಿನಾಶಕಾರಿ ರೇಷ್ಮೆ ಆಮದು ನೀತಿ ಬದಲಿಸಲು

ರೈತರ ಸಾಮೂಹಿಕ ಧರಣಿ


ಬೆಂಗಳೂರಿನ ಆನಂದ್ ರಾವ್ ವೃತ್ತದಲ್ಲಿ ಮೇ 10 ರಂದು ಪ್ರತಿಭಟನೆ

ದೇಶದ ಉತ್ಪಾದನೆಯಲ್ಲಿ ಶೇ.50ಕ್ಕಿಂತ ಹೆಚ್ಚು ರೇಷ್ಮೆ ಉತ್ಪಾದನೆ ಮಾಡುವ ರಾಜ್ಯದಲ್ಲಿ ರೈತರು ಮಾರಾಟ ಮಾಡುವ ಪ್ರತಿ ಕೆ.ಜಿ. ರೇಷ್ಮೆಗೂಡಿಗೆ ಸರಾಸರಿ 220 ರೂ.ಸಿಗುತ್ತಿದೆ. ಸಮಸ್ಯೆ ಪ್ರಾರಂಭ ಆಗುವ ಮುಂಚೆ ಸರಾಸರಿ 300ಕ್ಕಿಂತ ಹೆಚ್ಚು ಸಿಗುತ್ತಿತ್ತು. ಈ ಪ್ರಕಾರ ಪ್ರತಿ ತಿಂಗಳು 37.25 ಕೋಟಿ ಗಿಂತ ಹೆಚ್ಚು ಆದಾಯವನ್ನು ಕಳೆದುಕೊಂಡು ನರಳುತ್ತಿದ್ದಾರೆ.

ಸುಂಕ ರಹಿತವಾಗಿ ಪ್ರತಿವರ್ಷ 2,500 ಮೆಟ್ರಿಕ್ ಟನ್ ರೇಷ್ಮೆ ಆಮದಿಗೆ ಅವಕಾಶ ನೀಡುವ ಆಗಸ್ಟ್ 10, 2010ರ ತೀರ್ಮಾನ ವಾಪಸ್ಸು ಪಡೆಯಬೇಕು. ಶೇ.31 ರಷ್ಟು ಇದ್ದ ಆಮದು ಸುಂಕವನ್ನು ಶೇ.5ಕ್ಕೆ ಇಳಿಸಿರುವ ಕೇಂದ್ರ ಸರ್ಕಾರದ ಬಜೆಟ್ ಘೋಷಣೆಯನ್ನು ಹಿಂತೆಗೆದುಕೊಂಡು ಹಿಂದಿನಂತೆ ಮುಂದುವರೆಸಬೇಕು, ಈ ಎರಡೂ ತೀರ್ಮಾನಗಳ ಫಲವಾಗಿ ರೇಷ್ಮೆ ಗೂಡಿನ ದರಗಳು ಕುಸಿದಿರುವುದರಿಂದ ಪ್ರತಿ ಕೆ.ಜಿ.ಗೆ 350 ರೂ. ಘೋಷಣೆ ಮಾಡಿ ವ್ಯತ್ಯಾಸದ ಹಣವನ್ನು ರಾಜ್ಯ ಸರ್ಕಾರ ತುಂಬಿಕೊಡಬೇಕೆಂದು ಆಗ್ರಹಿಸಿ, ರೇಷ್ಮೆ ಬೆಳೆಗಾರರು ಸೇರಿದಂತೆ ಇನ್ನಿತರ ಅವಲಂಬಿತರು ಬೆಂಗಳೂರಿನಲ್ಲಿ ರಾಜ್ಯಮಟ್ಟದ ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಿದರು.

ಸುಂಕ ರಹಿತ ರೇಷ್ಮೆ ಆಮದು ವಿರೋಧಿ ಅಖಿಲ ಭಾರತ ಹೋರಾಟ ಸಮಿತಿ ನೇತೃತ್ವದಲ್ಲಿ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಮಂಡ್ಯ, ರಾಮನಗರ ಜಿಲ್ಲೆಯ ನೂರಾರು ರೈತರು ಭಾಗವಹಿಸಿ ಆನಂದರಾವ್ ವೃತ್ತದ ಗಾಂಧಿ ಪ್ರತಿಮೆ ಬಳಿ ಧರಣಿ ಸತ್ಯಾಗ್ರಹ ನಡೆಸಿದರು. ಧರಣಿ ನಿರತರನ್ನು ಉದ್ದೇಶಿಸಿ ಮಾತನಾಡಿದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪಡೆರವರು ಕೇಂದ್ರ-ರಾಜ್ಯ ಸರ್ಕಾರಗಳು ರೈತ ವಿರೋಧಿ ನೀತಿ ಅನುಸರಿಸುತ್ತಿವೆ. ಕೆಲವೇ ಕೆಲವು ಬೆರಳಣಿಕೆಯ ಕೋಟ್ಯಾಧಿಪತಿಗಳನ್ನು ತೃಪ್ತಿಪಡಿಸಲು ಲಕ್ಷಾಂತರ ಸಂಖ್ಯೆಯ ರೈತರು ರೀಲರ್ಸ್, ನೇಕಾರರ ಬದುಕನ್ನು ಕಿತ್ತುಕೊಳ್ಳಲು ಹೊರಟಿವೆ. ಸಮರಶೀಲವಾದ ಹೋರಾಟದಿಂದ ಮಾತ್ರ ಈ ನೀತಿಗಳನ್ನು ಬದಲಿಸಲು ಸಾಧ್ಯ ಬೇಡಿಕೆ ಈಡೇರಿಸದಿದ್ದರೆ ಬೃಹತ್ ಹೋರಾಟಗಳಿಗೆ ತಯಾರು ಆಗುವಂತೆ ರೇಷ್ಮೆ ಬೆಳೆಗಾರರಿಗೆ ಕರೆ ನೀಡಿದರು.

ಸುಂಕ ರಹಿತ ರೇಷ್ಮೆ ಆಮದು ಹೋರಾಟ ಸಮಿತಿ ಸಂಘಟನಾ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿರವರು ಫೆಬ್ರವರಿ 18 ರಂದು ಕೇಂದ್ರ ರೇಷ್ಮೆ ಮಂಡಳಿ(ಸಿಎಸ್‌ಬಿ) ಎದುರು ನಡೆದ ಸಾವಿರಾರು ರೈತರ ಬೃಹತ್ ಪ್ರತಿಭಟನೆ, ಕೇಂದ್ರ ಸಚಿವರುಗಳಾದ ಎಸ್.ಎಂ.ಕೃಷ್ಣ, ವೀರಪ್ಪ ಮೊಯಿಲಿ, ಕೆ.ಹೆಚ್.ಮುನಿಯಪ್ಪರವರು ಮನೆ ಕಛೇರಿ ಎದುರು ನಡೆದ ಪರಿಣಾಮಕಾರಿ ಪ್ರತಿಭಟನೆಗಳನ್ನು ನಿರ್ಲಕ್ಷ್ಯ ಮಾಡಲಾಗಿದೆ. ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡುವಾಗ ಹಣಕಾಸು ಸಚಿವ ಪ್ರಣಬ್ ಮುಖರ್ಜಿ ಸುಂಕ ಕಡಿತವನ್ನು ನೇಕಾರರ ಹಿತರಕ್ಷಣೆಗಾಗಿ ಮಾಡಲಾಗಿದೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಆದರೆ ಪ್ರತಿವರ್ಷ 3,276 ಲಕ್ಷ ಮೀಟರ್ಸ್ ರೇಷ್ಮೆ ಬಟ್ಟೆಯನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಇದರ ಮೇಲೆ ಯಾವುದೇ ನಿಯಂತ್ರಣವಿಲ್ಲ. ಪರಿಸ್ಥಿತಿ ಹೀಗಿರುವಾಗ ನೇಕಾರರ ಹಿತ ರಕ್ಷಣೆ ಎನ್ನುವುದು ಮಹಾ ಸುಳ್ಳು. ಈ ಕೂಡಲೇ ಆಮದು ಆಗುತ್ತಿರುವ ರೇಷ್ಮೆ ಬಟ್ಟೆಯನ್ನು ನಿಯಂತ್ರಿಸಿದರೆ ಇಲ್ಲೇ ಲಕ್ಷಾಂತರ ನೇಕಾರರಿಗೆ, ಕಾರ್ಮಿಕರಿಗೆ ಉದ್ಯೋಗ ಸೃಷ್ಟಿಸಬಹುದು. ಆದರೆ ದೊಡ್ಡ ದೊಡ್ಡ ವ್ಯಾಪಾರಿಗಳ ಪರ ಶ್ರೀಮಂತರ ಪರ ನೀತಿ ಅನುಸರಿಸುತ್ತಿರುವ ಯುಪಿಎಗೆ ಈ ರೀತಿ ಮಾಡಲು ರಾಜಕೀಯ ಇಚ್ಛೆ ಇಲ್ಲ ಎಂದು ಟೀಕಿಸಿದರು.

ದೇಶದ ಉತ್ಪಾದನೆಯಲ್ಲಿ ಶೇ.50ಕ್ಕಿಂತ ಹೆಚ್ಚು ರೇಷ್ಮೆ ಉತ್ಪಾದನೆ ಮಾಡುವ ರಾಜ್ಯದಲ್ಲಿ ರೈತರು ಮಾರಾಟ ಮಾಡುವ ಪ್ರತಿ ಕೆ.ಜಿ. ರೇಷ್ಮೆಗೂಡಿಗೆ ಸರಾಸರಿ 220 ರೂ.ಸಿಗುತ್ತಿದೆ. ಸಮಸ್ಯೆ ಪ್ರಾರಂಭ ಆಗುವ ಮುಂಚೆ ಸರಾಸರಿ 300ಕ್ಕಿಂತ ಹೆಚ್ಚು ಸಿಗುತ್ತಿತ್ತು. ಈ ಪ್ರಕಾರ ಪ್ರತಿ ತಿಂಗಳು 37.25 ಕೋಟಿ ಗಿಂತ ಹೆಚ್ಚು ಆದಾಯವನ್ನು ಕಳೆದುಕೊಂಡು ನರಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕನಿಷ್ಠ 350 ರೂ. ನಿಗದಿ ಮಾಡಿ ವ್ಯತ್ಯಾಸದ ಹಣವನ್ನು ತುಂಬಿಕೊಡಬೇಕು ಎಂದು ಆಗ್ರಹಿಸಿದರು.




ಮಾರ್ಚ್ 11ರಂದು ನವದೆಹಲಿಯಲ್ಲಿ ನಡೆದ ರೇಷ್ಮೆ ರೈತರ ಬೃಹತ್ ಪ್ರತಿಭಟನೆ. ಮೇಲಿನ ಚಿತ್ರ - ಕರ್ನಾಟಕದ ರೈತರು

ಸುಂಕ ರಹಿತವಾಗಿ ರೇಷ್ಮೆ ಆಮದು ಮಾಡಿಕೊಳ್ಳುವ ತೀರ್ಮಾನವನ್ನು ಕೇಂದ್ರ ಸರ್ಕಾರ ಪ್ರಕಟಿಸಿದ ಕೂಡಲೇ ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆರ್‌ಎಸ್) ಕರಾಳ ಪರಿಣಾಮವನ್ನು ಚರ್ಚಿಸಲು ಬೆಂಗಳೂರಿನಲ್ಲಿ ಸೆಪ್ಟೆಂಬರ್ 2010ರಲ್ಲಿ ಅಖಿಲ ಭಾರತ ಸಮಾವೇಶ ಸಂಘಟಿಸಿ ಈ ಸಂಬಂಧ ಹೋರಾಟ ನಡೆಸಿ ಕೇಂದ್ರ, ರಾಜ್ಯ ಸರ್ಕಾರಗಳ ಮೇಲೆ ಒತ್ತಡ ಹೇರಲು ಸುಂಕ ರಹಿತ ರೇಷ್ಮೆ ಆಮದು ವಿರೋಧಿ ಅಖಿಲ ಭಾರತ ಹೋರಾಟ ಸಮಿತಿ ರಚಿಸಲಾಯಿತು.

ನಂತರ ಹೋರಾಟ ಸಮಿತಿ ನೇತೃತ್ವದಲ್ಲಿ ಹಲವು ಹಂತಗಳ ಹೋರಾಟ, ಪ್ರತಿಭಟನೆ ನಡೆಸಿರುವುದನ್ನು ನೆನಪಿಸಿಕೊಳ್ಳಬಹುದು. ಕೇಂದ್ರ ಮಂತ್ರಿಗಳು ಭರವಸೆ ನೀಡಿದಂತೆ ಆಮದು ಸುಂಕ ಶೇ.31ಕ್ಕೆ ಏರಿಸಬೇಕು. ಹಾಗೂ ಕೋಟ್ಯಾಂತರ ಆದಾಯವನ್ನು ರೇಷ್ಮೆ ವಹಿವಾಟಿನಿಂದ ಪಡೆಯುತ್ತಿರುವ ರಾಜ್ಯ ಸರ್ಕಾರ ರೈತರೊಂದಿಗೆ ಚರ್ಚಿಸಿ 350 ರೂ. ಬೆಂಬಲ ಬೆಲೆ ಪ್ರತಿ ಕೆಜಿ ಗೂಡಿಗೆ ನಿಗದಿ ಮಾಡಬೇಕು. ರೈತರ ಬೇಡಿಕೆ ನಿರ್ಲಕ್ಷಿಸಿ ರೈತ ವಿರೋಧಿ ನೀತಿ ಮುಂದುವರೆಸಿದರೆ ರೇಷ್ಮೆ ಆಯುಕ್ತರ ಕಛೇರಿಗೆ ಮುತ್ತಿಗೆ, ರೇಷ್ಮೆ ಬೆಳೆಯುವ ಜಿಲ್ಲೆಗಳ ಬಂದ್, ಪಾರ್ಲಿಮೆಂಟ್ ಚಲೋ ದಂತಹ ಹೋರಾಟಗಳನ್ನು ಹಮ್ಮಿಕೊಳ್ಳುತ್ತೇವೆ ಎಂದು ಧರಣಿ ನಿರತರು ಎಚ್ಚರಿಸಿದರು. ಈ ಸಂಬಂಧ ಮೇ 22 ರಂದು ಸುಂಕರಹಿತ ರೇಷ್ಮೆ ಆಮದು ವಿರೋಧಿ ಅಖಿಲ ಭಾರತ ಹೋರಾಟ ಸಭೆ ಕರೆಯಲಾಗಿದೆ ಎಂದು ಮುಖಂಡರುಗಳು ತಿಳಿಸಿದರು.

- ಟಿ.ಯಶವಂತ

ಇದು ನಿಮಗೆ ಗೊತ್ತೆ?

1977 ರಿಂದ ಕಳೆದ 34 ವರ್ಷಗಳ ಕಾಲ. ನಿರಂತರವಾಗಿ 7 ಅವಧಿಗೆ ಪಶ್ಚಿಮ ಬಂಗಾಳದಲ್ಲಿ ಅಧಿಕಾರ ನಡೆಸಿರುವ ಎಡರಂಗದಲ್ಲಿ ಯಾವೊಬ್ಬ ಸಚಿವರೂ ಕೂಡ ಭ್ರಷ್ಟಾಚಾರದ ಕಳಂಕ ಹೊತ್ತು ಅಧಿಕಾರದಿಂದ ನಿರ್ಗಮಿಸಿದ ಉದಾಹರಣೆ ಇಲ್ಲ.

ಸಂಪಾದಕೀಯ

ಆದಿವಾಸಿಗಳ ಎತ್ತಂಗಡಿ

ನಾಗರಹೊಳೆ, ಚಾಮರಾಜನಗರ, ಕೊಡಗು, ದ.ಕ.ಗಳಲ್ಲಿ ಹುಲಿ ಸಂರಕ್ಷಣಾ ಯೋಜನೆ, ಗ್ರೇಟರ್ ಕಾವೇರಿ, ನ್ಯಾಷನಲ್ ಪಾರ್ಕ್ ಎಂಬಿತ್ಯಾದಿ ಹಲವು ಅರಣ್ಯ ರಕ್ಷಣಾ ಯೋಜನೆಗಳ ಹೆಸರಿನಲ್ಲಿ ಕಾಡಿನೊಳಗೆ ತಲೆ ತಲಾಂತರದಿಂದ ವಾಸ ಮಾಡುತ್ತಿರುವ ಆದಿವಾಸಿಗಳನ್ನು ಅಲ್ಲಿಂದ ಸ್ಥಳಾಂತರಿಸುವ ಪ್ರಕ್ರಿಯೆ ಸುಗಮವಾಗಿ ಸಾಗಿರುವುದಕ್ಕೆ ಮೆಚ್ಚಿಗೆಯನ್ನು ಕೇಂದ್ರ ಪರಿಸರ ಖಾತೆ ಸಚಿವ ಜೈರಾಂ ರಮೇಶ್ ವ್ಯಕ್ತಪಡಿಸಿರುವುದು ಹಲವು ಪ್ರಶ್ನೆಗಳನ್ನು ಎತ್ತಿದೆ. ಇವರನ್ನು ಮನವೊಲಿಸಿ ಸ್ಥಳಾಂತರಗೊಳಿಸಲಾಗುತ್ತಿದೆ. ಮತ್ತು ಅಂತಹ ಕುಟುಂಬಗಳಿಗೆ 10 ಲಕ್ಷ ರೂಪಾಯಿಗಳ ಪರಿಹಾರ ನೀಡಿ ಸ್ವಾವಲಂಬಿ ಬದುಕಿಗೆ ನೆಲೆ ಒದಗಿಸಲಾಗಿದೆ ಎಂಬ ಹೇಳಿಕೆಯಂತೂ ಅತ್ಯಂತ ಹಾಸ್ಯಾಸ್ಪದ ಹಾಗೂ ವಿರೋಧಾಭಾಸಗಳಿಂದ ಕೂಡಿದೆ. ಆದಿವಾಸಿಗಳನ್ನು ಒಕ್ಕಲೆಬ್ಬಿಸುವ 'ಪವಿತ್ರ' ಕಾರ್ಯವನ್ನು ಕೇಂದ್ರ ಸರ್ಕಾರವನ್ನೂ ಒಳಗೊಂಡು ದೇಶದ ಹಾಗೂ ವಿದೇಶಗಳ ಹಣಕಾಸಿ ನೆರವಿನ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳ (ಎನ್.ಜಿ.ಓ) ಉಸ್ತುವಾರಿಗೆ ವಹಿಸಲಾಗಿದ್ದು, ಅದನ್ನು ಯಶಸ್ವಿಯಾಗಿ ನೆರವೇರಿಸುತ್ತಿದ್ದಾರೆ ಎಂಬುದು ಈ ಸಂಸ್ಥೆಗಳ ಕುಖ್ಯಾತ ಪಾತ್ರವನ್ನು ತೋರಿಸುತ್ತದೆ. ಅನೇಕ ಕಡೆ ಈ ಮನವೊಲಿಕೆಯೆಂದರೆ ಸಚಿವರ ಹೇಳಿಕೆಯಂತೆಯೇ ಈಗಾಗಲೇ ರಾಜ್ಯದಲ್ಲಿ 10 ಸಾವಿರಕ್ಕೂ ಅಧಿಕ ಆದಿವಾಸಿ ಕುಟುಂಬಗಳನ್ನು ಯಶಸ್ವಿಯಾಗಿ ಸ್ಥಳಾಂತರಿಸಲಾಗಿದೆ! ಹಾಗೆ ಸ್ಥಳಾಂತರಗೊಂಡ ಬಹುತೇಕ ಕುಟುಂಬಗಳು ನಾಡಿನ, ನಗರಗಳ ಹತ್ತಿರದ ಪ್ರದೇಶಗಳಲ್ಲಿ ಬೀಡು ಬಿಟ್ಟಿದ್ದಾರೆ.ವಾಹನಗಳಲ್ಲಿ ತುಂಬಿಸಿ ಬೀದಿ ಬೀದಿಗೆ ಬಿಟ್ಟಿರುವ ಉದಾಹರಣೆ ಕೊಡಗು ಮುಂತಾದೆಡೆ ಇದೆ.

ವಾಸ್ತವದಲ್ಲಿ ಇವರನ್ನು ಎನ್.ಜಿ.ಓ. ಹಾಗೂ ಸರ್ಕಾರದ ಇಲಾಖೆಗಳು ಹಲವಾರು ತಂತ್ರ, ದಂಡಗಳನ್ನು, ಬಳಸಿ, ಒತ್ತಡ ಸೃಷ್ಟಿಸಿ ಕಾಡಿನೊಳಗಿನಿಂದ ಎತ್ತಂಗಡಿ ಮಾಡಲಾಗಿದೆ. ಅಂತಹವರು ವಾಸ್ತವದಲ್ಲಿ ನೆಲೆ ತಪ್ಪಿದ ಸ್ಥಿತಿಯನ್ನು ಎದುರಿಸುತ್ತಿದ್ದಾರೆ. ನೂರಾರು ವರುಷಗಳಿಂದ ಕಾಡಿನೊಳಗೆ ಜೀವಿಸುತ್ತಾ ವಿಶಿಷ್ಠ ಜೀವನ ಕ್ರಮ ಹಾಗೂ ಸುಸಂಸ್ಕೃತಿಯನ್ನು ಹೊಂದಿರುವ ಆದಿವಾಸಿಗಳು ನೀರಿನಿಂದ ಹೊರ ತೆಗೆದ ಮೀನಿನಂತಾಗಿದ್ದಾರೆ. ಬಹುತೇಕ ದಿಕ್ಕೇ ಇಲ್ಲಗಳಾಗಿದ್ದಾರೆ. ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸಿ ಜೀವನ ನಿರ್ವಹಿಸುವಂತಿಲ್ಲ. ಏನಾದರೂ ಕೆಲಸಗಳಿಗೆ ಸೇರಬೇಕೆಂದರೆ ತರಬೇತಿ, ಕೌಶಲ್ಯಗಳಿರುವುದಿಲ್ಲ. ಅಂತಿಮವಾಗಿ ಅಲ್ಲಲ್ಲಿ ಸುಲಭವಾಗಿ ಕಡಿಮೆ ಕೂಲಿಗೆ ದುಡಿಯಬೇಕಾದ ಒತ್ತಾಯಕ್ಕೊಳಗಾಗಿದ್ದಾರೆ. ಅಸಹಾಯಕ ಕೂಲಿಕಾರರಾಗಿದ್ದಾರೆ. ಸರ್ಕಾರದ ಯಾವ ಪರಿಹಾರಗಳೂ ಬದುಕಿನ ನೆರವಿಗೆ ಬರುತ್ತಿಲ್ಲ.

ಕರ್ನಾಟಕದಲ್ಲಿ ಕಾಡಿನೊಳಗೆ ವಾಸಿಸುವ, ಅದನ್ನೇ ಅವಲಂಬಿಸಿರುವ ಸಾವಿರಾರು ಆದಿವಾಸಿ ಕುಟುಂಬಗಳಿವೆ. ಇದಕ್ಕಿಂತಲೂ ಅಧಿಕವಾಗಿ ಕಾಫಿ, ಟೀ, ತೋಟ, ಇತರೆಡೆಗಳಲ್ಲಿ ಕೂಲಿಕಾರರಾಗಿ ದುಡಿಯುವವರಿದ್ದಾರೆ. ನೂರಾರು ವರ್ಷಗಳಿಂದಲೂ ಅಲ್ಲಿದ್ದರೂ ಕಾಡಿನೊಳಗೆ ಜಮೀನಾಗಲೀ, ಒಂದು ಮನೆ ನಿವೇಶನಕ್ಕಾಗಲೀ ಅವರಿಗೆ ಹಕ್ಕು ಇಲ್ಲವಾಗಿದೆ. ಅರಣ್ಯ ಹಕ್ಕು ಕಾಯ್ದೆಯಂತೆ ಆದಿವಾಸಿಗಳು ಭೂಮಿಗಾಗಿ ಅರ್ಜಿ ಸಲ್ಲಿಸಿದ್ದಾರೆ. ಅಂತಹ ಒಟ್ಟು 20,457 ಅರ್ಜಿಗಳಲ್ಲಿ 6,522 ನ್ನು ಒಪ್ಪಿ ಉಳಿದವುಗಳನ್ನು ತಿರಸ್ಕರಿಸಲಾಗಿದೆ.

ಕಾಡಿನ ಉತ್ಪನ್ನಗಳ ಸಂಗ್ರಹಕ್ಕೂ ಅಡ್ಡಿಪಡಿಸಲಾಗಿದೆ, ಮತ್ತು ಅಪರಾಧವನ್ನಾಗಿಸಿ ತೀವ್ರತರವಾದ ಕಿರುಕುಳ, ದೌರ್ಜನ್ಯಗಳನ್ನು ನಡೆಸಲಾಗುತ್ತಿದೆ. ಬಿಟ್ಟಿ ಚಾಕರಿ, ಮಹಿಳೆಯರ ಮೇಲೆ ಅತ್ಯಾಚಾರ, ಕೊಲೆ ಇತ್ಯಾದಿಗಳು ನಡೆಯುತ್ತಲೇ ಇದ್ದು, ನಾಗರೀಕ ಸೌಲಭ್ಯಗಳಿಂದ, ಸರ್ಕಾರಿ ಯೋಜನೆಗಳು ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇಂತಹ ಸ್ಥಿತಿಯಲ್ಲಿ ಈ ಒಕ್ಕಲೆಬ್ಬಿಸಿ ಆಘಾತಕಾರಿಯಾಗಿ ಪರಿಣಮಿಸಿದೆ. ಸರ್ಕಾರಗಳಿಗೆ ಪ್ರಾಣಿಗಳ ಮೇಲಿರುವ ದಯೆಯ ಒಂದಿಷ್ಟು ಭಾಗ ಆದಿವಾಸಿಗಳ ಮೇಲೆ ಇರುವುದರಿಂದಲೂ ವಂಚಿತರಾಗಿದ್ದಾರೆ.

ಅರಣ್ಯ ಯೋಜನೆಗಳಿಗಾಗಿ, ಪ್ರಾಣಿ ಸಂರಕ್ಷಣೆ, ಎತ್ತಂಗಡಿ ಮಾಡುವುದನ್ನು ಶ್ಲಾಘಿಸುವ ಸಚಿವರು ಆದಿವಾಸಿಗಳ ಬದುಕಿನ ರಕ್ಷಣೆ ಆದ್ಯತೆಯನ್ನು ಪರಿಗಣಿಸಬೇಕು. ಕಾಡಿನಲ್ಲಿ ವಾಸವಿರುವವರ ಅರಣ್ಯ ಹಕ್ಕುಗಳು, ನೆಲೆಗಳ ಖಾತ್ರಿಗಳನ್ನು ಅಭದ್ರಗೊಳಿಸಬಾರದು. ಅವರಿಗೆ ಕೃಷಿಗಾಗಿ ಜಮೀನನ್ನು, ವಾಸಕ್ಕಾಗಿ ಮನೆ, ಪಟ್ಟಾಗಳನ್ನು ನೀಡಬೇಕು. ಮತ್ತು ನಾಗರೀಕ ಸೌಲಭ್ಯಗಳು, ಶಿಕ್ಷಣ, ಆರೋಗ್ಯ ಮುಂತಾದ ವ್ಯವಸ್ಥೆಗಳನ್ನು ಕಲ್ಪಿಸಬೇಕು ಆದಿವಾಸಿಗಳಿಗಾಗಿ ಮೀಸಲಿಟ್ಟ ಹಣವನ್ನು ಸದುಪಯೋಗಗೊಳಿಸಿ ಆ ವಿಭಾಗಗಳಾಗಿ ದೊರೆಯುವಂತಾಗಬೇಕು.


ಆದ್ದರಿಂದ ಕಾಡಿನಿಂದ ಅವರನ್ನು ಒಕ್ಕಲೆಬ್ಬಿಸುವುದನ್ನು ನಿಲ್ಲಿಸಿ, ಆದಿವಾಸಿಗಳ ಹಕ್ಕು, ಬದುಕನ್ನು ಸಂರಕ್ಷಿಸುವುದೇ ಆದ್ಯತೆಯಾಗಬೇಕು. ಆದರೆ ಅಮೇರಿಕಾದಂತಹ ಮುಂದುವರೆದ ರಾಷ್ಟ್ರಗಳು ಉಂಟು ಮಾಡುವ ಪರಿಸರ ಮಾಲಿನ್ಯ, ಪರಿಸರದ ಮೇಲಿನ ದೌರ್ಜನ್ಯಗಳ ಬಗ್ಗೆ ಚಕಾರವೆತ್ತದ ಸರ್ಕಾರ ಆದಿವಾಸಿಗಳನ್ನು ರಕ್ಷಿಸೀತೆ? ಆದ್ದರಿಂದ ಆದಿವಾಸಿ ಹಕ್ಕುಗಳಿಗೆ ಹೋರಾಟ ಅನಿವಾರ್ಯ.

ಭ್ರಷ್ಟಾಚಾರ: ಜನಾಂದೋಲನದ ಸ್ವರೂಪ

ಅಂತೂ ಇಂತೂ ಕರ್ನಾಟಕ ಜಾತ್ಯಾತೀತ ಜನತಾದಳ ಪಕ್ಷವು ರಾಜಧಾನಿಯ ಪೀಠದಿಂದ ಸ್ವಲ್ಪ ಕೆಳಗೆ ಇಳಿದಿದೆ. ರಾಜ್ಯದ ಬಿಜೆಪಿ ಸರ್ಕಾರದ ಭ್ರಷ್ಟಾಚಾರ ಭಾರಿ ಹಗರಣಗಳನ್ನು ದಾಖಲೆ ಸಮೇತ ಬಹಿರಂಗಪಡಿಸಿದರೂ ಅದನ್ನು ಕೇವಲ ಮಾಧ್ಯಮಗಳ ಮುಂದಿನ ಪ್ರತಾಪವಾಗಿತ್ತೇ ಹೊರತು ಜನರ ನಡುವೆ ಕೊಂಡೊಯ್ಯಲು ಅದು ನಿರಾಕರಿಸುತ್ತಿತ್ತು. ಈಗಲಾಗರೂ ಭ್ರಷ್ಟಾಚಾರವನ್ನು ಜನರ ಜಾಗೃತಿಯಿಂದ ಎದುರಿಸಬೇಕೆಂದು ಮೇ 6 ರಿಂದ ರಾಜ್ಯದಲ್ಲಿ ಮೂರು ಕಡೆಗಳಿಂದ ಜಾಥಾಗಳನ್ನು ಹೊರಡಿಸಿ ಕೊನೆಯಲ್ಲಿ 9ರಂದು ಮುಖ್ಯಮಂತ್ರಿ ತವರು ಜಿಲ್ಲೆ ಶಿವಮೊಗ್ಗದಲ್ಲಿ ಸಮಾವೇಶ ನಡೆಸಿತು. ಈ ಪ್ರಯತ್ನ ಸ್ವಾಗತಾರ್ಹ.

ಭಂಡತನ

ಭ್ರಷ್ಟಾಚಾರ ಎಂಬುದು ರಾಜ್ಯದಲ್ಲಿ, ರಾಷ್ಟ್ರದಲ್ಲಿ ಅತ್ಯಂತ ಹೆಚ್ಚು ಚರ್ಚಿತವಾಗುತ್ತಿರುವ ವಿಷಯ. ಇದರ ನಿವಾರಣೆಗೆ, ನಿಯಂತ್ರಣಕ್ಕೆ ಹಲವಾರು ಸಲಹೆ, ಸೂಚನೆಗಳೂ ಅಪಾರವೇ. ಲೋಕೋಭಿನ್ನ ರುಚಿಯಂತೆ ಅವರವರ ವರ್ಗ ದೃಷ್ಟಿಗೆ ಅನುಗುಣವಾಗಿ ಭ್ರಷ್ಟಾಚಾರವನ್ನು ಎದುರಿಸುವ ಮಾತುಕತೆಗಳೂ, ಕ್ರಮಗಳೂ ಇವೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ನಡೆಸಿದ ಹಗರಣಗಳು ದಾಖಲೆ ಸಮೇತ ಹೊರಬಂದರೂ, ನ್ಯಾಯಾಲಯ, ರಾಜ್ಯಪಾಲರು, ಲೋಕಾಯುಕ್ತರಂತಹ ಸಂಸ್ಥೆಗಳು ತೀವ್ರ ತರಾಟೆ ತೆಗೆದುಕೊಂಡರೂ ಕನಿಷ್ಠ ರಾಜೀನಾಮೆ ಕೊಟ್ಟು ಆರೋಪಗಳನ್ನು ಎದುರಿಸುವ ನೈತಿಕ, ನಾಗರೀಕ ವರ್ತನೆಗಳನ್ನೇ ಬಿಜೆಪಿ ಕೈಬಿಟ್ಟಿದೆ. ಹಲವು ಪ್ರಕರಣಗಳು ನ್ಯಾಯಾಲಯದ ಮೆಟ್ಟಿಲು ಹತ್ತಿದರೂ ಅವು ಒಂದು ಹಂತ ತಲುಪಲು ಹಲವು ಪ್ರಕ್ರಿಯೆಗಳ ಅಡ್ಡಿ ಎದುರಿಸಿ ಸಾಗಬೇಕಾಗುತ್ತದೆ. ಹೀಗಾಗಿ ಹೈಕಮಾಂಡ್ ಆಶೀರ್ವಾದವಿರುವ ಯಡಿಯೂರಪ್ಪ ಮತ್ತು ಅವರ ಕಂಪನಿಗೆ ಇದು ಜೀವದಾನದಂತಾಗಿದೆ. ಮಾತ್ರವಲ್ಲ ಹಗರಣಗಳನ್ನು ಸಮರ್ಥಿಸಿಕೊಳ್ಳುವ ಪರಿ ಅದರ ಮಹಾಭಂಡತನವೇ ಆಗಿದೆ.



ವಿಶಾಲ ವ್ಯಾಪ್ತಿ

ಹೀಗೆ ಎಲ್ಲವನ್ನೂ ಸಮರ್ಥಿಸಿಕೊಂಡು ಹೋಗುವ ಸರ್ಕಾರದ ದುಷ್ಟತನ, ವಂಚಕತೆಗಳ ವಿರುದ್ಧ ಪ್ರಜಾಪ್ರಭುತ್ವದಲ್ಲಿ ಇರುವ ಮಾರ್ಗ ಆ ವಿಷಯವನ್ನು ಜನರ ನಡುವೆ ಕೊಂಡೊಯ್ಯುವುದು. ಅವರನ್ನು ಜಾಗೃತಗೊಳಿಸಿ, ಜನಾಂದೋಲನ ಸಾರಿ, ರಾಜಕೀಯವಾಗಿ ಅಂತಹ ಸರ್ಕಾರ- ಪಕ್ಷ-ಪಕ್ಷಗಳನ್ನು ನಿರ್ಣಾಯವಾಗಿ ಸೋಲಿಸಿ ಬದಲಾವಣೆಗೆ ನಾಂದಿ ಹಾಡುವುದು. ಪ್ರತಿರೋಧ ಬೆಳೆಸುವುದು. ಇದಕ್ಕಾಗಿ ಎಡಶಕ್ತಿಗಳು ಸತತವಾಗಿ ಒತ್ತಾಯಿಸುತ್ತಿವೆ, ಹೋರಾಡುತ್ತಿವೆ.

ಈ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಪಕ್ಷಾತೀತವಾದ ವಿಶಾಲವಾದ ಒಂದು ಜನಾಂದೋಲನ ಸಾರುವುದಾಗಿ ಮಾಜಿ ಪ್ರಧಾನಿ ದೇವೇಗೌಡರವರು ವ್ಯಕ್ತಪಡಿಸಿದ ಇಂಗಿತ ಬುದ್ಧಿಜೀವಿಗಳು, ಸಾಮಾಜಿಕ ಕಾರ್ಯಕರ್ತರು, ಹಲವು ಸಂಘಟನೆಗಳಲ್ಲಿ ನಿರೀಕ್ಷೆಗಳನ್ನು ಹುಟ್ಟಿಸಿತ್ತು. ಆದರೆ ಸಮಾಲೋಚನಾ ಸಭೆಯ ನಂತರ ವಾಸ್ತವದಲ್ಲಿ ಅದು ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳುವ ಬದಲು, ಕುಗ್ಗುತ್ತಾ ಪ್ರಧಾನವಾಗಿ ಜೆಡಿ(ಎಸ್)ನ ನೇತೃತ್ವದ ಜಾಥಾವಾಗಿ ಅದಕ್ಕೆ ಕೆಲವು ಚಿಂತಕರು, ಸಂಘಟನೆಗಳ ಬೆಂಬಲ ಎಂಬತಾದದ್ದು ವಿಪರ್ಯಾಸ. ಹೀಗಾಗಿ ಒಂದು ಹಂತದಲ್ಲಿ ಒಳ್ಳೆಯ ಪ್ರಯತ್ನ ಎನ್ನುವಾಗಲೇ ಅದರ ವಿಶಾಲ ವ್ಯಾಪ್ತಿ .ಆಂದೋಲನವಾಗುವಲ್ಲಿ ವಿಫಲವೆಂದೇ ಹೇಳಬೇಕಾಗುತ್ತದೆ.

ನಾಪತ್ತೆ

ಇಂತಹ ಒಂದು ಜನಾಂದೋಲನ ನಡೆಸಬೇಕಾದರೆ ತೆರೆದ ಮನಸ್ಸು, ಪ್ರತಿ ಹಂತದಲ್ಲಿಯೂ ಎಲ್ಲರೊಂದಿಗೆ ಪೂರ್ವಭಾವಿ ಸಮಾಲೋಚನೆ, ಕಾಳಜಿಗಳು ಮುಖ್ಯವಾಗುತ್ತವೆ. ಇಲ್ಲಿ ಅವುಗಳ ಕೊರತೆ ಇತ್ತು.

ಹೀಗಿರುವಾಗಲೂ ಜೆಡಿ(ಎಸ್) ನೇತೃತ್ವದ ಮೂರು ಜಾಥಾಗಳು ಜನರ ನಡುವಿನಿಂದ ಒಳ್ಳೆ ಸ್ಪಂದನ ಪಡೆದಿವೆ. ಸಮಾರೋಪವೂ ಕೂಡ. ಆದರೆ ಈ ಜಾಥಾಗಳ ಸಭೆ, ಮಾಧ್ಯಮಗೋಷ್ಠಿಗಳಲ್ಲಿ ಕೇವಲ ರಾಜ್ಯದ ಬಿಜೆಪಿ ಭ್ರಷ್ಟಾಚಾರವನ್ನು ಮಾತ್ರ ಪ್ರಸ್ತಾಪಿಸಲಾಯಿತೇ ಹೊರತು ಕೇಂದ್ರದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಬ್ರಹ್ಮಾಂಡ ಭ್ರಷ್ಟಾಚಾರ- ಹಗರಣಗಳ ಪತ್ತೆಯೇ ಇರಲಿ.

ಕೇಂದ್ರ ಸರ್ಕಾರದ ಉದಾರೀಕರಣದ

ಪುಟ 4 ಕ್ಕೆ

ಕಾರ್ಟೂನ್ ಕಾರ್ನರ್



ರಾಯಚೂರು: ಭತ್ತಕ್ಕೆ ಬೆಂಬಲವೂ ಇಲ್ಲ ಬೆಲೆಯೂ ಇಲ್ಲ ಹೋರಾಟದ ಹಾದಿಗೆ ರೈತ ಬಾಂಧವರು

ಕರ್ನಾಟಕದಲ್ಲಿ 'ಭತ್ತದ ಕಣಜ' ವೆಂದು ಹೆಸರುವಾಸಿಯಾದ ರಾಯಚೂರು ಜಿಲ್ಲೆಯ ಭತ್ತದ ಬೆಳೆಗಾರರು ವರ್ಷದಲ್ಲಿ 2 ಸಾರಿ ಹೋರಾಟಕ್ಕೆ ಇಳಿಯುವುದು ಅನಿವಾರ್ಯವೆಂಬಂತೆ ಆಗಿದೆ. ನವೆಂಬರ್-ಡಿಸೆಂಬರ್, 2010 ಪರಿಣಾಮವಾಗಿ ಕೇಂದ್ರ ಸರ್ಕಾರದ ಬೆಂಬಲಿತ ಬೆಲೆ ಜೊತೆಯಲ್ಲಿ ರಾಜ್ಯ ಸರ್ಕಾರ ರೂ.100 ಕ್ವಿಂಟಾಲಿಗೆ ಪ್ರೋತ್ಸಾಹ ಧನ ನೀಡಿತು. ಇದರ ಜೊತೆಯಲ್ಲಿ ಎಪಿಎಂಸಿ ಗಳಲ್ಲಿ ಖರೀದಿ ಕೇಂದ್ರಗಳನ್ನು ಆರಂಭಿಸಿತು. ಇದರಿಂದಾಗಿ ಖಾಸಗಿ ಖರೀದಿದಾರರು ಸ್ಪರ್ಧಾತ್ಮಕ ಬೆಲೆಯಲ್ಲಿ ಭತ್ತ ಖರೀದಿಸುವಂತಾಗಿ ರೈತರ ಭತ್ತಕ್ಕೆ ಅಲ್ಪ ಬೆಲೆ ಸಿಗಲು ಸಾಧ್ಯವಾಗಿತ್ತು.

ಈ ವರ್ಷ ಮೇ ತಿಂಗಳ ಆರಂಭದಿಂದಲೇ ಕಟಾವು ಶುರುವಾಗಿದೆ. ಸಣ್ಣ ರೈತರು ಭತ್ತ ಸಂಗ್ರಹಿಸಿಟ್ಟು ಕೊಳ್ಳಲಾರರು. ಅವರಿಗೆ ಅವರ ಭತ್ತ ಈಗಾಗಲೇ ಮಾರುಕಟ್ಟೆಗೆ ಬರಲಾರಂಭಿಸಿದೆ. ಆದರೆ ಪ್ರೋತ್ಸಾಹಧನ ಘೋಷಿಸಿಲ್ಲ. ಹೀಗಾಗಿ ಮಾರುಕಟ್ಟೆಯಲ್ಲಿ ಖಾಸಗಿ ಖರೀದಿದಾರರ ನಿಗದಿಸಿದಂತೆ ರೂ.800ಕ್ಕೂ ರೂ.900ಕ್ಕೂ ಕ್ವಿಂಟಾಲ್ ಕೊಡುವ ಅನಿವಾರ್ಯ ಸ್ಥಿತಿಗೆ ರೈತರು ಇಳಿದಿದ್ದಾರೆ. ಈ ಬಗ್ಗೆ ಮನವಿ ಪತ್ರಗಳು ಮತ್ತು ಹೋರಾಟಗಳು ನಡೆದರೂ ಸರ್ಕಾರವೇ ಇಲ್ಲವೆಂಬಂತಾಗಿದೆ.

ಕೃಷಿ ಪ್ರಧಾನವಾದ ರಾಯಚೂರು ಜಿಲ್ಲೆಯಲ್ಲಿ ಭತ್ತವೇ ಪ್ರಮುಖ ಬೆಳೆಯಾಗಿದೆ. ಜಿಲ್ಲೆಯ 13 ಲಕ್ಷ ಸಾಗುವಳಿ ಯೋಗ್ಯ ಭೂಮಿಯಲ್ಲಿ ಸು.3.5ಲಕ್ಷದಿಂದ 4 ಲಕ್ಷ ಎಕರೆಗಳಲ್ಲಿ ಭತ್ತ ಹಾಕಲಾಗುತ್ತಿದೆ. ಸಣ್ಣ ಸಣ್ಣ ಹಿಡುವಳಿಗಳನ್ನು ಹೊಂದಿರುವ ಸುಮಾರು 2 ಲಕ್ಷ ರೈತರ ಜೊತೆ ಹತ್ತಾರು ಸಾವಿರ ಶ್ರೀಮಂತ ರೈತ ಹಿಡುವಳಿಗಳಲ್ಲಿ ಭತ್ತ ಕೊಯ್ಲಿಗೆ ಸಿದ್ಧವಾಗಿದೆ. ಇಷ್ಟೆಲ್ಲಾ ರೈತರ ಹಿತದ ಪ್ರಶ್ನೆ ಇದ್ದರೂ ಆಡಳಿತ ಪಕ್ಷದ ಜನಪ್ರತಿನಿಧಿಗಳಾಗಲಿ ಅಥವಾ ವಿರೋಧಪಕ್ಷದ ಜನಪ್ರತಿನಿಧಿಗಳಾಗಲು ಬಾಯಿ ಬಿಡುತ್ತಿಲ್ಲ.

ಸರ್ಕಾರದ ತುರ್ತುಮಧ್ಯಪ್ರವೇಶಕ್ಕೆ ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ,ರಾಯಚೂರು ಜಿಲ್ಲಾ ಸಮಿತಿ ಚಳುವಳಿಗಿಳಿದಿದೆ.

ಸುದ್ದಿ ಬಿಂಬ


ತಲೆಬುರುಡೆ: ಉಗ್ರಪಂಥದ ಶಿವಭಕ್ತರದು


'ಈಗಾಗಲೇ ತಲೆಬುರುಡೆಗಳು ಸುಮಾರು 638 ವರ್ಷಗಳ ಹಿಂದಿನವು ಎಂದು ಕಾರ್ಬನ್-14 ಡೇಟಿಂಗ್ ತಂತ್ರಜ್ಞಾನದಿಂದ ಗೊತ್ತಾಗಿದೆ. ಅಂದರೆ 13ನೇ ಶತಮಾನದ ತಲೆಬುರುಡೆಗಳಿವು. 13ನೇ ಶತಮಾನದಲ್ಲಿ ಅಣ್ಣಿಗೇರಿಯಲ್ಲಿ ಉಗ್ರ ಪಂಥದ ವೀರ ಗೊಗ್ಗಿದೇವ ಎಂಬುವನಿದ್ದ. ಉಗ್ರ ಶಿವಭಕ್ತ ಸಂಪ್ರದಾಯದವರಾದ ಇವರು, ದೇವರನ್ನು ಸಂತೋಷಪಡಿಸಲು ಆತ್ಮಾರ್ಪಣೆ ಮಾಡಿಕೊಳ್ಳುತ್ತಿದ್ದರು.

ಇವರು ವೀರ ಮಾಹೇಶ್ವರ ಎಂಬ ಸಂಘಟನೆಯ ಕಟ್ಟಿಕೊಂಡು ಉಗ್ರಪಂಥದ ಭಕ್ತರು ಎಂದು ಕರೆಸಿಕೊಂಡಿದ್ದರು. ಈ ಸಂಘಟನೆಯವರು ದೇವರಿಗೆ ತಮ್ಮ ರುಂಡಗಳನ್ನು ಅರ್ಪಿಸುತ್ತಿದ್ದರು.ಹರಿಹರನ ಕೋವೂರ ಬ್ರಹ್ಮಯ್ಯನ ರಗಳೆಯಲ್ಲಿ ಆವರ ಅನುಯಾಯಿಗಳು, 300 ಜನರು ದೇವರ ಮುಂದೆ ರುಂಡ ಹಾರಿಸಿಕೊಂಡ ಬಗ್ಗೆ ಉಲ್ಲೇಖವಿದೆ. ಅಣ್ಣಿಗೇರಿಯಲ್ಲಿ ವೀರ ಗೊಗ್ಗಿದೇವನ ಪರಿವಾರದವರು ಸಹ ತಮ್ಮ ರುಂಡಗಳನ್ನು ದೇವರಿಗೆ ಅರ್ಪಿಸಿರಬಹುದು'

'ಅಣ್ಣಿಗೇರಿ ತಲೆಬುರುಡೆಗಳು ಯಾವುದೇ ದಾಳಿಗಳಲ್ಲಿ ಹತರಾದವರದ್ದಲ್ಲ. ವೀರ ಗೊಗ್ಗಿದೇವನ ಶಾಸನದಲ್ಲಿ ಇಂಥ ಪರಂಪರೆಯ ಬಗ್ಗೆ ವಿವರಗಳಿವೆ. ಶ್ರೀಶೈಲದ ಮಲ್ಲಿಕಾರ್ಜುನ ದೇವಾಲಯದ ಆವರಣದ ಗೋಡೆ ಮೇಲೆ ಭಕ್ತರು ಶಿರಚ್ಛೇದ ಮಾಡಿಕೊಳ್ಳುವ, ದೇವರಿಗೆ ಅರ್ಪಿಸುವುದಾಗಿ ಅವುಗಳನ್ನು ಸಾಲಾಗಿಟ್ಟ ಶಿಲ್ಪಗಳಿವೆ. ಇವು ಅಣ್ಣಿಗೇರಿಯಲ್ಲಿ ಸಾಲಾಗಿಟ್ಟಿರುವ ತಲೆಬುರುಡೆಗಳನ್ನು ಹೋಲುತ್ತದೆ'

- ವಿಶ್ರಾಂತ ಕುಲಪತಿ ಡಾ: ಎಂ.ಎಂ.ಕಲಬುರ್ಗಿ






ಭ್ರಷ್ಟಾಚಾರ: ಜನಾಂದೋಲನ...

ಪುಟ 3 ರಿಂದ

ಆರ್ಥಿಕ-ರಾಜಕೀಯ ನೀತಿಗಳನ್ನು ಬಯಲು ಗೊಳಿಸದೇ ಭ್ರಷ್ಟಾಚಾರಕ್ಕೆ ಪರ್ಯಾಯ ಕೊಡುವುದಾದರೂ ಹೇಗೆ? ಅದರಲ್ಲಿಯೂ ಭಾರತದ ಇತಿಹಾಸದಲ್ಲಿ ಎಂದೂ ಕಂಡರಿಯದಂತಹ ಹಗರಣಗಳಲ್ಲಿ ಮನಮೋಹನ್ ಸಿಂಗ್ ಸರ್ಕಾರ ಭಾಗಿಯಾಗಿರುವಾಗ ಅದನ್ನು ಮರೆ ಮಾಚಲಾದರೂ ಹೇಗೆ ಸಾಧ್ಯ? ಇಂದು ಬಿಜೆಪಿ ನಡೆಸುತ್ತಿರುವ ಭ್ರಷ್ಟಾಚಾರ, ಭಂಡ ಸಮರ್ಥನೆಗಳು ಇದೇ ಸರಣಿಯಲ್ಲಿವೆಯಲ್ಲವೇ? ಅಂದರೆ ಕಾಂಗ್ರೆಸ್ ಬಗೆಗಿನ ಜೆಡಿ(ಎಸ್)ನ ಹೊಯ್ದಾಟದ ದೃಷ್ಟಿ ಪರಿಣಾಮವೇ ಕೇಂದ್ರದತ್ತ ಬೆರಳು ಎತ್ತದಿರಲು ಕಾರಣವಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಭ್ರಷ್ಟಾಚಾರದ ವಿರುದ್ಧ ರ್‍ಯಾಲಿ ಮಾಡುವಾಗ ತಮ್ಮನ್ನು 'ವಿಶ್ವಾಸಕ್ಕೆ' ತೆಗೆದುಕೊಳ್ಳಲಿಲ್ಲ ಎಂಬ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರ ಹೇಳಿಕೆಗಾಗಿ, ಅದರ ರಾಜಕೀಯ ವೈತ್ರಿಯ ಹಂಬಲವನ್ನೇ ತೋರಿಸುತ್ತದೆ.



ಕಾಣದ ದಾರಿ!

ಇದೇ ಹೊತ್ತಿನಲ್ಲಿ ಬಹಳ ವಿಚಿತ್ರವೆಂದರೆ ಭ್ರಷ್ಟಾಚಾರಾಗ್ರೇಸರ ನಾದ ಕಾಂಗ್ರೆಸ್ ಪಕ್ಷ ರಾಜ್ಯಪಾಲರ ಮನೆಗೆ ರ್‍ಯಾಲಿ ನಡೆಸಿದ್ದು, ಭ್ರಷ್ಟಾಚಾರಿ ರಾಜ್ಯ ಸರ್ಕಾರವನ್ನು ವಜಾ ಮಾಡಿ ಎಂದು ಕೇಂದ್ರಕ್ಕೆ ಶಿಫಾರಸ್ಸು ಮಾಡಿ ಮನವಿಕೊಟ್ಟಿದ್ದು ಒಂದು ಹಾಸ್ಯಾಸ್ಪದ ಪ್ರಸಂಗ. ಕೆಪಿಸಿಸಿ ಅಧ್ಯಕ್ಷರೇ ಹೇಳಿಕೊಂಡಂತೆ 'ಭ್ರಷ್ಟಾಚಾರದ ವಿರುದ್ಧ ಹೋರಾಟ ಬರೀ ಜೆಡಿ(ಎಸ್)ನದ್ದೆ ಅಲ್ಲ'ವಂತೆ. ಅವರೂ ಸುಸ್ತಾಗು ವಷ್ಟು ಹೋರಾಡಿದ್ದಾರಂತೆ. ಅದರರ್ಥ ಜೆಡಿ(ಎಸ್) ನೊಂದಿಗೆ ಸ್ಪರ್ಧೆಗಳಿಯುವ ಇರಾದೆ ಬಿಟ್ಟರೆ ಪ್ರಾಮಾಣಿಕವಾಗಿ ಹೋರಾಡುವ ಆಸಕ್ತಿಯಾಗಲೀ, ರಾಜಕೀಯ ಇಚ್ಛಾ ಶಕ್ತಿಯೇ ಆಗಲಿ ಇಲ್ಲವೇ ಇಲ್ಲ. ಆದ್ದರಿಂದಲೇ ಜನರ ನಡುವೆ ಹೋಗಲು ಸಾಧ್ಯವಿಲ್ಲದೇ ಪ್ರಜ್ಞಾಪ್ರಭುತ್ವದ ವ್ಯವಸ್ಥೆಯಲ್ಲಿ ಅರಮನೆಯ ಪಿತೂರಿಗಳಿಗೆ ಅವಕಾಶ ನೀಡಕೂಡದು ಎಂಬ ಕನಿಷ್ಠ ಕಾಳಜಿ ಅದಕ್ಕಿಲ್ಲ, ಆದರೆ ಅದನ್ನೇ ಅವಲಂಬಿಸಿದೆ. ಈಗಲೂ ರಾಜಭವನಕ್ಕೆ ಸದಾ ಸುತ್ತು ಹಾಕುತ್ತಿದ್ದು, ಲಕ್ಷಾಂತರ ಕೋಟಿ ರೂಪಾಯಿಗಳ ನುಂಗಿದ ಹಗರಣದಲ್ಲಿರುವ ಕಾಂಗ್ರೆಸ್‌ಗೆ ಭ್ರಷ್ಟಾಚಾರದ ವಿರುದ್ಧ ಹೋರಾಡಲು ನೈತಿಕ ಶಕ್ತಿಯಾದರೂ ಎಲ್ಲಿದೆ? ಜನರ ನಡುವೆ ಹೋದರೆ ಜನ ಕೇಳದೇ ಬಿಟ್ಟಾರೆಯೇ? ವಿರೋಧಪಕ್ಷಕ್ಕೆ ಈ ನಟನೆ ಬಿಟ್ಟರೆ ಬೇರೆ ದಾರಿಯೇ ಕಾಣುತ್ತಿಲ್ಲ.

ಯಡಿಯೂರಪ್ಪ ಆಸೆ!

ಈ ಪ್ರಸಂಗದಲ್ಲಿ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಬಿಜೆಪಿ ನಾಯಕರ ಅಭಿಪ್ರಾಯ, ಆಕ್ರೋಶ ತೀವ್ರ ಖಂಡನಾರ್ಹ. ಹಿಂದಿನಂತೆಯೇ ಅವರು 'ಜಾತ್ಯಾತೀತ ಜನತಾದಳ ಸರ್ವನಾಶವಾಗಲೀ ಕಾಂಗ್ರೆಸ್ ಬೆಳೆಯಲಿ' ಎಂಬ ಕುತ್ಸಿತದ ಮಾತನ್ನಾಡಿದ್ದಾರೆ. ದೇಶದಲ್ಲಿ ಎಡಶಕ್ತಿಗಳನ್ನು ಒಳಗೊಂಡ ಮೂರನೆಯ ಜಾತ್ಯಾತೀತ ಶಕ್ತಿಗಳ ಪರ್ಯಾಯವನ್ನು ಸಹಿಸದ ಕಾಂಗ್ರೆಸ್ ಮತ್ತು ಬಿಜೆಪಿಗಳ ಕನಸು ಅದೇ ಅಲ್ಲವೇ? ಈ ಎರಡು ಲೂಟಿಖೋರ, ವಂಚಕ ರಾಜಕೀಯ ಪಕ್ಷಗಳ ನಡುವೆಯೇ ರಾಜಕೀಯ ಶಕ್ತಿಗಳ ದೃವೀಕರಣ ಆಗಬೇಕೆಂದು ಅಮೇರಿಕಾ ಒಳಗೊಂಡು ಜಾಗತಿಕ ಹಾಗೂ ದೇಶೀಯ ಬಂಡವಾಳ ಗಾರರ ಹಂಬಲಕ್ಕೆ ಅನುಗುಣವಾಗಿಯೇ ಯಡಿಯೂರಪ್ಪನವರ ಆಶೆಯೂ ಇದೆ. ಆದರೆ ಜನ ಇದನ್ನು ತಿರಸ್ಕರಿಸುತ್ತಲೇ ಬಂದಿದ್ದಾರೆ.

ಇಂದು ಭ್ರಷ್ಟಾಚಾರ ವಿರುದ್ಧ ಕೇವಲ ಮೇಲ್ ಮೇಲಷ್ಟೇ ಮಾತನಾಡದೇ ಜನ ಜೀವನದ ಜೊತೆಗಿನ ಸಂಬಂಧಗಳು ಮತ್ತು ಅದು ಈ ವ್ಯವಸ್ಥೆಯೊಳಗೆ ಆಳ ಬೇರಿಳಿದಿರುವುದನ್ನು ಕಿತ್ತೆಸೆವ ದಿಕ್ಕಿನಲ್ಲಿ ನಿರ್ದಿಷ್ಟ ಪ್ರಕರಣಗಳೊಂದಿಗೆ ಆಂದೋಲನ ಅಗತ್ಯ.

ಈಗಾಗಲೇ ರಾಜ್ಯದಲ್ಲಿ ಹಲವಾರು ಪ್ರಗತಿಪರ ಶಕ್ತಿಗಳು ಭ್ರಷ್ಟಾಚಾರದ ವಿರುದ್ಧ ಚಳುವಳಿಗೆ ಇಳಿದಿವೆ. ಇದೇ ಏಪ್ರಿಲ್ 19 ರಂದು ರಾಜ್ಯದಾದ್ಯಂತ ಸಿಪಿಐ(ಎಂ) ನೇತೃತ್ವದಲ್ಲಿ 175 ತಾಲ್ಲೂಕುಗಳ ಪೈಕಿ 126 ತಾಲ್ಲೂಕುಗಳಲ್ಲಿ ಸರ್ಕಾರಿ ತಾಲ್ಲೂಕು ಕಛೇರಿ ಪಿಕೆಟಿಂಗ್ ನಡೆದಿದೆ. ಸಿಪಿಐ ಸಹ ಪ್ರತಿಭಟಿಸಲು ಕರೆ ನೀಡಿತ್ತು.

ಸಮುದಾಯ ಸಂಘಟನೆ ರಾಜ್ಯವ್ಯಾಪಿ ಸಾಂಸ್ಕೃತಿಕ ಜಾಥಾ ಹಮ್ಮಿಕೊಂಡಿದೆ. ಹಲವಾರು ಬುದ್ಧಿಜೀವಿಗಳು, ಜನಪರ ಹೋರಾಟಗಾರರು, ಸಾಮಾಜಿಕ ಕಾರ್ಯಕರ್ತರುಗಳ ಕೆಲ ಪ್ರಯತ್ನಗಳೂ ಆರಂಭಗೊಂಡಿವೆ. ಅಗತ್ಯವಿರುವುದು ಒಂದು ಸ್ಪಷ್ಟವಾದ ಸೈದ್ಧಾಂತಿಕ, ರಾಜಕೀಯ ನಿಲುವು ಗುರಿ. ಇಲ್ಲವಾದಲ್ಲಿ ಈ ಪ್ರಯತ್ನಗಳು ಸಾಂಕೇತಿಕ ಮಟ್ಟಕ್ಕೆ ನಿಂತುಬಿಟ್ಟು ಕೊನೆಯುಸಿರೆಳೆಯುತ್ತವೆ.

ಬುಜವಳ್ಳಿ ದಲಿತರ ಮೇಲೆ ಹಲ್ಲೆ, ದೌರ್ಜನ್ಯ ಸಾಮಾಜಿಕ ಬಹಿಷ್ಕಾರ

ಏಪ್ರಿಲ್ 16, 2011 ರಂದು ಊರಿನಲ್ಲಿ ನಡೆಯುತ್ತಿದ್ದ ದೇವರ ಪೂಜಾ ಮೆರವಣಿಗೆ ಸಂದರ್ಭದಲ್ಲಿ ತಮಟೆ ಬಡಿಯುತ್ತಿದ್ದ ದಲಿತ ಯುವಕನ ಕಾಲು ಆಕಸ್ಮಿಕವಾಗಿ ಸೋಕಿದ್ದನ್ನೇ ನೆಪಮಾಡಿ ಪೇಶಾಚಿಕ ದೌರ್ಜನ್ಯ ನಡೆಸಿದ್ದಾರೆ. ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಬಂದ ನೊಂದ ದಲಿತರನ್ನು ದಾಖಲು ಮಾಡಿಕೊಂಡರೆ ಕೇಸು ಬಲಗೊಳ್ಳುತ್ತದೆ ಎಂದು ರಾಜಕೀಯ ಪ್ರಭಾವ ಬಳಸಿ ಒಳರೋಗಿಯಾಗಿ ಸೇರಿಸಿಕೊಳ್ಳಲು ನಿರಾಕರಿಸಿದ್ದಾರೆ.

ಟಿ.ಯಶವಂತ

ಮದ್ದೂರು ತಾ: ಕಾಡಕೂತ್ತನಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ ಬುಜವಳ್ಳಿ, ಮನುಷ್ಯರನ್ನು ಪ್ರಾಣಿಗಳಿಗಿಂತ ಕೀಳಾಗಿ ಕಾಣುವ ನಗ್ನ ಅಸ್ಪೃಶ್ಯತಾ ಆಚರಣೆಗೆ ಸಾಕ್ಷಿಯಾಗಿದೆ.


65 ದಲಿತ ಕುಟುಂಬಗಳು ವಾಸವಾಗಿರುವ ಈ ಹಳ್ಳಿಯಲ್ಲಿ ಒಟ್ಟು 400 ಕುಟುಂಬಗಳಿವೆ. ದಲಿತ ಕುಟುಂಬಗಳಲ್ಲಿ ಭೂ ರಹಿತರೇ ಸುಮಾರು 60 ಕುಟುಂಬದಷ್ಟಿದ್ದಾರೆ.

ಏಪ್ರಿಲ್ 16, 2011 ರಂದು ಊರಿನಲ್ಲಿ ನಡೆಯುತ್ತಿದ್ದ ದೇವರ ಪೂಜಾ ಮೆರವಣಿಗೆ ಸಂದರ್ಭದಲ್ಲಿ ತಮಟೆ ಬಡಿಯುತ್ತಿದ್ದ ದಲಿತ ಯುವಕನ ಕಾಲು ಆಕಸ್ಮಿಕವಾಗಿ ಸೋಕಿದ್ದನ್ನೇ ನೆಪವಾಡಿ ಪೇಶಾಚಿಕ ದೌರ್ಜನ್ಯ ನಡೆಸಿದ್ದಾರೆ.

ಲಿಂಗಾಯುತ ಜಾತಿಗೆ ಸೇರಿದ ವ್ಯಕ್ತಿ ದಲಿತ ಯುವಕನ ಕಾಲು ಸೋಕಿತು ಎಂದು ತಕ್ಷಣವೇ ಕಪಾಳಕ್ಕೆ ಹೊಡೆದಿದ್ದಾನೆ. ಪೆಟ್ಟು ತಿಂದ ಯುವಕ ಪ್ರತಿಭಟಿಸಿದ ಎನ್ನುವ ಕಾರಣಕ್ಕೆ ಇಡೀ ಕಾಲೋನಿಯ ಮನೆಗಳಿಗೆ ನುಗ್ಗಿ ಕಲ್ಲು ತೂರಾಟ ನಡೆಸಿ ಜಖಂ ಮಾಡಲಾಗಿದೆ.

ಈ ಸಂಬಂಧ ಗ್ರಾಮದ ಹಿರಿಯರು ಹೇಳಿದಂತೆ ದಲಿತ ಸಮುದಾಯ ಅಲ್ಲಿಗೆ ಈ ವಿಷಯುವನ್ನು ಮರೆತು ತಮ್ಮ ತಮ್ಮ ಕೆಲಸಗಳಲ್ಲಿ ನಿರತವಾಗಿವೆ. ಕಪಾಳಕ್ಕೆ ಏಟು ತಿಂದವನ ಬೆಂಬಲಕ್ಕೆ ಬಂದ ಯುವಕರ ಮೇಲೆ ಕಣ್ಣಿಟ್ಟ ಜಾತಿವಾದಿಗಳು ಅಕ್ರಮ ಕೂಟ ಸೇರಿ. ಸಂಚು ಮಾಡಿ ಮಾರಾಣಾಂತಿಕ ಹಲ್ಲೆ, ಮಹಿಳೆಯರ ಮೇಲೆ ಪೈಶಾಚಿಕ ದೌರ್ಜನ್ಯ ನಡೆಸಿವೆ.

ಏಪ್ರಿಲ್ 18, 2011ರಂದು 40 ವರ್ಷದ ಹಿಂದೆ ಸರ್ಕಾರ ನೀಡಿದ್ದ ಆಶ್ರಯ ಮನೆ-ನಿವೇಶನ ಸಂಬಂಧ 10 ಮನೆಗಳನ್ನು ನೆಲಸಮ ಮಾಡಲು ತಾಲ್ಲೂಕು ಮುನ್ಸಿಪಲ್ ನ್ಯಾಯಾಲಯ ನೀಡಿದ್ದ ಆದೇಶದ ವಿರುದ್ಧ ಜಿಲ್ಲಾಧಿಕಾರಿ ಮಧ್ಯ ಪ್ರವೇಶಕ್ಕೆ ಬಹುತೇಕ ದಲಿತರು ಮನವಿ ಮಾಡಿಕೊಳ್ಳಲು ಮಂಡ್ಯಕ್ಕೆ ಹೋಗಿದ್ದ ಸಂದರ್ಭದಲ್ಲಿ ಊರಿನಲ್ಲಿ ಇದ್ದ ನಾಗೇಂದ್ರ ಶಿವರಾಜು, ಪ್ರತಾಪ್ ಎಂಬ ದಲಿತ ಯುವಕರನ್ನು ನ್ಯಾಯ ಪಂಚಾಯ್ತಿ ಸೇರಿಸಿದ್ದೇವೆ ಎಂದು ಹೇಳಿ ಕರೆದುಕೊಂಡು ಮಾರಾಣಾಂತಿಕ ಹಲ್ಲೆ ಮಾಡಿ ಕಾಲಿನಲ್ಲಿ ತುಳಿಯಲಾಗಿದೆ. ಹಲ್ಲೆ ನಡೆಯುತ್ತಿರುವ ಸುದ್ದಿ ತಿಳಿದು ಇವರ ರಕ್ಷಣೆಗೆ ಬಂದ ಗೌರಮ್ಮ ಮತ್ತು ಕುಳ್ಳಮ್ಮ ಎಂಬುವವರನ್ನು ಮನಸ್ಸೋ ಇಚ್ಛೆ ಬಡಿದು ಸೀರೆ ಹರಿದು ತುಳಿದು ಅಶ್ಲೀಲ ಬೈಗುಳಗಳಿಂದ ನಿಂದಿಸಲಾಗಿದೆ.



ತುಳಿತಕ್ಕೊಳಗಾಗುತ್ತಿರುವ ದಲಿತರು
(ಈ ಚಿತ್ರ ಇಲ್ಲಿರುವ ಲೇಖನದ ಘಟನೆಗೆ ಸಂಬಂಧಿಸಿದ್ದಲ್ಲ)

ಈ ಘಟನೆ ನಂತರ ಭಾರತಿನಗರ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ತಾ: ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಸೇರಲಾಯಿತು. ಗಂಭೀರ ಸ್ವರೂಪದ ಕಾರಣಕ್ಕೆ ಇವರನ್ನು ಹೆಚ್ಚಿನ ಚಿಕಿತ್ಸೆಗೆ ಜಿಲ್ಲಾಸ್ಪತ್ರೆಗೆ ಕಳುಹಿಸಲಾಯಿತು.

ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಬಂದ ನೊಂದ ದಲಿತರನ್ನು ದಾಖಲು ಮಾಡಿಕೊಂಡರೆ ಕೇಸು ಬಲಗೊಳ್ಳುತ್ತದೆ ಎಂದು ರಾಜಕೀಯ ಪ್ರಭಾವ ಬಳಸಿ ಒಳರೋಗಿಯಾಗಿ ಸೇರಿಸಿಕೊಳ್ಳಲು ನಿರಾಕರಿಸಿದ್ದಾರೆ. ತೀವ್ರವಾದ ಪೆಟ್ಟು ಆಗಿದ್ದರೂ, ಕಿವಿ, ತಲೆಯಲ್ಲಿ ರಕ್ತ ಬರುವಂತಹ ಪ್ರಜ್ಞೆ ತಪ್ಪಿದಂತಹ ಸ್ಥಿತಿ ತಲುಪಿರುವ ರೋಗಿಗಳನ್ನು ಸೂಕ್ತ ವೈದ್ಯಕೀಯ ಚಿಕಿತ್ಸೆ ನೀಡಿಲ್ಲ. ಈ ವಿಷಯ ತಿಳಿದ ಸಿಪಿಐ(ಎಂ) ಮತ್ತಿತರರ ಒತ್ತಡದ ಪರಿಣಾಮವಾಗಿ ಒಳರೋಗಿಗಳನ್ನಾಗಿ ಪರಿಗಣಿಸಲಾಯಿತು.

ದೌರ್ಜನ್ಯಕಾರರ ಪರ ನಿಂತ ಪೋಲೀಸರು, ಸಮಾಜ ಕಲ್ಯಾಣ ಇಲಾಖೆ:


ದಲಿತರಿಗೆ ರಕ್ಷಣೆ ನೀಡಬೇಕಾದ ಪೋಲೀಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ದೌರ್ಜನ್ಯಕಾರರ ಪರವಾಗಿ ನಿಂತವು. ಎಫ್.ಐ.ಆರ್. ಆದ 11 ದಿನ ಕಳೆದರೂ ನೊಂದವರಿಗೆ ಪರಿಹಾರ ನೀಡದೆ ಮೇಲ್ಜಾತಿಗಳ ಪರ ನಿಂತರು. ಈ ದಲಿತ ವಿರೋಧಿ ನೀತಿ ಪ್ರತಿಭಟಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ ಪತ್ರಿಕಾಗೋಷ್ಠಿ ನಡೆಸಿ ಪಾದಯಾತ್ರೆ ನಡೆಸುವ ಬಗ್ಗೆ ಚರ್ಚಿಸಿದ ಮೇಲೆ ಸಮಾಜ ಕಲ್ಯಾಣ ಮಂತ್ರಿ ಭೇಟಿ ನೀಡಿದರು.

ಪೇಜಾವರರ ಭೇಟಿ-ಕೇಸು ವಾಪಸ್ಸು ತೆಗೆಯಲು ಉಪದೇಶ:

ಜಿಲ್ಲಾದ್ಯಂತ ತೀವ್ರ ಖಂಡನೆ-ಪ್ರತಿಭಟನೆಗಳು ಬಂದ ನಂತರ ಬಿಜೆಪಿ ಮುಖಂಡರ ಆಹ್ವಾನದ ಮೇರೆಗೆ ಬುಜವಳ್ಳಿಗೆ ಬಂದ ಪೇಜಾವರ ಶ್ರೀ ಗಳು ಸಾಮರಸ್ಯದ ಬದುಕಿಗೆ ಸಹಾಯ ವಾಗಲು ದಲಿತ ದೌರ್ಜನ್ಯದ ಕೇಸು ವಾಪಸ್ಸು ತೆಗೆಯುವಂತೆ ದಲಿತರಿಗೆ ಬುದ್ಧಿ ಹೇಳಿದರೆ ಹೊರತು ಊರಿನಲ್ಲಿರುವ ಅಸ್ಪೃಶ್ಯತೆ ಆಚರಣೆಯನ್ನು ತಕ್ಷಣ ನಿಲ್ಲಿಸುವಂತೆ ಆಗ್ರಹಿಸಲಿಲ್ಲ. ಇಷ್ಟೆಲ್ಲಾ ಘಟನೆಗಳ ಹಿನ್ನಲೆಯಲ್ಲಿ ಇಲ್ಲಿತನಕ ಸಹಿಸಿದ್ದು, ಸಾಕು ಇನ್ನು ಮುಂದೆ ಯಾವುದೇ ಕಾರಣಕ್ಕೂ ದೌರ್ಜನ್ಯಕ್ಕೆ ಮಣಿಯಬಾರದು ಎಂದು ಗಟ್ಟಿ ತೀರ್ಮಾನ ಮಾಡಿ ಹೋರಾಟದ ಹಾದಿಯಲ್ಲಿ ಮುನ್ನಡೆಯುತ್ತಿದ್ದಾರೆ ಇಲ್ಲಿನ ದಲಿತರು.

ದಲಿತರಿಗೆ ಬುದ್ಧಿ ಹೇಳಿದ ದಲಿತ ಮಂತ್ರಿ !

ಹಲ್ಲೆ-ದೌರ್ಜನ್ಯ, ಸಾಮಾಜಿಕ ಬಹಿಷ್ಕಾರದಿಂದ ಅಪಾರ ನಷ್ಟ-ನೋವು ಅನುಭವಿಸಿದ ದಲಿತರು, ದಲಿತ ಮಂತ್ರಿ ಎ.ನಾರಾಯಣಸ್ವಾಮಿ ಭೇಟಿ ಹಿನ್ನಲೆಯಲ್ಲಿ ಅಪಾರ ನಿರೀಕ್ಷೆ ಇಟ್ಟುಕೊಂಡಿದ್ದರು. ಆದರೆ ನೊಂದ ದಲಿತರಿಗೆ ಸಾಂತ್ವನ ಸಹಾಯ ನ್ಯಾಯದ ರಕ್ಷಣೆಗೆ ನಿಲ್ಲಬೇಕಿದ್ದ ಮಂತ್ರಿ ದೌರ್ಜನ್ಯ, ಸಾಮಾಜಿಕ ಬಹಿಷ್ಕಾರವನ್ನು "ಸಣ್ಣ ವಿಷಯ ದೊಡ್ಡದು ಮಾಡಬೇಡಿ" ಎಂದು 'ಬುದ್ದಿ' ಹೇಳಿದರು.



ಕರ್ತವ್ಯ ಲೋಪವೆಸಗಿದ ಸಮಾಜ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ, ಪೋಲೀಸ್ ಇಲಾಖೆ, ಆಸ್ಪತ್ರೆಯಲ್ಲಿ ಆದ ನೆರವು ನಿರಾಕರಣೆ ಅಸಹಕಾರವನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಕುಡಿಯುವ ನೀರು ಪೂರೈಕೆಯಲ್ಲಿ ತಾರತಮ್ಯ, ರೇಷನ್ ವಿತರಣೆಯಲ್ಲಿ ಪ್ರತ್ಯೇಕ ಸಾಲಿನಲ್ಲಿ ನಿಲ್ಲಬೇಕಿರುವುದು, ಸವರ್ಣೀಯರ ಬೀದಿಯಲ್ಲಿರುವ ಬೋರ್‌ವೆಲ್ ಬಳಸಲು ಅವಕಾಶ ನಿರಾಕರಣೆ ಮತ್ತಿತರ ಅಸ್ಪೃಶ್ಯ ಆಚರಣೆ, ಸಾಮಾಜಿಕ ಬಹಿಷ್ಕಾರದ ಬಗ್ಗೆ ಗಮನ ಸೆಳೆದಾಗ ಸರಿಹೋಗುವ ತನಕ ಸಹಿಸಿಕೊಂಡು ಇರುವಂತೆ ಪಾಠ ಹೇಳಿದ ಸಚಿವರು ಭೇಟಿಯ ಕಾರಣಕ್ಕೆ ದಲಿತ ಸ್ತ್ರೀ ಶಕ್ತಿ ಸಂಘ ಒಂದಕ್ಕೆ 1 ಲಕ್ಷ ರೂ. ಸಬ್ಸಿಡಿ ಸಾಲ ನೀಡಿ 2 ಕೊಳವೆ ಬಾವಿ ಹಾಕಿಸುವ, ಹಸು ಸಾಲ ನೀಡುವ ಭರವಸೆ ನೀಡಿ ಹೊರಟು ಹೋದರು. ತಮ್ಮ ಭೇಟಿಯ ಸಂದರ್ಭದಲ್ಲಿ ನೊಂದ ಜನ ಸಾಮಾಜಿಕ ಬಹಿಷ್ಕಾರದ ಬಗ್ಗೆ ದೂರು ಹೇಳುತ್ತಾರೆ ಎನ್ನುವ ಕಾರಣಕ್ಕೆ ಈ ಸಂಬಂಧ ತಮ್ಮ ಬಿಜೆಪಿ ಸರ್ಕಾರದ ದಲಿತ ವಿರೋಧಿ ನೀತಿ ಬಯಲಾಗುವ ಕಾರಣದಿಂದ ಮಾಧ್ಯಮಗಳನ್ನು ದೂರ ಇಟ್ಟಿದ್ದರು.

ಪ್ರತಿಭಟನೆ

ಈ ಅಮಾನವೀಯ ದೌರ್ಜನ್ಯವನ್ನು ತಕ್ಷಣವೇ ಖಂಡಿಸಿ ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಸಿಪಿಐ(ಎಂ) ಮಂಡ್ಯ ಜಿಲ್ಲಾ ಸಂಘಟನಾ ಸಮಿತಿ ಪ್ರತಿಭಟನಾ ಧರಣಿ ನಡೆಸಿತು. ಈ ಪ್ರತಿಭಟನೆ ಇಡೀ ಜಿಲ್ಲೆಗೆ ದೌರ್ಜನ್ಯ ನಡೆದಿರುವುದನ್ನು ಬಯಲು ಮಾಡಿತು. ಈ ಒತ್ತಡದ ಕಾರಣದಿಂದ ಕೆಲವು ಆರೋಪಿಗಳನ್ನು ಬಂಧಿಸಲಾಯಿತು. ಕೇಸು ದಾಖಲಿಸಿದ್ದರಿಂದ ಕೆರಳಿದ ಜಾತಿವಾದಿಗಳು ಸಾಮಾಜಿಕ ಬಹಿಷ್ಕಾರ ಹಾಕಿದರು.

ವರ್ಗ ಹೋರಾಟದ ಕುಲುಮೆಯಲ್ಲಿ ಬೆಳೆದು ಬಂದ ದ.ಕ. ಜಿಲ್ಲೆಯ ಶ್ರಮ ಜೀವಿಗಳು

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಶ್ರಮಿಕ ವರ್ಗದ ಚಳುವಳಿಯ ಚರಿತ್ರೆಯಲ್ಲಿ ರೋಮಂಚನಕಾರಿ ಘಟನಾವಳಿಗಳಿವೆ. ಚರಿತ್ರೆಯ ಸ್ಫೂರ್ತಿ ವರ್ತಮಾನಕ್ಕಾಗಿ

ಬಿ.ಮಾಧವ

ವರ್ಗ ಹೋರಾಟದ ಉನ್ನತ ಪ್ರಜ್ಞೆಯನ್ನು ಹೊಂದಿದ ದ.ಕ ಜಿಲ್ಲೆಯ ಕಾರ್ಮಿಕ ವರ್ಗವು ಸ್ವತಂತ್ರ್ಯ ಪೂರ್ವದ ದಿನಗಳಿಂದಲೂ ಸಮರಶೀಲ ಚಳುವಳಿಗಳ ಪರಂಪರೆಯನ್ನು ಬೆಳೆಸುತ್ತಾ ಬಂದಿದೆ. ಸಮಾಜವನ್ನು ಭ್ರಷ್ಟಗೊಳಿಸುವ ಮತ್ತು ಕ್ರಾಂತಿಕಾರಿ ಸಿದ್ಧಾಂತವನ್ನು ಬುಡಮೇಲು ಮಾಡುವ ಬಂಡವಾಳಶಾಹಿಗಳ ನಿರಂತರ ಪಿತೂರಿಗಳನ್ನು ದಿಟ್ಟತನದಿಂದ ಎದುರಿಸುತ್ತಾ ಬೆಳೆದು ಬಂದ ವರ್ಗ ಹೋರಾಟದ ಅಸಂಖ್ಯ ಸೇನಾನಿಗಳನ್ನು ಸಮಾಜಕ್ಕೆ ನೀಡದ ನಾಡು ದಕ್ಷಿಣ ಕನ್ನಡ.

1930ರ ದಶಕದಲ್ಲಿ ಸ್ವಾತಂತ್ರ್ಯ ಹೋರಾಟಗಾರ್ತಿ ಕಮಲಾದೇವಿ ಚಟ್ಟೋಪಾಧ್ಯಾಯರಿಂದ ಆರಂಭಿಸಲ್ಪಟ್ಟು ಮುದ್ರಣ, ನೇಯ್ಗೆ, ಬೀಡಿ ಮೊದಲಾದ ಕಾರ್ಮಿಕರ ಸಮರಶೀಲ ಹೋರಾಟಗಳೊಂದಿಗೆ ಬೆಳೆದು ಬಂದ ಕಾರ್ಮಿಕ ಚಳುವಳಿಯ ಮುಂದೆ ಎ.ಕೃಷ್ಣ ಶೆಟ್ಟಿ, ಸಿಂಪ್ಸನ್ ಸೋನ್ಸ್ ಮತ್ತು ಬಿ.ವಿ.ಕಕ್ಕಿಲ್ಲಾಯರಂತಹ ಕಮ್ಯೂನಿಸ್ಟ್ ನಾಯಕರ ನೇತೃತ್ವದಲ್ಲಿ ವರ್ಗ ಪ್ರಜ್ಞೆಯ ಮಟ್ಟವನ್ನು ಬೆಳೆಸಿಕೊಂಡಿತು. ಹಂಚು ಕಾರ್ಮಿಕರ ಹೋರಾಟಗಳಲ್ಲಿ ನೇಯ್ಗೆ ಕಾರ್ಮಿಕರೂ, ತಲೆ ಹೊರೆ ಕಾರ್ಮಿಕರು ಭಾಗವಹಿಸಿ ಜೈಲು ಸೇರಿದ ಉದಾಹರಣೆಗಳಿವೆ. ಬೀಡಿ ಕಾರ್ಮಿಕರ ಹೋರಾಟಗಳಲ್ಲಿ ಹಂಚು ಕಾರ್ಮಿಕರು ಭಾಗವಹಿಸಿ ಪೋಲೀಸರ ಲಾಠಿ ಏಟುಗಳನ್ನು ತಿಂದ ಉದಾಹರಣೆಗಳು ಸಾಕಷ್ಟಿವೆ. ಹಂಚು ಕಾರ್ಮಿಕರು ಸುದೀರ್ಘ ಮುಷ್ಕರ ನಡೆಸುತ್ತಿದ್ದಾಗ ರೈತ ಸಂಘದ ನೇತೃತ್ವದಲ್ಲಿ ರೈತರು ಅಕ್ಕಿ ಸಂಗ್ರಹಿಸಿ ಗಂಜಿ ತಯಾರಿಸಿ ಉಣಬಡಿಸಿದ ಉದಾಹರಣೆಗಳಿವೆ. ಬೀಡಿ ಕಾರ್ಮಿಕರನ್ನೂ, ರೈತರನ್ನೂ ಸಂಘಟಿಸುವುದರಲ್ಲಿ ಹಂಚು ಕಾರ್ಮಿಕರ ಅನನ್ಯವಾದದ್ದು.




1948 ರಲ್ಲಿ

ಸರ್ಕಾರದ ಮತ್ತು ಮಾಲಿಕ ವರ್ಗದ ದೌರ್ಜನ್ಯಗಳನ್ನು ಎದುರಿಸಿ ತಮ್ಮ ಸಂಘಟನೆಯನ್ನು ಕಾಪಾಡುವ ಜೊತೆಗೆ ತಮ್ಮ ನೆಚ್ಚಿನ ನಾಯಕರ ರಕ್ಷಣೆಗಾಗಿ ಪ್ರಾಣವನ್ನೇ ಮುಡಿಪಾಗಿಟ್ಟ ಕಾರ್ಮಿಕ ವರ್ಗದ ಧೀರ ಸಂಗಾತಿಗಳ ಚರಿತ್ರೆ ಇಲ್ಲಿದೆ. ಉದಾಹರಣೆಗೆ 1948ರಲ್ಲಿ ಬಂಧನದಿಂದ ತಪ್ಪಿಸಿಕೊಳ್ಳಲು ಕಾರ್ಮಿಕ ನಾಯಕ ಎಸ್.ಎಸ್.ಹೊಳ್ಳರು ಭೂಗತರಾಗಿದ್ದಾಗ ಹೇಗೋ ಸುಳಿವು ದೊರೆತ ಪೋಲೀಸರು ಅವರನ್ನು ಬಂಧಿಸಿ, ಕೇರಳದ ಕಣ್ಣೂರು ಜೈಲಿಗೆ ಕೊಂಡು ಹೋಗುವ ಉದ್ದೇಶದಿಂದ ಮಂಗಳೂರಿನಿಂದ ರೈಲಿನಲ್ಲಿ ಕೊಂಡು ಹೋದರು. ತಮ್ಮ ನಾಯಕನನ್ನು ರಕ್ಷಿಸಲು ಪಣತೊಟ್ಟು ಮಂಗಳೂರಿನ ಕಾರ್ಯಕರ್ತರು ಅದೇ ರೈಲಿನಲ್ಲಿ ಪ್ರಯಾಣ ಮಾಡಿ, ರೈಲು ಮಂಜೇಶ್ವರಕ್ಕೆ ತಲುಪಿದಾಗ ಪೋಲೀಸರ ಮಧ್ಯದಲ್ಲಿ ಕುಳಿತಿದ್ದ ಹೊಳ್ಳರನ್ನು ಕ್ಷಣ ಮಾತ್ರದಲ್ಲಿ ಎತ್ತಿಕೊಂಡು ರೈಲಿನಿಂದ ಜಿಗಿದು ಮಾಯವಾದರು. ಹೊಳ್ಳರ ಕೈಗಳಿಗೆ ತೊಡಿಸಲಾಗಿದ್ದ ಬೇಡಿಯನ್ನು ಕಮ್ಮಾರನೊಬ್ಬನ ಸಹಾಯದಿಂದ ಕಿತ್ತು ಹಾಕಿ, ಅಡಗುದಾಣವೊಂದಕ್ಕೆ ಕೊಂಡು ಹೋದರು. ಈ ಘಟನೆಯನ್ನು ಅನುಸರಿಸಿ ಪೋಲೀಸರು ಮಂಗಳೂರಿನಲ್ಲಿ ಕಾರ್ಮಿಕರ ಮನೆ ಮನೆಗಳಿಗೆ ನುಗ್ಗಿ ಸಿಕ್ಕಿದವರನ್ನೆಲ್ಲಾ ಹೊಡೆದರು. ಆದರೆ ಹೊಳ್ಳರು ಎಲ್ಲಿದ್ದಾರೆಂದು ಯಾರೂ ಬಾಯಿ ಬಿಡಲಿಲ್ಲ. ಇನ್ನೊಂದು ಉದಾಹರಣೆ ಕೊಡುವುದಿದ್ದರೆ, ಹಂಚು ಕಾರ್ಮಿಕರು ಬೋನಸ್‌ಗಾಗಿ ಅನಿರ್ದಿಷ್ಟಾವಧಿಯ ಮುಷ್ಕರ ನಡೆಸುತ್ತಿದ್ದಾಗ 1954ರ ಜನವರಿ 28ರಂದು ಮಾಲಿಕರ ಗೂಂಡಾಗಳು ಕಾರ್ಮಿಕರ ಮೇಲೆ ದಾಳಿ ನಡೆಸಿದಾಗ ನಡೆದ ಘರ್ಷಣೆಯಲ್ಲಿ ಒಬ್ಬ ಗೂಂಡಾ ಸಾವನ್ನಪ್ಪಿದ. ಈ ಬಗ್ಗೆ ಸೆಶನ್ಸ್ ನ್ಯಾಯಾಲಯದಲ್ಲಿ ವಿಚಾರಣೆಯಾದ ಮೊಕದ್ದಮೆಯಲ್ಲಿ ಮುತ್ತಪ್ಪ ಕರ್ಕೆರ, ವೆಂಕಪ್ಪ ಬಂಗೇರ ಮತ್ತು ಬಾಬು ಎಂಬ ಮೂವರಿಗೆ ಮರಣ ದಂಡನೆ ವಿಧಿಸಲಾಯಿತು. ಹಂಚು ಕಾರ್ಮಿಕ ಬೇಡಿಕೆಗಾಗಿ ಹೋರಾಡಿ ಶಿಕ್ಷೆಗೆ ಒಳಗಾದ ಈ ಮೂವರ ಪೈಕಿ ಮುತ್ತಪ್ಪ ಕರ್ಕೆರ ಮತ್ತು ವೆಂಕಪ್ಪ ಬಂಗೇರರು ನೇಯ್ಗೆ ಕಾರ್ಮಿಕರಾಗಿದ್ದರು. ಬಾಬು ಅವರು ಮಂಗಳೂರು ಬಂದರಿನ ತಲೆಹೊರೆ ಕಾರ್ಮಿಕನಾಗಿದ್ದರು. ದೀರ್ಘಕಾಲ ಜೈಲಿನಲ್ಲಿದ್ದ ಈ ಮೂವರು ಮದ್ರಾಸ್ ಹೈಕೋರ್ಟ್‌ನಲ್ಲಿ ಹೂಡಲಾದ ಮೇಲ್ಮನವಿಯ ಪರಿಣಾಮವಾಗಿ ಬಿಡುಗಡೆಗೊಂಡರು.

ಸ್ವಾತಂತ್ರ್ಯಕ್ಕೂ ಮುಂಚೆ

ದ.ಕ ಜಿಲ್ಲೆಯಲ್ಲಿ ಕಾರ್ಮಿಕ ವರ್ಗದ ಸಮರಶೀಲ ಹೋರಾಟಗಳ ಚರಿತ್ರೆಯನ್ನು 1939ರಿಂದಲೇ ಗುರುತಿಸಬಹುದು. 1939ರಲ್ಲಿ ಮಂಗಳೂರಿನ ಕಂಕನಾಡಿಯ ಎಸ್‌ಎಂಎಸ್ ನೇಯ್ಗೆ ಕಾರ್ಖಾನೆಯನ್ನು ಮುಚ್ಚಿದುದರ ವಿರುದ್ಧ ನಡೆದ ಮುಷ್ಕರದ ಸಂದರ್ಭದಲ್ಲಿ ಬಂಧಿಸಲ್ಪಟ್ಟ 35 ಮಂದಿ ಕಾರ್ಮಿಕ ಕಾರ್ಯಕರ್ತರ ಪೈಕಿ ಅಣ್ಣು ಭಂಡಾರಿ, ಲಕ್ಷ್ಮಣ ಕೊಟ್ಟಾರಿ, ಸಾಬಿ ಡಿಸೋಜ, ಡೇನಿಸ್ ಕುಟಿಂಞ ಮತ್ತು ಹೊಯಿಗೆ ವೆಂಕಪ್ಪ ಎಂಬುವವರಿಗೆ ಜೈಲು ಶಿಕ್ಷೆಯಾಯಿತು.

1948ರ ಮೇ ತಿಂಗಳಲ್ಲಿ ದೇಶಾದ್ಯಂತ ಕಮ್ಯೂನಿಸ್ಟರ ಮೇಲೆ ತೀವ್ರ ದಾಳಿ ಆರಂಭವಾದಾಗ ಮಂಗಳೂರಿನ ಕಾರ್ಮಿಕ ಮುಖಂಡರಾದ ಎ.ಕೃಷ್ಣಶೆಟ್ಟಿ, ಬಿ.ವಿ.ಕಕ್ಕಿಲಾಯ ಮೊದಲಾದವರನ್ನು ಬಂಧಿಸಿ ಜೈಲಿಗೆ ಹಾಕಲಾಯಿತು. ಹಂಚು ಕಾರ್ಮಿಕರ ಸಂಘದ ಕಛೇರಿಯನ್ನು ಆಕ್ರಮಿಸಿದ ಪೋಲೀಸರು ಅಲ್ಲಿದ್ದ ಕಾಗದ ಪತ್ರಗಳನ್ನು ಕೊಂಡು ಹೋದರು. ಮಾತ್ರವಲ್ಲದ ಸಂಘದ ಕಛೇರಿಗೆ ಬೀಗ ಹಾಕಿದರು. ಆದರೂ ಕಾರ್ಯಕರ್ತರು ಎದೆಗುಂದದೆ ಭೂಗತ ಚಟುವಟಿಕೆಗಳ ಮೂಲಕ ಸಂಘವನ್ನು ಬೆಳೆಸಿ 1949ರಲ್ಲಿ ಮಾರ್ನಮಿಕಟ್ಟೆಯಲ್ಲಿ ಸಂಘದ ಹೊಸ ಕಛೇರಿಯನ್ನು ಆರಂಭಿಸಿದರು.



ಇಂದು ಬಹುತೇಕ ಮಹಿಳೆಯರೇ ದುಡಿಯುತ್ತಿರುವ ಬೀಡಿ ಕೈಗಾರಿಕೆಯಲ್ಲಿ ಆರಂಭ ಕಾಲದಲ್ಲಿ ಪುರುಷರೇ ದುಡಿಯುತ್ತಿದ್ದರು. ಬೀಡಿ ಕಾರ್ಖಾನೆಗಳಲ್ಲಿ ನೆಲದ ಮೇಲೆ ಕುಳಿತು ಬೀಡಿ ಸುತ್ತುತ್ತಿದ್ದ ಈ ಕಾರ್ಮಿಕರು ಕುಳಿತು ಕೊಳ್ಳುವ ಸ್ಥಳ ಸ್ವಚ್ಛವಾಗಿರಬೇಕೆಂದು ಒತ್ತಾಯಿಸಿ ಹೋರಾಟಗಳನ್ನು ನಡೆಸಿದ್ದರು. 1946ರ ಅಕ್ಟೋಬರ್ ತಿಂಗಳಲ್ಲಿ ದಕ್ಷಿಣ ಕನ್ನಡ ಮತ್ತು ಮಲಬಾರ್ ಜಿಲ್ಲೆಗಳ ಬೀಡಿ ಕಾರ್ಮಿಕರು ಕೂಲಿ ಹೆಚ್ಚಳ ಮತ್ತು ಬೋನಸ್‌ಗಾಗಿ ಅನಿರ್ಧಿಷ್ಟಾವಧಿಯ ಮುಷ್ಕರ ನಡೆಸಿದಾಗ ಪೋಲೀಸರು ಕಾರ್ಮಿಕರ ಮನೆಗಳಿಗೆ ನುಗ್ಗಿ ಅಲ್ಲಿದ್ದವರನ್ನೆಲ್ಲಾ ಹೊಡೆದರು. ದಾರಿಯಲ್ಲಿ ಹೋಗುವ ಕಾರ್ಮಿಕರನ್ನು ತಡೆದು ನಿಲ್ಲಿಸಿ ಬೆರಳು ತೋರಿಸಲು ಹೇಳುತ್ತಿದ್ದರು. ಆಗಿನ ಕಾಲದಲ್ಲಿ ಬೀಡಿಯ ತುದಿಗಳನ್ನು ಒತ್ತಲು ಕಾರ್ಮಿಕರು ಉದ್ದುದ್ದ ಉಗುರುಗಳನ್ನು ಬೆಳೆಸುತ್ತಿದ್ದರು. ಉದ್ದದ ಉಗುರು ಬೆಳೆಸಿದವರನ್ನೆಲ್ಲಾ ಗುರುತಿಸಿ ಪೋಲೀಸರು ಹೊಡೆಯುತ್ತಿದ್ದರು. ಆದರೂ ಈ ಎಲ್ಲಾ ದಬ್ಬಾಳಿಕೆಗಳನ್ನು ಎದುರಿಸಿ ಬೀಡಿ ಕಾರ್ಮಿಕರು 59 ದಿನಗಳವರೆಗೆ ಮುಷ್ಕರ ನಡೆಸಿದರು. ಸರ್ಕಾರವು ವಿವಾದವನ್ನು ಅರ್ಬಿಟ್ರೇಶನ್‌ಗೆ ವಹಿಸಿಕೊಟ್ಟದ್ದನ್ನು ಅನುಸರಿಸಿ ಮುಷ್ಕರವನ್ನು ಕೊನೆಗೊಳಿಸಲಾಯಿತು.

ಎಂಭತ್ತರ ದಶಕದೊಳಗೆ

ಭವಿಷ್ಯನಿಧಿ ಜಾರಿಗಾಗಿ ಬೀಡಿ ಕಾರ್ಮಿಕರು 1982 ಜೂನ್ 15ರಂದು ಮಂಗಳೂರಿನ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಪಿಕೆಟಿಂಗ್ ನಡೆಸಿದಾಗ ಪೋಲೀಸರು ಕ್ರೂರವಾಗಿ ಲಾಠಿ ಪ್ರಹಾರ ಮಾಡಿದರು. ಮಹಿಳೆಯರನ್ನು ಒಳಗೊಂಡು ಅನೇಕ ಕಾರ್ಮಿಕರು ಗಾಯಗೊಂಡರು. ಈ ದೌರ್ಜನ್ಯವನ್ನು ಖಂಡಿಸಿ ಹಾಗೂ ಬೇಡಿಕೆಯ ಈಡೇರಿಕೆಗಾಗಿ ಬೀಡಿ ಕಾರ್ಮಿಕರ 7 ಮಂದಿ ನಾಯಕರು ಅನಿರ್ಧಿಷ್ಟಾವಧಿಯ ನಿರಶನ ಸತ್ಯಾಗ್ರಹ ನಡೆಸಿದರು. ಭವಿಷ್ಯ ನಿಧಿ ಅಧಿಕಾರಿಗಳು ಬೆಂಗಳೂರಿನಿಂದ ಬಂದು ಮಂಗಳೂರಿನ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮಾತುಕತೆ ನಡೆಸಿ, ಬೀಡಿ ಕಾರ್ಮಿಕರಿಗೆ ಭವಿಷ್ಯನಿಧಿ ಜಾರಿಗೊಳಿಸಲು ಒಪ್ಪಿದ ಮೇಲೆ 6ನೇ ದಿನದಂದು ಸಂಜೆಗೆ ಸತ್ಯಾಗ್ರಹವನ್ನು ಕೊನೆಗೊಳಿಸಲಾಯಿತು.

ದ.ಕ. ಜಿಲ್ಲೆಯಲ್ಲಿ ಈಗಲೂ ಹೋರಾಟಗಳ ಪರಂಪರೆ ಮುಂದುವರಿಯುತ್ತಿದೆ. ಬಂಡವಾಳ ಶಾಹಿಗಳ ಮತ್ತು ಕೋಮುವಾದಿ ಶಕ್ತಿಗಳ ವಿಚ್ಛಿದ್ರಕಾರಿ ಪಿತೂರಿಗಳ ನಡುವೆಯೂ ಕಾರ್ಮಿಕರು ತಮ್ಮ ವರ್ಗ ಪ್ರಜ್ಞೆಯನ್ನೂ, ಹೋರಾಟದ ಕೆಚ್ಚನ್ನೂ ಕಾಪಾಡಿಕೊಂಡು ಬಂದಿದ್ದಾರೆ.



ಬಿ.ಎಂ.ಟಿ.ಸಿ. ಕಾರ್ಮಿಕರ ಸಂಕಟಗಳ ಮೂಟೆ

ಮೇ 27 ರಂದು ಪ್ರತಿಭಟನೆ

ಬೃಹತ್ ಬೆಂಗಳೂರಿನಲ್ಲಿ ಅತ್ಯುತ್ತಮ ಸಾರಿಗೆ ಸೇವೆಯನ್ನು ಕೊಡುತ್ತಿರುವುದಾಗಿ ಬಿಎಂಟಿಸಿ ಹೇಳಿಕೊಳ್ಳುತ್ತದೆ. ಈ ಬೃಹತ್ ಸೇವೆಯ ಹಿಂದೆ ತೆರೆಮರೆಯಲ್ಲಿ ಸಂಕಟಗಳ ಮೂಟೆ ಹೊತ್ತವರ ಪರಿಶ್ರಮವಿದೆಯೆಂಬುದನ್ನು ಮರೆಸಲಾಗುತ್ತಿದೆ. ಈ ಕಾರ್ಮಿಕರು ಒಂದಾಗುತ್ತಿದ್ದಾರೆ, ಪ್ರತಿಭಟನೆಗೆ ಮುಂದಾಗುತ್ತಿದ್ದಾರೆ.

ಸಂದರ್ಶಕರು : ಮಹೇಶ ಊಗಿನಹಳ್ಳಿ

ಒಂದು ದೇಶದ ಪ್ರಗತಿ ರಾಜ್ಯ, ನಗರದ ಅಭಿವೃದ್ಧಿಗೆ ಸಾರಿಗೆ ವ್ಯವಸ್ಥೆಯು ಬಹುಮುಖ್ಯವಾದ ಪಾತ್ರ ನಿರ್ವಹಿಸುತ್ತದೆ.ಈ ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ಇಲ್ಲಿ ದುಡಿಯುತ್ತಿರುವ ನೌಕರರ ಕೊಡುಗೆ ಅಪಾರ. ಹಗಲು ರಾತ್ರಿ ಕಷ್ಟಪಟ್ಟು ದುಡಿಯುತ್ತಿರುವ ಡ್ರೈವರ್, ಕಂಡಕ್ಟರ್, ಮೆಕಾನಿಕಲ್, ಕಾರ್ಮಿಕರುಗಳ ಕೊಡುಗೆ ಸ್ಮರಣೀಯ, ಈ ಎಲ್ಲದರ ಶ್ರಮದ ಫಲವಾಗಿ ಕರ್ನಾಟಕ ರಾಜ್ಯ ಬಿ.ಎಂ.ಟಿ.ಸಿ. ಸಾರಿಗೆಗೆ ಉತ್ತಮ ನಿರ್ವಹಣೆ ಎಂಬ ಪ್ರಶಸ್ತಿಗಳು ಸಂದಿವೆ. ಆದರೆ ಈ ಹಿನ್ನಲೆಯಲ್ಲಿ, ತೆರೆಮರೆಯಲ್ಲಿ ಕಾರ್ಮಿಕರ ಮೇಲೆ ಅಷ್ಟು ಪ್ರಮಾದ ಅಗಾಧ ಶೋಷಣೆಯನ್ನು ಹೇರಲಾಗಿದೆ ಎಂದು ಹೊರ ಜನತೆಗೆ ಗೊತ್ತಿಲ್ಲ. ಬಿ.ಎಂ.ಟಿ.ಸಿ. ಆಡಳಿತದೊಳಗೆ ನಡೆಯುತ್ತಿರುವ ಅದಕ್ಷ ಆಡಳಿತ, ಲಂಚಗುಳಿತನ ದೌರ್ಜನ್ಯಗಳು ನಡೆಯುತ್ತಿರುವುದೇ ಸಾಕ್ಷಿಯಾಗಿವೆ. ಆ ರೀತಿಯಲ್ಲಿ ನೌಕರರಿಗೆ ಕಿರುಕುಳ, ದಂಡ ರೀ-ಕವರಿ, ಡಿಸ್‌ಮಿಸ್, ಸಸ್ಪೆಂಡ್, ಡಬಲ್ ಡ್ಯೂಟಿ, ತ್ರಿಬಲ್ ಡ್ಯೂಟಿ, ಒ.ಟಿ. ಹಣ ಗುಳುಂ. ರಜೆ ನಿರಾಕರಣೆ, ರೆಸ್ಟ್ ನಿರಾಕರಣೆ, ಖಾಯಂ ಕೆಲಸ ವಿಳಂಬ, ರೂಟ್ ಬದಲಾವಣೆ ಟ್ರೈನಿ ಅವಧಿ ವಿಸ್ತರಣೆ ಹಾಗೂ ಮಹಿಳಾ ಕಂಡಕ್ಟರ್‌ಗಳ ಮೇಲೆ ಲೈಂಗಿಕ ದೌರ್ಜನ್ಯ ಇನ್ನೂ ಹಲವಾರು ಸಮಸ್ಯೆಗಳ ಸರಮಾಲೆಯನ್ನು ತುಂಬಿಕೊಂಡು ಸಾಗುತ್ತಿರುವ ಸಾರಿಗೆ ಇಲಾಖೆ ವಿರುದ್ಧ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಇತ್ತ ಗಮನ ಹರಿಸಿ, ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳ ನೌಕರರ ಫೆಡರೇಷನ್ ಸಿಐಟಿಯು ಸಂಘಟನೆಯು ದಿನಾಂಕ:27.05.11ರಂದು ನಡೆಸುತ್ತಿರುವ ಹೋರಾಟದ ಹಿನ್ನಲೆಯಲ್ಲಿ ಜನಶಕ್ತಿಯು ನೌಕರರೊಂದಿಗೆ ನಡೆಸಿದ ಸಂದರ್ಶನ

ಪ್ರ: ನೀವು ಮೈಕಾನಿಕಲ್ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದೀರಿ. ಇಲ್ಲಿ ಯಾವ ರೀತಿಯು ಸಮಸ್ಯೆಗಳು ನಿಮಗೆ ಎದುರಾಗುತ್ತಿವೆ?



ರಾಮಕೃಷ್ಣ: ನಾವು ಮೆಕಾನಿಕ್‌ಗಳಂ ಮೆಕಾನಿಕ್‌ಗಳಾಗಿ ಕೆಲಸ ಮಾಡುತ್ತಿಲ್ಲ. ಜೀತದಾಳು ರೀತಿ ಕೆಲಸ ಮಾಡುತ್ತಿದ್ದೀವಿ. ಜೀತ ಪದ್ಧತಿ ತರ ನಮ್ಮನ್ನು ದುಡಿಸಿಕೊಳ್ಳುತ್ತಿದ್ದಾರೆ. ನಮಗೆ ಯಾವುದೇ ರೀತಿಯ ಟೀ, ಕಾಫಿ, ಬ್ರೇಕ್ ಕೊಡಲ್ಲ, ರೆಸ್ಟ್ ಕೊಡಲ್ಲ, ಮತ್ತೆ 8 ಗಂಟೆಗಿಂತ ಹೆಚ್ಚು ಕೆಲಸ ಮಾಡಿಸಿಕೊಳ್ಳುತ್ತಾರೆ. ಇದಕ್ಕೆ ಯಾವುದೇ ಪರಿಹಾರ ಧನ ಕೊಡೋಲ್ಲ. ಕೇಳಿದ್ರೆ ಯಾವಾಗ್ಲಾದರೂ ಬೇಗ ಹೋಗು ಅಂತಾರೆ. ಬೇಗ ಹೋಗೋಕ್ಕೇ ಕೇಳಕ್ಕೆ ಹೋದ್ರೆ ಪರ್ಮಿಷನ್ ಕೊಡಲ್ಲ, ಕೈ ಕಾಲು ಹಿಡಿಯೋ ಪರಿಸ್ಥಿತಿ ಉಂಟಾಗುತ್ತಿದೆ. ಸರಿಯಾದ ರೀತಿ ಕ್ರಮಬದ್ಧವಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ, ಬಿಡಿಭಾಗಗಳು ಸರಿಯಾಗಿ ಇಲ್ಲ, ಮೆಟಿರಿಯಲ್ ಇಲ್ಲ. ಇದು ಸರಿ ಇಲ್ಲ ಅಂದ್ರೆ, ನಿಂದೇನು ಕೆಲಸ ಅಷ್ಟು ಮಾಡು ಜಾಸ್ತಿ ಮಾತಾಡಬೇಡ ಎಂದು ಬೆದರಿಸುತ್ತಾರೆ.

ನಮ್ಮ ಕೈಲೆ ಬಸ್ ತೊಳೆಸುತ್ತಾರೆ. ತೊಳೆಯಲಿಲ್ಲ ಅಂದ್ರೆ. ಚಾರ್ಜ್‌ಶೀಟ್ ಹಾಕ್ತೀನಿ, ಹಂಗ್ ಮಾಡ್ತೀನಿ, ಹಿಂಗ್ ಮಾಡ್ತೀನಿ ಎಂದು ಹೆದರಿಸುತ್ತಾರೆ. ಕ್ಲೀನಿಂಗ್ ಅಂತಾನೇ ಸ್ವೀಪರ್‌ಗಳು ಕಂಟ್ರಾಕ್ಟ್‌ಗಳು ಇವೆ. ಆದರೆ ಅವರಿಗೆ ಸರಿಯಾಗಿ ಸಂಬಳ ಕೊಡಲ್ಲ, ಕಂಟ್ರಾಕ್ಟ್‌ಗಳು ಮತ್ತು ಡಿಪೋ ಮ್ಯಾನೇಜರ್‌ಗಳ ಒಂದಾಗಿ ನುಂಗುತ್ತಿದ್ದಾರೆ. ಇವರನ್ನು ಬೇರೆ ಬೇರೆ ತಮ್ಮ ಸ್ವಂತಿಕೆಯ ಕೆಲಸಗಳಿಗೆ ಬಳಸಿಕೊಳ್ಳುತ್ತಿದ್ದಾರೆ.

ಪ್ರ: ಬಿ.ಎಂ.ಟಿ.ಸಿ. ಇವತ್ತು ತಾಂತ್ರಿಕವಾಗಿ ಅಭಿವೃದ್ಧಿ ಸಾಧಿಸಬೇಕಾಗಿದೆಯಾ?

ರಾಮಕೃಷ್ಣ: ಇನ್ನೂ ಹೊಸ ಹೊಸ ತಂತ್ರಜ್ಞಾನಗಳ ಬಳಸಿಕೊಂಡು ಉತ್ತಮ ಸುಧಾರಣೆ ಮಾಡಬಹುದಾಗಿದೆ. ಆದರೆ ಅಧಿಕಾರಿಗಳು, ಇಂಜಿನಿಯರ್‌ಗಳು ತಲೆಕೆಡಿಸಿಕೊಳ್ಳುವುದಿಲ್ಲ. ಹಳೇ ಪಾರ್ಟ್ಸ್‌ಗಳನ್ನು ಹಾಕ್ತಾರೆ. ಹೊಸ ಹೊಸ ಮೆಟಿರಿಯಲ್‌ಗಳನ್ನು ಕಳ್ಳ ಸಾಗಾಣಿಕೆ ಮಾಡುತ್ತಿದ್ದಾರೆ. ಹಳೆ ಇಂಜಿನ್‌ಗಳು, ಸರಿಯಾದ ಸಮಯಕ್ಕೆ ಸಮ್ಮಿಟ್ ಮಾಡಲ್ ಬಿಡಲ್ಲ ಕ್ರಮಬದ್ಧವಾಗಿ ರಿಪೇರಿ ಮಾಡಲು ಬಿಡಲ್ಲ. ಬ್ರೇಕ್, ಕ್ಲಚ್ ಸರಿಯಾಗಿ ಕಾರ್ಯನಿರ್ವಹಿಸೋದಿಲ್ಲ. ಇದೆಲ್ಲಾ ಹೇಳೋಕೋದ್ರೆ, ಸಲಹೆ ಕೊಡೊಕೋದ್ರೆ ಬೈತರೆ, ಇದರಿಂದ ಅಪಘಾತಗಳು ಹೆಚ್ಚಾಗುತ್ತಿವೆ, ಬಾಳಿಕೆ ಬರುತ್ತಿಲ್ಲ...

ಪ್ರ: ಕಂಡಕ್ಟರ್ ಆಗಿ ಸೇವೆ ಮಾಡುತ್ತಿದ್ದೀರಾ. ನಿಮ್ಮ ಸೇವೆಯಲ್ಲಿ ಯಾವ ಯಾವ ಸಮಸ್ಯೆಗಳು ಎದುರಾಗಿವೆ?

ದೇವಯ್ಯ: ನಾವು ಬೆಳಿಗ್ಗೆ ಶಿಫ್ಟ್‌ಗೆ ಕೆಲಸಕ್ಕೆ ಬಂದ್ರೆ ಮಾರನೇ ದಿನ ಮಧ್ಯಾಹ್ನ ಮನೆಗೆ ಹೋಗಬೇಕು. ಆದರೆ ನಮಗೆ ಆಗಲೂ ಬೇಗ ಮನೆಗೆ ಹೋಗೋಕೆ ಬಿಡಲ್ಲ. ಡ್ಯೂಟಿ ಮುಗಿದಿದ್ದರೂ ರಿಲಿವ್ ಮಾಡೋಲ್ಲ. ಅದು ಇದು ಅಂತ ಬೇರೆ ಬೇರೆ ರೂಟ್‌ಗೆ ಕಳಿಸುತ್ತಾರೆ, ಡಬ್ಬಲ್ ಡ್ಯೂಟಿ, ತ್ರಿಬಲ್ ಡ್ಯೂಟಿ ಮಾಡಬೇಕು 8 ಗಂಟೆ ಕೆಲಸದ ಜೊತೆಗೆ ಹೆಚ್ಚಿನ 8 ಗಂಟೆ ಕೆಲಸ ಮಾಡಿದ್ರೂ ನಮಗೆ ಬರಿ 3 ಗಂಟೆ ಮಾತ್ರ ಓ.ಟಿ. ಅಂತಾರೆ, ಅದು ಸಿಂಗಲ್ ಓ.ಟಿ. ಇದನ್ನೆಲ್ಲಾ ಕೇಳಿದ್ರೆ ನಾಳೆ ನಿನಗೆ ಡ್ಯೂಟಿ ಇಲ್ಲ ಅನ್ನೋದು, ರೂಟ್ ಚೇಂಜ್ ಮಾಡೋದು ಮಾಡ್ತಾರೆ.

ಪ್ರ: ರಜಾದ ವ್ಯವಸ್ಥೆ ಹೇಗಿದೆ? ಲೀವ್ ರಿಜಿಸ್ಟರ್ ಮೈನ್‌ಟೈನ್ ಇದಿಯಾ?

ದೇವಯ್ಯ: ರಜಾದ ಹೆಸರೇ ಎತ್ತೋಹಾಂಗೆ ಇಲ್ಲ ಸಾರ್. ಬರಿ ಲಂಚ, ನಮಗೆ ಹೆಂಡ್ತಿ ಮಕ್ಕಳಿಗೆ ಹುಷಾರಿಲ್ಲ ಅಂದ್ರೆ, ಅಪ್ಪ, ಅಮ್ಮ ಅಜ್ಜಿ ಅಜ್ಜ ಸಂಬಂಧಿಕರು ತೀರಿಕೊಂಡ್ರು ಅಂದ್ರು ಕೇರ್ ಮಾಡೋಲ್ಲ. ಯಾವುದೇ ರೀತಿಯಾಗಿ ಸ್ಪಂದಿಸುವುದಿಲ್ಲ, ಲೀವ್ ರಿಜಿಸ್ಟಾರ್ ಇಲ್ಲ, ಏನು ಇಲ್ಲ. ಅವರಿಗೆ ಬಕೆಟ್ ಹಿಡಿಕೊಂಡು, ದುಡ್ಡು ಜೇಬಿಗೆ ತುರುಕಿದರೆ ಮಾತ್ರ ಲೀವ್. ಒಂದು ವೇಳೆ ತೀರಾ ಸೀರಿಯಸ್ ಆಗಿ ರಜಾ ಹಾಕಿದರೂ, ಒಂದು ದಿನಕ್ಕೆ ರೂ.200 ರಂತೆ ಫೈನ್ ಹಾಕಿ, ಆ ದಿನ ಸಂಬಳ ಕಟ್ ಮಾಡುತ್ತಾರೆ. ಇನ್ಸ್‌ಪೆಕ್ಟರ್ ಹತ್ತಿರ ಹೋಗು ಅಂತಾರೆ. ಅವರು ಡಿಪೋ ಮ್ಯಾನೇಜರ್ ಹತ್ತಿರ ಕಳಿಸುತ್ತಾರೆ. ಒಟ್ಟಾರೆ ನಮ್ಮನ್ನು ಗುಲಾಮರಂತೆ ದುಡಿಸಿಕೊಳ್ಳುತ್ತಿದ್ದಾರೆ.

ಪ್ರ: ನೀವು ಟಿಕೆಟ್ ಕರೆಟ್ಟಾಗಿ ಕೊಟ್ಟಿರುತ್ತೀರಾ? ಯಾವುದೇ ರೀತಿ ತಪ್ಪು ಇರೋದಿಲ್ಲ ಆಗ ಚಕ್ಕಿಂಗ್ ಇನ್ಸ್‌ಪೆಕ್ಟರ್ ನಿಮಗೆ ಪ್ರಶಂಸೆಯ ಬರವಣಿಗೆ ಬರೆಯುತ್ತಾರೆ ಹೇಗೆ?

ದೇವಯ್ಯ : ಯಾವುದೇ ಪ್ರಶಂಸೆ ಬರೆಯೋದು ಬೇಡ ಸಾರ್ ಫೈನ್ ಹಾಕದೆ ದಂಡ ಹಾಕದಿದ್ದರೆ ಅಷ್ಟೇ ಸಾಕು. ಆದರೆ ಈ ತರ ನಿಷ್ಠೆಯಿಂದ ಪ್ರಾಮಾಣಿಕವಾಗಿ ಕೆಲಸ ಮಾಡಿದರು. ನೀನು ಈ ಕೆಲಸಕ್ಕೆ ಲಾಯಕ್ ಇಲ್ಲ. ಇವತ್ತು ಒಂದನ್ನಾರು ಫೈನ್ ಹಾಕಿಸಿಕೋ, ಇಲ್ಲದಿದ್ದರೆ ಮುಂದೆ ಜಾಸ್ತಿ ಹಾಕ್ತೀನಿ, ಇಲ್ಲಾ ಅಂದ್ರೆ ಮುಂದಿನ ದಿನಗಳನ್ನು ನೋಡಿಕೊಡ್ತೀನಿ ಎಂದು ಒತ್ತಾಯವಾಗಿ ದಂಡ ಹಾಕುತ್ತಾರೆ. ಈ ದಂಡದಿಂದ ಇವರಿಗೆ ರೂ.100ಕ್ಕೆ 15 ರೂ.ಕಮಿಷನ್ ಬರುತ್ತದೆ. ಲಂಚ ಜಾಸ್ತಿ ಸಿಗುತ್ತದೆ ದಿನಕ್ಕೆ 5-6 ಸಾವಿರ ಮಾಡ್ಕೋತ್ತಾರೆ.

ಬೆಂಗಳೂರು ನಂತಹ ಕಿಕ್ಕಿರಿದ ಜನಸಂದಣಿಯ ವ್ಯವಸ್ಥೆಯಲ್ಲಿ, ಚಿಲ್ಲರೆ ಸಮಸ್ಯೆ ಇದೆ. ಒಂದು ರೂಟ್‌ಗೆ 25 ರಿಂದ 30 ಸ್ಟಾಪ್ ಬರುತ್ತದೆ, ಅಷ್ಟರೊಳಗೆ ನಾವು ಎಲ್ಲರಿಗೂ ಟಿಕೆಟ್ ಹರಿಬೇಕು. ಒಬ್ಬರು ಚಿಲ್ಲರೆ ಕೊಡೋಕೆ 2-3 ನಿಮಿಷ ತೆಗೆದುಕೊಳ್ಳುತ್ತಾರೆ. ಅಷ್ಟರೊಳಗೆ ಸ್ಟಾಪ್ ಸ್ಟೇಜ್ ಬಂದೆ ಬಿಡುತ್ತದೆ. ಆಗ ಸಿಕ್ಕಂದ್ರೆ ನಾಟ್ ಅಕೌಂಟೆಡ್ ಎಂದು ಬರೆದು ಬಿಡುತ್ತಾರೆ. ನಮ್ಮ ಸಮಸ್ಯೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲ್ಲ. ದುಡ್ಡು ಇಸ್ಕೋತ್ತಾರೆ, ದಂಡಾನೂ ಹಾಕುತ್ತಾರೆ.

ಪ್ರ: ಕ್ಯಾಂಟಿನ್, ರೆಸ್ಟ್ ರೂಂ ವ್ಯವಸ್ಥೆ ಇದೆಯಾ?

ದೇವಯ್ಯ : ಕುಡಿಯೋಕೆ ಸರಿಯಾಗಿ ನೀರು ಕೊಡಲ್ಲ ಸಾರ್. ಡಿಪೋಗಳಲ್ಲಿ ಅವರಿಗೆ ಮಾತ್ರ ಮಿನರಲ್ ವಾಟರ್ ತರಿಸಿಕೊಳ್ಳುತ್ತಾರೆ, ನಮಗೆ ಯಾವುದೋ ಬೋರ್‌ವೆಲ್ ನೀರು, ಅದು ಸರಿಯಾದ ಶುದ್ಧ ನೀರಲ್ಲ, ನಾವು ಹೋಟೆಲ್‌ಗಳಲ್ಲಿ ಅಂಗಡಿಗಳಲ್ಲಿ ತಗೊಂಡು ಕುಡಿತೀವಿ, ಕ್ಯಾಂಟಿನ್ ಕೆಲವು ಡಿಪೋಗಳಲ್ಲಿ ಇದೆ. ಮಿಕ್ಕ ಕಡೆ ಇಲ್ಲ. ರೆಸ್ಟ್ ರೂಮ್ ಸರಿಯಾಗಿ ಸ್ವಚ್ಛತೆ ಇರಲ್ಲ. ಬೀಗ ಹಾಕಿರುತ್ತಾರೆ. ಈ ಸೌಲಭ್ಯಗಳ ಬಗ್ಗೆ ಕೇಳಿದ್ರೆ ನೋಡ್ ಕೊಳ್ತೀನಿ ಎಂದು ಹೇಳುತ್ತಾರೆ.

ಪ್ರ: ವಾಹನಗಳು ಯಾವ ರೀತಿ ಕಂಡಿಷನ್‌ಗಳಲ್ಲಿ ಇರುತ್ತವೆ? ನೀವು ಹೇಗೆ

ಪುಟ 10 ಕ್ಕೆ



ಅಮೆರಿಕಾದ ಪಡೆಗಳು ಎಲ್ಲಾ ಅಂತರ್ರಾಷ್ಟ್ರೀಯ ಕಾನೂನುಗಳನ್ನು ಮತ್ತು ಕನಿಷ್ಟ ನಾಗರೀಕ ಮಾನವೀಯ ನಿಯಮಗಳನ್ನು ಉಲ್ಲಂಘಿಸಿ ಬಿನ್ ಲಾಡೆನ್‌ನ್ನು ಕೊಂದಿವೆ. ಲಾಡೆನ್ ಹತ್ಯೆಯಿಂದೇನೂ ಭಯೋತ್ಪಾದನೆ ಕೊನೆಗೊಳ್ಳುವುದಿಲ್ಲ.

ಬಿನ್ ಲಾಡೆನ್ ಹತ್ಯೆ

ಭಯೋತ್ಪಾದನೆಯ ಅಂತ್ಯವೇ ?

ವಸಂತ

ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದಿನ ಬಳಿಯ ಪಟ್ಟಣ ಒಂದರಲ್ಲಿ ಅಮೆರಿಕನ್ ನೌಕಾಸೈನ್ಯದ ಸೀಲ್ ಪಡೆಗಳಿಂದ ದಾಳಿ ಮತ್ತು ಒಸಾಮಾ ಬಿನ್ ಲಾಡೆನ್ ಹತ್ಯೆ ವರದಿಯಾಗಿದೆ. ಈ ಬಗ್ಗೆ ಅಧ್ಯಕ್ಷ ಒಬಾಮಾ ಘೋಷಣೆ, ಅಮೆರಿಕದಲ್ಲಿ ಸಾರ್ವಜನಿಕ ಹರ್ಷೋತ್ಸವ, ಭಯೋತ್ಪಾದನೆಯ ವಿರುದ್ಧ ಯುದ್ಧದಲ್ಲಿ ಪ್ರಮುಖ ಜಯ ಎಂಬ ನಾಟೋ ದೇಶಗಳ ಅನಿಸಿಕೆ, ಪಾಕಿಸ್ತಾನ ಮತ್ತು ಇತರ ಮುಸ್ಲಿಂ ದೇಶಗಳಲ್ಲಿ ಆಕ್ರೋಶ - ಇವೆಲ್ಲಾ ವರದಿಯಾಗಿವೆ.

ಒಸಾಮಾ ಹತ್ಯೆ ಎಲ್ಲಾ ಅಂತರ್ರಾಷ್ಟ್ರೀಯ ಕಾನೂನುಗಳನ್ನು ಮತ್ತು ಕನಿಷ್ಟ ನಾಗರಿಕ ಮಾನವೀಯ ನಿಯಮಗಳನ್ನು ಉಲ್ಲಂಘಿಸಿದ ಭಯೋತ್ಪಾದಕ ಹತ್ಯೆ. ಯಾವುದೇ ವಿಚಾರಣೆ ಇಲ್ಲದೆ ಶಿಕ್ಷೆಗೆ ಒಳಪಡಿಸಿದ ರಾಜಕೀಯ ಹತ್ಯೆ ಎಂದು ಗುರುತಿಸಬೇಕು. ಸಾಮ್ರಾಜ್ಯಶಾಹಿ ಮಾಧ್ಯಮಗಳು ಈ ಅಂಶವನ್ನು ಪೂರ್ತಿಯಾಗಿ ಕಡೆಗಣಿಸಿವೆ. ನಿಶ್ಶಸ್ತ್ರನಾಗಿದ್ದ ಒಸಾಮಾನನ್ನು ಆತನ ಮಡದಿಯರ ಮತ್ತು ಮಕ್ಕಳ ಎದುರೇ ಬರ್ಬರವಾಗಿ ಕೊಲೆ ಮಾಡಲಾಯಿತು. ಆತನನ್ನು ಜೀವಸಹಿತ ಬಂಧಿಸಿ ವಿಚಾರಣೆಗೆ ಅಮೆರಿಕಕ್ಕೆ ಒಯ್ಯುವ ಸಾಧ್ಯತೆಯಿತ್ತು. ಆದರೆ ಅಮೆರಿಕದ ಸೀಲ್ ಪಡೆಗಳಿಗೆ "ಕೊಲೆ" ಆಜ್ಞೆ ಮಾತ್ರ ಇದ್ದಿದ್ದು. ಒಸಾಮಾನ ಶರೀರವನ್ನು ಅವಸರದಿಂದ ಸಾಗರದಲ್ಲಿ ಎಸೆಯಲಾಯಿತು. ಹಲವು ಮೀನಮೇಷಗಳ ನಂತರ ಶರೀರದ ಫೋಟೋ ಸಹ ಅಧಿಕೃತವಾಗಿ ಪ್ರಕಟಿಸಲಾಗಿಲ್ಲ. ಅಮೆರಿಕ ಸರ್ಕಾರ ಪ್ರಕಟಿಸಿದ ಒಸಾಮಾನ ಬಹಿರಂಗ ವಿಚಾರಣೆಗೆ ಒಳಪಡಿಸುವ ಧೈರ್ಯ ಒಬಾಮಾಗೆ ಇರಲಿಲ್ಲ. ಒಸಾಮಾ ನಿಜವಾಗಿಯೂ ಕೊಲೆಯಾಗಿದ್ದಾನೆ ಎನ್ನುವುದಕ್ಕೆ ಪುರಾವೆ ಎಂದರೆ ಪ್ರಕಟಿಸಲಾದ ಡಿಎನ್‌ಎ ವರದಿ ಒಂದೇ. ಒಬಾಮಾ ಸರ್ಕಾರದ ಹಲವು ಅರ್ಧಸತ್ಯ-ಅರ್ಧಸುಳ್ಳುಗಳ ಹೇಳಿಕೆಗಳ ನಂತರ ಹೊರಬಂದ ನಿಜಸಂಗತಿ.

ಪಾಕಿಸ್ತಾನದ ಅಸಹಕಾರದ ಬುರುಡೆ

ಒಸಾಮಾ ಹತ್ಯೆ ಮಾಡಲು ಅಮೆರಿಕದ ವಿಮಾನಗಳು ಪಾಕಿಸ್ತಾನದ ಸಾರ್ವಭೌಮತ್ವವನ್ನು ಉಲ್ಲಂಘಿಸಿ ಅದರ ವಾಯುಪ್ರದೇಶವನ್ನು ಪ್ರವೇಶಿಸಿದವು. ಪಾಕಿಸ್ತಾನದ ಯಾವುದೇ ಸಹಕಾರ ಇಲ್ಲದೆ ಈ ಹತ್ಯೆ ನಡೆಸಿತು ಎಂಬ ಅಮೆರಿಕದ ಬಡಾಯಿ ಬುರುಡೆ ಎಂದು ಹಲವು ಮೂಲಗಳು ತಿಳಿಸಿವೆ. ಸಿಐಎಯ ಕೂಸಾದ ಪಾಕಿಸ್ತಾನದ ಐಎಸ್‌ಐ ಒಸಾಮಾ ತಾಣದ ಮಾಹಿತಿ ಕೊಟ್ಟಿತ್ತು. ಈ ಬಗ್ಗೆ ಪಾಕಿಸ್ತಾನದ ಮಾಜಿ ಮಿಲಿಟರಿ ಸರ್ವಾಧಿಕಾರಿ ಮುಶರಫ್ ಮತ್ತು ಐಎಸ್‌ಐ ಮೇಲೆ ಒತ್ತಡ ಹಾಕಿ ಈ ಮಾಹಿತಿ ಪಡೆಯಲಾಯಿತು. ಅಮೆರಿಕನ್ ದಾಳಿಯ ಸಮಯದಲ್ಲಿ ಗಡಿ ಪ್ರದೇಶದ ರಾಡಾರುಗಳನ್ನು ಸ್ವಿಚ್ ಆಫ್ ಮಾಡಲಾಯಿತು. ಮಿಲಿಟರಿ ಅಥವಾ ಐಎಸ್‌ಐ ನ ಒಂದು ವಿಭಾಗದ ಸಹಕಾರವಿಲ್ಲದೆ ಇವೆಲ್ಲಾ ಸಾಧ್ಯವಿಲ್ಲ. ಐಎಸ್‌ಐ ಮುಖ್ಯಸ್ಥ ಈ ಘಟನೆ ನಂತರ ಸಾರ್ವಜನಿಕವಾಗಿ ಕಾಣಿಸಿಕೊಂಡಿಲ್ಲ. ಆತ ಮಿತ್ರ ದೇಶವೊಂದರಲ್ಲಿ ಇದ್ದು ಸದ್ಯದಲ್ಲೇ ರಾಜಕೀಯ ಆಶ್ರಯ ಪಡೆಯಲಿದ್ದಾನೆ ಎಂದು ವರದಿಯಾಗಿದೆ. ಒಸಾಮಾ ಪಾಕಿಸ್ತಾನದಲ್ಲಿ ಎಲ್ಲಿ ಇದ್ದಾನೆ ಎಂಬುದು ಐಎಸ್‌ಐಗೆ ಗೊತ್ತಿತ್ತು. ಐಎಸ್‌ಐಗೆ ಗೊತ್ತಿದೆ ಅಂತ ಸಿಐಎಗೆ ತಿಳಿದಿತ್ತು.

ಅಫ್ಗಾನಿಸ್ತಾನದಲ್ಲಿ ಅಮೆರಿಕದ ಮಿಲಿಟರಿ ವೈಫಲ್ಯದ ಬಗೆಗಿನ ಟೀಕೆಗೆ ಉತ್ತರ ಕೊಡಲು, ಅಮೆರಿಕದ ಮಿಲಿಟರಿ ಬಲದ ಪ್ರದರ್ಶನ ಮಾಡಲು, ಒಸಾಮಾನ ಹತ್ಯೆ ಘೋಷಿಸಲು ಇದು ಸರಿಯಾದ ಸಮಯ ಎಂದು ಅಮೆರಿಕನ್ ಆಡಳಿತ ನಿರ್ಧರಿಸಿದೆ. ಅಷ್ಟೇ. ಅರಬ್ ಪ್ರದೇಶದಲ್ಲಿ ಪ್ರಜಾಪ್ರಭುತ್ವ-ಪರ ಮತ್ತು ಅಮೆರಿಕ-ವಿರೋಧಿ ಜನತೆಯ ಚಳುವಳಿಗಳ ಅಲೆಯ ಹಿನ್ನೆಲೆಯಲ್ಲಿ, ಅಮೆರಿಕ ಎಲ್ಲಿ ಬೇಕಾದರೂ ಮಿಲಿಟರಿ ಮಧ್ಯಪ್ರವೇಶ ಮಾಡಬಲ್ಲುದು ಎಂದು ತೋರಿಸುವ ತವಕನೂ ಇದೆ. ಪಾಕಿಸ್ತಾನದ ನಾಗರಿಕ ಸರ್ಕಾರವನ್ನು ಇನ್ನಷ್ಟು ದುರ್ಬಲಗೊಳಿಸಿ, ತನ್ನ ಕೂಸಾದ ಮಿಲಿಟರಿಯನ್ನು ಬಲಪಡಿಸುವ ಹುನ್ನಾರವೂ ಇದೆ.

ತಾಲಿಬಾನ್‌ಗೆ ಅಮೆರಿಕದ ಸಿಐಎ ತರಬೇತಿ

ಬುಶ್-ಬಿನ್ ಲಾಡೆನ್ ಸಖ್ಯ

ಒಸಾಮಾ ಬಂದ ಸೌದಿ ಅರೇಬಿಯಾದ ಬಿನ್ ಲಾಡೆನ್ ಕುಟುಂಬ ಭಾರೀ ತೈಲ, ವೈಮಾನಿಕ ಮತ್ತು ಮಿಲಿಟರಿ ಉದ್ಯಮದ ಅಮೆರಿಕನ್ ಬಹು-ರಾಷ್ಟ್ರೀಯ ಕಂಪನಿಗಳಲ್ಲಿ ಭಾರೀ ಹೂಡಿಕೆ ಮತ್ತು ತೀವ್ರ ಆರ್ಥಿಕ ಹಿತಸಕ್ತಿಗಳ ಸಂಬಂಧ ಇತ್ತು. 2001 ವಿಶ್ವ ವಾಣಿಜ್ಯ ಸಂಕೀರ್ಣದ ಮೇಲಿನ ದಾಳಿಗಳ ಕೆಲವೇ ದಿನಗಲ ಮೊದಲು ಬಿನ್ ಲಾಡೆನ್ ಕುಟುಂಬ (ಆ ಮೇಲೆ ಶೇರು ಬಿದ್ದು ಹೋದ) ವೈಮಾನಿಕ ಕಂಪನಿಗಳ ಹೂಡಿಕೆ ವಾಪಸು ಪಡೆದಿತ್ತು. ಅಲ್ಲದೆ ಆ ದಾಳಿಯ ನಂತರ ಎಲ್ಲಾ ವಿಮಾನಯಾನಗಳು ನಿಷೇಧಿತವಾಗಿದ್ದಾಗ ಬಂದ್ ಆಗಿದ್ದಾಗ, ಬಿನ್ ಲಾಡೆನ್ ಕುಟುಂಬ ವಿಶೇಷ ಪರವಾನಿಗೆ ಪಡೆದು ವಿಶೇಷ ವಿಮಾನದಲ್ಲಿ ಅಮೆರಿಕದ ಹೊರಗೆ ಪ್ರಯಾಣ ಮಾಡಿತ್ತು. ಇದು "ಅಮೆರಿಕದ ವೈರಿ ನಂಬರ್ ಒನ್" ಜತೆ ಅಮೆರಿಕದ ಸರ್ಕಾರ ನಡೆದುಕೊಳ್ಳುವ ರೀತಿಯಲ್ಲ. ಬದಲಾಗಿ ಒಸಾಮಾ ಸೇರಿದಂತೆ ಬಿನ್ ಲಾಡೆನ್ ಕುಟುಂಬದ ಜತೆ ಇದ್ದ ಘನಿಷ್ಟ ಸಂಬಂಧ ತೋರಿಸುತ್ತದೆ.

ಅಫ್ಘಾನ್ ಸರ್ಕಾರ ಮತ್ತು ಸೋವಿಯಟ್ ಪತನದ ನಂತರವಷ್ಟೆ ಅಮೆರಿಕನ್ನರಿಗೂ ಒಸಾಮಾಗೂ ಭಿನ್ನಾಭಿಪ್ರಾಯ ಶುರುವಾಗಿದ್ದು. ಪಾಕಿಸ್ತಾನದ ಐಎಸ್‌ಐ ಕೂಸಾದ ಅಫ್ಗಾನ್


ಪುಟ 10 ಕ್ಕೆ



ಅಫಘಾನಿಸ್ತಾನದ ಪ್ರಗತಿಪರ ಅಧ್ಯಕ್ಷ ಡಾ. ನಜೀಬುಲ್ಲಾ ಹತ್ಯೆ ತಾಲಿಬಾನರಿಂದ

ಅಲ್‌ಖೈದಾ ನಾಶವಾಗುತ್ತದೆಯೇ? ಒಸಮಾ ಹತ್ಯೆಯ ಪರಿಣಾಮಗಳು ಏನು?

ಒಸಾಮಾ ಕಟ್ಟಿ ಬೆಳೆಸಿದ ಅಲ್-ಖೈದಾ ಜೆಹಾದಿ ಸಂಘಟನೆ ದುರ್ಬಲವಾಗಿ ನಾಶವಾಗುತ್ತದೆ ಎಂಬುದು ಅಮೆರಿಕನ್ನರ ನಿರೀಕ್ಷೆ. ಅಲ್-ಖೈದಾ ಅಮೆರಿಕದ ಸರ್ಕಾರಗಳು ಅವರ ಅನುಕೂಲಗಳಿಗೆ ಪ್ರಚಾರ ಮಾಡುವಂತೆ, ಜಾಗತಿಕ ಭಯೋತ್ಪಾದನೆಯ ದೈತ್ಯ ಶಕ್ತಿ ಯಾವತ್ತೂ ಆಗಿರಲಿಲ್ಲ. ಅದರ ಅಟಾಟೋಪ ಇದ್ದಿದ್ದು 1980 ರ ದಶಕದಲ್ಲಿ ಅದು ಅಮೆರಿಕದ ಸಿಐಎ ಮತ್ತು ಪಾಕಿಸ್ತಾನದ ಐಎಸ್‌ಐ ಬೆಂಬಲಿತ ಸೋವಿಯೆಟ್-ವಿರೋಧಿ ಗೆರಿಲ್ಲಾ ಹೋರಾಟ ನಡೆಸುತ್ತಿದ್ದಾಗ. ಆಗಲೇ ಅದು ಅಮೆರಿಕ-ಪಾಕಿಸ್ತಾನ ಸರ್ಕಾರಗಳ ಪೂರ್ಣ ಬೆಂಬಲದಿಂದ ತನ್ನ ಜಾಗತಿಕ ಆರ್ಥಿಕ-ಮಿಲಿಟರಿ ಜಾಲ ಮತ್ತು ನೆಲೆಗಳನ್ನು ಸ್ಥಾಪಿಸಿದ್ದು. ಸೋವಿಯಟ್ ಮತ್ತು ಆಗಿನ ಪ್ರಗತಿಪರ ಅಫ್ಘಾನ್ ಸರ್ಕಾರಗಳ ವಿರುದ್ಧದ ಯುದ್ಧವನ್ನು ಒಸಾಮಾಗೆ "ಹೊರಗುತ್ತಿಗೆ" ಕೊಡಲಾಗಿತ್ತು. ಒಸಾಮಾ ಈ ಹೊರಗುತ್ತಿಗೆಯ ಭಾಗವಾಗಿಯೇ ಅಲ್-ಖೈದಾ ಸ್ಥಾಪಿಸಿದ್ದು. ಆ ಸಂಘಟನೆಯ ಎಲ್ಲಾ ಸಂಪನ್ಮೂಲಗಳು ಅಮೆರಿಕನ್ ಸರ್ಕಾರದ್ದು.



ಉತ್ತರ ಪ್ರದೇಶ

ಭೂಸಂಪನ್ಮೂಲಗಳ ಲೂಟಿಗೆ ಪ್ರತಿಭಟನೆ



ಸರಕಾರ ದೊಡ್ಡ ಪ್ರಮಾಣದಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅವನ್ನು ತಮಗೆ ಬೇಕಾದ ಕಂಪನಿಗಳಿಗೆ ಹೆದ್ದಾರಿ ನಿರ್ಮಿಸುವುದಷ್ಟೇ ಅಲ್ಲ, ಟೌನ್‌ಶಿಪ್‌ಗಳನ್ನು ಮತ್ತು ಮಾಲ್‌ಗಳನ್ನು ಕಟ್ಟಲು ವಹಿಸಿಕೊಡುವ ಮಾದರಿಯನ್ನು ಅಂಗೀಕರಿಸಿದೆ. ಈ ಮಾದರಿಯನ್ನು ಇತರ ಹಲವು ರಾಜ್ಯಸರಕಾರಗಳು ಕೂಡ ವಿವಿಧ ಮಟ್ಟಗಳಲ್ಲಿ ಅನುಸರಿಸುತ್ತಿವೆ. ರೈತರ ಮತ್ತು ಭೂಸಂಪನ್ಮೂಲಗಳ ನಗ್ನ ಲೂಟಿ ದೊಡ್ಡ ಬಂಡವಾಳಗರ, ರಿಯಲ್ ಎಸ್ಟೇಟ್ ಕುಳಗಳ ತಿಜೋರಿ ತುಂಬುತ್ತಿದೆ. ಈ ಧೋರಣೆ ತಕ್ಷಣ ನಿಲ್ಲಬೇಕು.

ಉತ್ತರಪ್ರದೇಶದ ಗ್ರೇಟರ್ ನೋಯಿಡಾ ಪ್ರದೇಶದ ಭಟ್ಟ ಪರಸವುಲ್ ಗ್ರಾಮದಲ್ಲಿ ರೈತರ ಪ್ರತಿಭಟನೆ ಮತ್ತೊಮ್ಮೆ ಅಲ್ಲಿ ರಾಜ್ಯ ಸರಕಾರದ ಆಶ್ರಯದಲ್ಲಿ ಆಗುತ್ತಿರುವ ಭೂಕಬಳಿಕೆಯನ್ನು ಎತ್ತಿ ತೋರಿದೆ. ಯಮುನಾ ಎಕ್ಸ್‌ಪ್ರೆಸ್‌ವೇಗಾಗಿ ಭೂಮಿಯ ಅನ್ಯಾಯಪೂರ್ಣ ಸ್ವಾಧೀನದ ವಿರುದ್ಧ ರೈತರು ಪ್ರತಿಭಟಿಸುತ್ತಿದ್ದಾರೆ. ಈ ಸಂಘರ್ಷದಲ್ಲಿ ನಾಲ್ಕು ಮಂದಿ ಪ್ರಾಣ ಕಳಕೊಂಡಿದ್ದಾರೆ. ಇದರಲ್ಲಿ ಇಬ್ಬರು ಪೋಲೀಸಿನವರೂ ಸೇರಿದ್ದಾರೆ.

ಗ್ರೇಟರ್ ನೋಯಿಡಾದಿಂದ ಆಗ್ರಾದ ವರೆಗಿನ ಈ 165 ಕಿ.ಮೀ. ಉದ್ದದ ಎಕ್ಸ್‌ಪ್ರೆಸ್ ಹೆದ್ದಾರಿಯ ಕಾಂಟ್ರಾಕ್ಟನ್ನು ಮಾಯಾವತಿ ಸರಕಾರ ಒಂದು ಖಾಸಗಿ ಕಂಪನಿ ಜೆ.ಪಿ. ಅಸೋಸಿಯೇಟ್ಸ್‌ಗೆ ವಹಿಸಿದೆ. ಇದಕ್ಕಾಗಿ ಗೌತಮ ಬುದ್ಧನಗರದಿಂದ ಆಗ್ರಾದ ವರೆಗಿನ ಜಿಲ್ಲೆಗಳಲ್ಲಿ 2500 ಹೆಕ್ಟೇರು ಭೂಮಿಯನ್ನು ರೈತರಿಂದ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಆದರೆ ಭೂಸ್ವಾಧೀನ ಇಲ್ಲಿಗೇ ನಿಲ್ಲಲಿಲ್ಲ. 'ಯಮುನ ಎಕ್ಸ್‌ಪ್ರೆಸ್‌ವೇ ಕೈಗಾರಿಕಾ ಅಭಿವೃದ್ಧಿ ಪ್ರಾಧಿಕಾರ' ಹೆದ್ದಾರಿಯ ಅಕ್ಕಪಕ್ಕದ ಸಾವಿರಾರು ಹೆಕ್ಟೇರು ಜಮೀನುಗಳನ್ನು ಸ್ವಾಧೀನ ಪಡಿಸಿಕೊಂಡು ರಿಯಲ್ ಎಸ್ಟೇಟ್ ಕಂಪನಿಗಳಿಗೆ ರೈತರಿಗೆ ಕೊಟ್ಟ ಬೆಲೆಗಳ 10-20 ಪಟ್ಟು ಬೆಲೆಗಳಿಗೆ ಮಾರುತ್ತಿದೆ. ಈ ಕಂಪನಿಗಳು ಮತ್ತು ಬಿಲ್ಡರುಗಳು ರೈತರು ಪಡೆದ ಬೆಲೆಗಳ 50ರಿಂದ 100 ಪಟ್ಟು ಬೆಲೆಗಳಿಗೆ ಅವನ್ನು ಮಾರುತ್ತಿದ್ದಾರೆ.

ಡಿಸೆಂಬರ್ 2010ರಲ್ಲಿ ಸರಕಾರ ಒಂದು ಅಧಿಸೂಚನೆ ಹೊರಡಿಸಿ ಈ ಹೆದ್ದಾರಿಯಲ್ಲಿರುವ ಆರು ಜಿಲ್ಲೆಗಳ 1187 ಹಳ್ಳಿಗಳನ್ನು ಈ ಪ್ರಾಧಿಕಾರದ ಅಡಿಗೆ ತಂದಿದೆ. ಇಲ್ಲಿ ನಗರ ಕೇಂದ್ರಗಳನ್ನು ಮತ್ತು ಕೈಗಾರಿಕಾ ಪ್ರದೇಶಗಳನ್ನು ಕಟ್ಟಲಿಕ್ಕಾಗಿ ಹೀಗೆ ಮಾಡಲಾಗಿದೆ ಎಂದಿದೆ ಸರಕಾರ.

ರೈತರೇಕೆ ಸಿಟ್ಟಿಗೆದ್ದಿದ್ದಾರೆ?

ಈ ಕಾಮಗಾರಿಗಳಲ್ಲಿ ಸ್ವಾಧೀನ ಪಡಿಸಿಕೊಂಡ ಭೂಮಿಗೆ ಏನಾಗಿದೆ ಎಂಬುದಕ್ಕೆ ಒಂದು ಉದಾಹರಣೆಯನ್ನು ನೋಡಬಹುದು- ನೋಯಿಡಾದಿಂದ ಗ್ರೇಟರ್ ನೋಯಿಡಾದ ವರೆಗೆ ಸ್ವಾಧೀನಪಡಿಸಿಕೊಂಡ ಭೂಮಿಗೆ ರೈತರಿಗೆ ತೆತ್ತದ್ದು ಚದರ ಅಡಿಗೆ 50 ರಿಂದ 300 ರೂ. ಈಗ ಯಮುನಾ ಎಕ್ಸ್‌ಪ್ರೆಸ್‌ವೇನ ಪಕ್ಕದ ಅದೇ ಸ್ಥಳದಲ್ಲಿ ಜೆಪಿ ಕಂಪನಿ 2500 ಎಕ್ರೆಯ ಕ್ರೀಡಾನಗರವನ್ನು ಕಟ್ಟುತ್ತಿದೆ. ಸೈಟುಗಳನ್ನು ಚದರ ಮೀಟರಿಗೆ 15000 ರೂ. ದರದಲ್ಲಿ ಆ ಕಂಪನಿ ಈಗ ಮಾರುತ್ತಿದೆ.

ರೈತರನ್ನು ಸಿಟ್ಟಿಗೆಬ್ಬಿಸಿರುವ ಸಂಗತಿಯಿದು. ಯಮುನಾ ಹೆದ್ದಾರಿಗುಂಟವೂ ಕಳೆದ ಒಂದು ವರ್ಷದಿಂದ ಜಮೀನನ್ನು ಸರಕಾರ ಸ್ವಾಧೀನ ಪಡಿಸಿಕೊಂಡಿರುವ ರೈತರ ಪ್ರತಿಭಟನೆಗಳು ನಡೆಯುತ್ತಲೇ ಇವೆ. ಅಲಿಗಡ ಜಿಲ್ಲೆಯ ಟಪ್ಪಲ್ ಎಂಬಲ್ಲಿ ಆಗಸ್ಟ್ 2010ರಲ್ಲಿ ಪೋಲೀಸ್ ಗೋಳೀಬಾರಿನಲ್ಲಿ ಮೂವರು ಸತ್ತಿದ್ದರು. ಮಥುರ, ಆಗ್ರ ಮತ್ತು ಗೌತಮ ಬುದ್ಧನಗರದಲ್ಲಿ ರೈತರ ಪ್ರತಿಭಟನೆಗಳು ನಡೆದಿವೆ.

ಉತ್ತರಪ್ರದೇಶ ಸರಕಾರ ದೊಡ್ಡ ಪ್ರಮಾಣದಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅವನ್ನು ಜೆಪಿ ಯಂತಹ ತಮಗೆ ಬೇಕಾದ ಕಂಪನಿಗಳಿಗೆ ಹೆದ್ದಾರಿ ನಿರ್ಮಿಸುವುದಷ್ಟೇ ಅಲ್ಲ, ಟೌನ್‌ಶಿಪ್‌ಗಳನ್ನು ಮತ್ತು ಮಾಲ್‌ಗಳನ್ನು ಕಟ್ಟಲು ವಹಿಸಿಕೊಡುವ ಮಾದರಿಯನ್ನು ಅಂಗೀಕರಿಸಿದೆ. ಟಪ್ಪಲ್ ಪ್ರತಿಭಟನೆಗಳು ನಡೆದದ್ದು ಜೆಪಿ ಕಂಪನಿ ಕಟ್ಟಲಿರುವ ವಸತಿ ಬಡಾವಣೆಗಾಗಿ ಭೂಸ್ವಾಧೀನದ ಪ್ರಶ್ನೆಯ ಮೇಲೆ. ಇನ್ನೊಂದು ಪ್ರಮುಖ ಪ್ರಾಜೆಕ್ಟ್ ಎಂದರೆ, ಗಂಗಾ ಎಕ್ಸ್‌ಪ್ರೆಸ್‌ವೇ. ಅದು ಗ್ರೇಟರ್ ನೋಯಿಡಾದಿಂದ ರಾಜ್ಯದ ಪೂರ್ವಭಾಗದಲ್ಲಿರುವ ಬಲ್ಲಿಯಾ ವರೆಗೆ, 1047 ಕಿ.ಮೀ.ಗಳದ್ದು. ಈ ಹೆದ್ದಾರಿಯ ಇಕ್ಕೆಲಗಳಲ್ಲೂ ವಸತಿ ಬಡಾವಣೆಗಳಿಗೆ ಮತ್ತು ಕೈಗಾರಿಕಾ ಪ್ರದೇಶಗಳಿಗೆ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಜೆಪಿ ಮತ್ತು ಇತರ ಕಂಪನಿಗಳಿಗೆ ಕೊಡಲಾಗುವುದು. ಸುಮಾರು 70,000 ಹೆಕ್ಟೇರುಗಳಷ್ಟು ವಿಸ್ತಾರವಾದ ಭೂಮಿಗಳನ್ನು ರೈತರಿಂದ ಸ್ವಾಧೀನ ಪಡಿಸಿಕೊಳ್ಳಲಾಗುವುದು. ಒಟ್ಟು ಸುಮಾರು 1250 ಹಳ್ಳಿಗಳನ್ನು ಇದು ತಟ್ಟಲಿದೆ ಹಾಗೂ ಅಲ್ಲಿಯ ವಾಸಿಗಳು ಸ್ಥಳಾಂತರಗೊಳ್ಳಬೇಕಾಗುತ್ತದೆ. ಪರಿಸರ ಮಾಲಿನ್ಯ ಮಂಡಳಿಯ ಆಕ್ಷೇಪಗಳಿಂದಾಗಿ ಈ ಯೋಜನೆಯ ಕಾರ್ಯ ಇನ್ನೂ ಆರಂಭಗೊಂಡಿಲ್ಲ.

ಚಮಚಾ ಬಂಡವಾಳಶಾಹಿ

ಈ ಎರಡರಲ್ಲಿಯೂ ಚಮಚಾ ಬಂಡವಾಳಶಾಹಿ ಕೆಲಸ ಮಾಡುತ್ತಿರುವುದನ್ನು ಕಾಣಬಹುದು. ಎರಡರಲ್ಲೂ ಕಾಂಟ್ರಾಕ್ಟನ್ನು ಮಾಯಾವತಿ ಸರಕಾರ ಒಂದೇ ಕಂಪನಿಗೆ ಕೊಟ್ಟಿದೆ. ಯಮುನಾ ಎಕ್ಸ್‌ಪ್ರೆಸ್‌ವೇನಲ್ಲಿ ಆ ಕಂಪನಿಗೆ 35 ವರ್ಷ ಹೆದ್ದಾರಿಸುಂಕ ವಸೂಲಿ ಮಾಡಲು ಅವಕಾಶ ಕೊಟ್ಟಿರುವುದಷ್ಟೇ ಅಲ್ಲ, ವಸತಿ ಬಡಾವಣೆಗಳು, ಕ್ರೀಡಾ ನಗರಗಳು ಇತ್ಯಾದಿಗಳನ್ನು ಕಟ್ಟಲು ದೊಡ್ಡ ಪ್ರಮಾಣದಲ್ಲಿ ಜಮೀನುಗಳನ್ನು ಕೊಡಲಾಗಿದೆ.

ಇದು ರೈತರ ಮತ್ತು ಭೂಸಂಪನ್ಮೂಲಗಳ ನಗ್ನ ಲೂಟಿ ಹಾಗೂ ಆ ಲೂಟಿಯನ್ನು ದೊಡ್ಡ ಬಂಡವಾಳಿಗರಿಗೆ ಮತ್ತು ರಿಯಲ್ ಎಸ್ಟೇಟ್ ಕುಳಗಳಿಗೆ ವಹಿಸಿ ಕೊಡಲಾಗುತ್ತಿದೆ. ರೈತರಿಗೆ ನ್ಯಾಯಯುತ ಪರಿಹಾರ ಸಿಗಬೇಕಷ್ಟೇ ಅಲ್ಲ, ಮರುವಸತಿ, ಪರ್ಯಾಯ ಜೀವನೋಪಾಯಗಳೂ ಮತ್ತು ಭೂಬಳಕೆಯಲ್ಲಿ ವ್ಯತ್ಯಾಸವಾದರೆ ಅದರಿಂದ ಉಂಟಾಗುವ ಲಾಭಗಳಲ್ಲಿ ಪಾಲು ಕೂಡ ಸಿಗಬೇಕಾಗಿದೆ.

ಯುಪಿಎ-2 ಸರಕಾರ ಇದುವರೆಗೆ ಭೂಸ್ವಾಧೀನ ತಿದ್ದುಪಡಿ ಮಸೂದೆಯನ್ನಾಗಲೀ, ಮರುವಸತಿ ಮಸೂದೆಯನ್ನಾಗಲೀ ಸಂಸತ್ತಿನ ಮುಂದೆ ತರುವಲ್ಲಿ ವಿಫಲವಾಗಿದೆ. ಇದನ್ನು ಕೂಡಲೇ ಮಾಡಬೇಕು. ಆದರೆ, ಅಷ್ಟರಿಂದಲೇ ಕಾರ್ಪೊರೇಟ್ ಭೂಕಬಳಿಕೆಯ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲ. ಮಾಯಾವತಿ ಸರಕಾರ ಅಂಗೀಕರಿಸಿರುವ ಧೋರಣೆಯನ್ನು ಎಡಪಕ್ಷಗಳ ನೇತೃತ್ವದಲ್ಲಿ ಇರದ ಇತರ ರಾಜ್ಯಸರಕಾರಗಳು ಕೂಡ ವಿವಿಧ ಮಟ್ಟಗಳಲ್ಲಿ ಅನುಸರಿಸುತ್ತಿವೆ. ರಿಯಲ್ ಎಸ್ಟೇಟ್ ಕಂಪನಿಗಳಿಗೆ ಮತ್ತು ಕಾರ್ಪೊರೇಟ್‌ಗಳಿಗೆ ಪ್ರಭುತ್ವದ ಮಧ್ಯಪ್ರವೇಶದ ಮೂಲಕ ಭೂಮಿಯನ್ನು ಅಗ್ಗ ದರಗಳಲ್ಲಿ ವಹಿಸಿ ಕೊಡುವುದನ್ನು ತಕ್ಷಣವೇ ನಿಲ್ಲಿಸಬೇಕು.

ಚುನಾವಣಾ ಫಲಿತಾಂಶಗಳ ಕುರಿತು ಸಿಪಿಐ(ಎಂ) ಪೊಲಿಟ್ ಬ್ಯೂರೋ

ಪಶ್ಚಿಮಬಂಗಾಳ : ಪಶ್ಚಿಮ ಬಂಗಾಳದ ವಿಧಾನಸಭಾ ಚುನಾವಣೆಗಳಲ್ಲಿ ಎಡರಂಗವು ಭಾರೀ ಸೋಲನ್ನು ಅನುಭವಿಸಿದೆ. ಜನತೆಯ ಈ ತೀರ್ಪನ್ನು ಒಪ್ಪಿಕೊಳ್ಳುವುದಾಗಿ ಸಿಪಿಐ(ಎಂ) ಪಕ್ಷವು ತಿಳಿಸಿದೆ.

ಈ ಚುನಾವಣಾ ಹಿನ್ನಡೆಯ ಫಲಿತಾಂಶದ ಬಗ್ಗೆ ಅತ್ಯಂತ ಎಚ್ಚರದಿಂದ ವಿಶ್ಲೇಷಿಸಿ ಮತ್ತು ಸೂಕ್ತವಾದ ತೀರ್ಮಾನಗಳಿಗೆ ಬರಲಿದೆ. 34 ವರ್ಷಗಳ ನಿರಂತರ ಅಧಿಕಾರ ನಡೆಸಿದ ದಾಖಲೆ ಇದೆ. ಈಗ ಬದಲಾವಣೆಯನ್ನು ಜನತೆ ಆರಿಸಿ ಕೊಂಡಿದ್ದಾರೆ. ಬದಲಾವಣೆಯ ಲಾಭ ತೃಣಮೂಲ ಕಾಂಗ್ರೆಸ್ ಮೈತ್ರಿಗೆ ಸಿಕ್ಕಿದೆ.

ಮೂರು ದಶಕಗಳಿಗೂ ಹೆಚ್ಚು ಕಾಲ ರಾಜ್ಯದಲ್ಲಿ ಅಧಿಕಾರ ನಡೆಸಿದ್ದು ಮತ್ತು ಏಳು ಚುನಾವಣೆಗಳಲ್ಲಿ ಯಶಸ್ಸು ಸಾಧಿಸಿದ್ದು, ಸಂಸದೀಯ ಪ್ರಜಾಪ್ರಭುತ್ವೀಯ ವ್ಯವಸ್ಥೆಯಲ್ಲಿ ಹಿಂದೆಂದೂ ಕಂಡರಿಯದ್ದು. ಭೂ ಸುಧಾರಣೆ, ಪಂಚಾಯತ್ ವ್ಯವಸ್ಥೆಯ ಪ್ರಜಾ ಪ್ರಭುತ್ವೀಕರಣ, ಕೃಷಿ ಕ್ಷೇತ್ರದಲ್ಲಿ ಪ್ರಗತಿ ದುಡಿವ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಖಾತ್ರಿ, ಐಕ್ಯತೆ, ಸಮಗ್ರತೆ ಹಾಗೂ ಕೋಮುಸೌಹಾರ್ದತೆ ಮುಂತಾದವು ಈ ಅವಧಿಯಲ್ಲಿ ಗಮನಾರ್ಹ ಸಾಧನೆಗಳಾಗಿವೆ. ಇವು ಪಶ್ಚಿಮ ಬಂಗಾಳದ ಜನತೆಯ ಐತಿಹಾಸಿಕ ಹೆಗ್ಗಳಿಕೆ ಹಾಗೂ ಸಹಿಷ್ಣುತೆಯ ಪರಂಪರೆಯಾಗಿದೆ.

ಅತ್ಯಂತ ಈ ದುರ್ಗಮ ಅಡ್ಡಿಗಳು

ಪುಟ 15 ಕ್ಕೆ




ಆತ್ಮಹತ್ಯೆ ಮಾಡಿಕೊಂಡ ರೈತ ದಂಪತಿಗಳ ಚಿತ್ರದೊಂದಿಗೆ ಅವರ ಕುಟುಂಬ ಸದಸ್ಯರು

ರೇಷ್ಮೆ ರೈತರ ಆತ್ಮಹತ್ಯೆ - ಬಿಜೆಪಿ ಸರ್ಕಾರದ ಕ್ರೌರ್ಯ
ಐಟಿ ತಂತ್ರಜ್ಞರ ಸ್ಪಂದನ

ದಿಢೀರ್ ರೇಷ್ಮೆ ಬೆಲೆ ಕುಸಿತದಿಂದ ಆಘಾತಗೊಂಡ ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ವಳಗೆರೆ ಹೊಡ್ಡಿಯ ಸ್ವಾಮಿಗೌಡ-ವಸಂತ ಎಂಬ ದಂಪತಿಗಳು ರೇಷ್ಮೆ ವ್ಯವಸಾಯಕ್ಕಾಗಿ ಮಾಡಿಕೊಂಡ 80 ಸಾವಿರ ರೂಪಾಯಿಗಳ ಸಾಲವನ್ನು ತೀರಿಸುವ ಬಗೆಗೆ ಆತಂಕಕ್ಕೆ ಗುರಿಯಾಗಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಐಟಿ ತಂತ್ರಜ್ಞರು ಮತ್ತು ಬಿಪಿಓ ಉದ್ಯೋಗಿಗಳು ಈ ಕುರಿತು ಬೆಂಗಳೂರಿನ ನಗರದ ಟೌನ್‌ಹಾಲ್ ಎದುರು ಪ್ರದರ್ಶನ ನಡೆಸಿದ್ದಾರೆ. ರೈತರ ಸಮಸ್ಯೆಗಳನ್ನು ಅರಿಯುವ ಸಲುವಾಗಿ ಹಳ್ಳಿಗಳಿಗೆ ಭೇಟಿ ನೀಡಿದ್ದಾರೆ.



ಆತ್ಮಹತ್ಯೆ ಮಾಡಿಕೊಂಡ ದಂಪತಿಗಳ ಮೂವರು ಮಕ್ಕಳ ಹೆಸರಿನಲ್ಲಿ ತಲಾ 10 ಸಾವಿರ ರೂಪಾಯಿಗಳ ಠೇವಣಿ ಇಟ್ಟಿದ್ದಾರೆ.

ಆದರೆ ರಾಜ್ಯದ ಬಿಜೆಪಿ ಸರ್ಕಾರ ನೊಂದು ಬೆಂದ ಈ ರೈತ ಕುಟುಂಬದ ಆಸರೆಗೆ ಬರುತ್ತಿಲ್ಲ ಎಂಬುದು ಮಾತ್ರ ಬಿಜೆಪಿ ಸರ್ಕಾರದ ನಿಜವಾದ ಕ್ರೌರ್ಯದ ಮುಖವನ್ನು ತೋರಿಸುತ್ತಿದೆ.

ಬಿ.ಎಂ.ಟಿ.ಸಿ. ಕಾರ್ಮಿಕರ ಸಂಕಟಗಳು

ಪುಟ 5 ರಿಂದ

ಸರಿಪಡಿಸಿಕೊಂಡು ಓಡಿಸ್ತೀರಾ?

ಜಗದೀಶ್: ಮೇಲ್ನೋಟಕ್ಕೆ ಬಣ್ಣದಿಂದ ಚೆನ್ನಾಗಿ ಕಾಣುತ್ತವೆ. ಆದರೆ ಮೆಕ್ಯಾನಿಕಲ್ ಆಗಿ ಯಾವುದೇ ರೀತಿಯಾಗಿಯೂ ಸರಿಯಾದ ಕಂಡಿಷನ್‌ನಲ್ಲಿ ಇರೋದಿಲ್ಲ. ಬಹಳ ಸಮಸ್ಯೆಗಳಿಂದ ಕೂಡಿರುತ್ತವೆ. ಏನಾದ್ರೂ ಪ್ರಾಬ್ಲಂ ಇದೆ ಎಂದು ಚೆಕ್ ಮಾಡಿ ಗಾಡಿ ತೆಗೆಯೋ ಮುಂಚೆ ಹೇಳಿದ್ರೆ 'ಅಡ್ಜೆಸ್ಟ್ ಮಾಡಿಕೊಂಡು ಓಡಿಸ್ರೀ' ಎಂದು ಉತ್ತರ ನೀಡುತ್ತಾರೆ. ಬ್ರೇಕ್ ಇರೋದಿಲ್ಲ. ಕ್ಲಚ್ ಇರೋದಿಲ್ಲ. ಹಳೇ ಟೈರ್, ಕಿತ್ತೋದ ಕನ್ನಡಿ ಒಡೆದ ಹೆಡ್ ಲೈಟ್, ಹಳೇ ಬಿಡಿಭಾಗಗಳ ಜೋಡಣೆ. ಹರಿದ ಶೀಟ್ ಇತ್ಯಾದಿ. ಯಾವುದೇ ಸಮಸ್ಯೆಗಳನ್ನು ನಾವು ಎತ್ತಿ ತೋರಿಸಿದರು ಗಮನ ಕೊಡದೇ ಇಲ್ಲ.



ಅಷ್ಟೋತ್ತಿಗೆ ಸಮಯ ಆಗಿರುತ್ತದೆ. ಗಡಿಬಿಡಿಯಲ್ಲಿ ಸರಿ ಮಾಡಿಕೊಂಡು ಗಾಡಿ ತೆಗೆದುಕೊಂಡು ಹೋದ್ರೆ, ಏನಾದ್ರೂ ಹಂಪ್ಸ್‌ಗಳು, ಸಿಗ್ನಲ್‌ಗಳಲ್ಲಿ ಒಂದು ಚೂರು ಹೆಚ್ಚು ಕಮ್ಮಿ ಆದ್ರೆ ನಮ್ಮ ಮೇಲೆ ಕಂಪ್ಲೆಂಟ್ ಬರಿತಾರೆ. ದಂಡ ಹಾಕುತ್ತಾರೆ. ನೀವು ಸರಿಯಾಗಿ ಚೆಕ್ ಮಾಡಿ ಗಾಡಿ ತರಬೇಕಾಗಿತ್ತು ಎಂದು ಆರೋಪ ಮಾಡುತ್ತಾರೆ. ಚಾಲಕನ ನಿರ್ಲಕ್ಷ್ಯದಿಂದ ಅಪಘಾತ ಎಂದು ಬರೆದು ಹೋಗುತ್ತಾರೆ. ಇಷ್ಟೊಂದು ಟ್ರಾಫಿಕ್ ವಾಹನಗಳಲ್ಲಿ ಎಲ್ಲಾದರೂ ಒಂದು ಚೂರು ಟಚ್ ಆದ್ರೆ, ಏನಾದ್ರೂ ಡ್ಯಾಮೇಜ್ ಆಗಿ ಒಡೆದು ಹೋದ್ರೆ, ನಮ್ಮ ಸಂಬಳದಿಂದ ಕಟ್ಟು ಮಾಡುತ್ತಾರೆ. ಬಹಳ ಹೆದರಿಕೆಯಿಂದ ಜೀವಾನ ಕೈಯಲ್ಲಿ ಹಿಡಿದುಕೊಂಡು ವಾಹನ ಓಡಿಸಬೇಕಾದ ಪರಿಸ್ಥಿತಿ ಆತಂಕ, ಭಯ, ನೆಮ್ಮದಿ ಇಲ್ಲದಂತೆ ಆಗಿದೆ.

ಪ್ರ: ಕಂಡಕ್ಟರ್‌ಗೆ ಫೈನ್-ದಂಡ ಹಾಕ್ತಾರೆ, ನಿಮಗೆ ಏನಾದರೂ ದಂಡ ವಿಧಿಸುವುದು ಇದೆಯಾ?

ಜಗದೀಶ್- ನಮಗೆ ಸಾರಥಿಗಳು ಬಹಳ ತೊಂದರೆ ಕೊಡುತ್ತಾರೆ. ನೋಡಿ ಈವತ್ತು ಬೆಂಗಳೂರಿನ ಜನಸಂಖ್ಯೆಯಲ್ಲಿ ಬಿಎಂಟಿಸಿಗೆ ಜನ ಹೇಗೆ ಮುತ್ತಿಕೊಳ್ಳುತ್ತಾರೆ. ಹಿಂದೆ ಮುಂದೆ ವಾಹನ ದಟ್ಟಣೆ. ಈ ನಡುವೆ ನಾವೇನಾದರೂ ಡೋರ್ ಹಾಕಿಲ್ಲ ಅಂದ್ರೆ ಬಂದು ಫೈನ್ ಹಾಕಿ ದುಡ್ಡು ಕಿತ್ತುಕೊಳ್ತಾರೆ, ಏನಾದರೂ ಕಾನೂನು ಹಾಗೆ ಹೀಗೆ ಅಂತ ಮಾತಾಡಿದರೆ 'ರೆಫ್ಯೂಜ್' ಅಂತ ಬರಿತೀನಿ ಎಂದು ಬೆದರಿಸುತ್ತಾರೆ. ಒಟ್ಟಿನಲ್ಲಿ ನಮ್ಮ ಕೆಲಸ ನರಕವಾಗಿದೆ.

(ಸಂದರ್ಶನ ನೀಡಿದ ಕಾರ್ಮಿಕರ ಹೆಸರು ಬದಲಾಯಿಸಲಾಗಿದೆ.)

ಲಾಡೆನ್ ಹತ್ಯೆ....

ಪುಟ 8 ರಿಂದ

ತಾಲಿಬಾನ್ ಮತ್ತು ನಂತರ ಹುಟ್ಟಿದ ಪಾಕಿಸ್ತಾನಿ ತಾಲಿಬಾನ್ ಎಲ್ಲಾ ಸಿಐಎ ಬೆಂಬಲ ಆಶೀರ್ವಾದದಿಂದ ಹುಟ್ಟಿದ ಸಂಘಟನೆಗಳೇ. ಅವುಗಳ ಜತೆ ಸಿಐಎಯ ಕರುಳ ಬಳ್ಳಿ ಸಂಬಂದ ಎಂದೂ ಕಡಿದಿರಲಿಲ್ಲ. 2001 ವಿಶ್ವ ವಾಣಿಜ್ಯ ಸಂಕೀರ್ಣದ ಮೇಲಿನ ದಾಳಿಗಳ ನಂತರ ಮಾತ್ರ ಇವು ಭಯೋತ್ಪಾದಕ ಎಂದು ಘೋಷಿಸಿದ್ದು. ಈ ದಾಳಿ ಸಹ 2001 ವಿಶ್ವ ವಾಣಿಜ್ಯ ಸಂಕೀರ್ಣದ ಮೇಲಿನ ದಾಳಿಗಳ ಬುಶ್ ಜಾಗತಿಕ ತಂತ್ರಗಳಿಗಾಗಿ ಅಲ್-ಖೈದಾಗೆ "ಹೊರಗುತ್ತಿಗೆ" ಮಾಡಲಾದ ದುಷ್ಕೃತ್ಯ ಎಂದು ಬಲವಾಗಿ ನಂಬುವವರೂ ಇದ್ದಾರೆ. ಇರಾಕ್ ಯುದ್ಧದ ಸಮಯದಲ್ಲಿ ಸದ್ದಾಂ ಹುಸೇನ್ ಜತೆ ಅಲ್-ಖೈದಾ ಸಂಬಂಧ ಇತ್ತು ಎಂದು ಬುಶ್ ಪ್ರತಿಪಾದಿಸಿದ್ದು ಹಸಿ ಸುಳ್ಳು ಎಂದು ಈಗ ಅವಿವಾದಿತವಾಗಿ ಸಿದ್ಧವಾಗಿದೆ. ಅಲ್-ಖೈದಾ "ಜಾಗತಿಕ ಜೆಹಾದಿ ಭಯೋತ್ಪಾದಕ" ಬೆದರು ಬೊಂಬೆಯಾಗಿ ಉತ್ತಮ ಸೇವೆ ಸಲ್ಲಿಸಿದೆ. ಜಾಗತಿಕವಾಗಿಯೂ ಮತ್ತು ಅರಬ್ ದೇಶಗಳಲ್ಲಿ ಅದು ಈಗಾಗಲೇ ಸಾಕಷ್ಟು ದುರ್ಬಲವಾಗಿದೆ.

ಜೆಹಾದಿ ಭಯೋತ್ಪಾದನೆ ನಾಶವಾಗುತ್ತದೆಯೆ ?

ಈ ಹತ್ಯೆ ಅದನ್ನು ಸಬಲೀಕರಿಸಿದರೂ ಆಶ್ಚರ್ಯವಿಲ್ಲ. ಭಯೋತ್ಪಾದಕ ಸಂಘಟನೆಗಳು ಒಬ್ಬ ನಾಯಕನ ಮೇಲೆ ಅವಲಂಬಿತವಾಗಿರುವುದಿಲ್ಲ. ಅವುಗಳ ಸಿದ್ಧಾಂತಕ್ಕೆ ಜನತೆಯಲ್ಲಿ ಇರುವ ಅಪೀಲ್, ಅದರ ಮಿಲಿಟರಿ-ಆರ್ಥಿಕ ಬೆಂಬಲ ಇರುವ ವರೆಗೆ ಅವುಗಳು ಇರುತ್ತವೆ. 2002 ರಿಂದ ಈ ವರೆಗೆ ಪಾಕಿಸ್ತಾನ ಸರ್ಕಾರದ ಸಕ್ರಿಯ ಬೆಂಬಲ ಮತ್ತು ಅಮೆರಿನ್ ಸರ್ಕಾರದ ಮೌನ ಸಮ್ಮತಿಯಿಂದಲೇ ಅದು ಬದುಕಿರುವುದು. 2002 ರಿಂದ ಒಸಾಮಾ ಈಗಿನ ನೆಲೆಯಿಂದ ಸಂಘಟನೆ ನಡೆಸುತ್ತಿದ್ದ ಎಂಬುದು ಇದಕ್ಕೆ ಪುರಾವೆ. ಅಮೆರಿಕನ-ಪಾಕ್ ಆರ್ಥಿಕ-ಮಿಲಿಟರಿ ಬೆಂಬಲ ಇದ್ದಕ್ಕಿದ್ದ ಹಾಗೆ ಅಲ್-ಖೈದಾಗೆ ನಿಂತು ಹೋಗುತ್ತದೆ ಎನ್ನುವುದಕ್ಕೆ ಯಾವ ಆಧಾರವೂ ಇಲ್ಲ. ಈ ಬೆದರು ಬೊಂಬೆಯ ಪ್ರಯೋಜನ ಅಮೆರಿಕನ-ಪಾಕ್ ಆಳುವ ವರ್ಗಗಳಿಗೆ ಇರುವ ವರೆಗೆ ಅದು ದುರ್ಬಲವಾಗುವುದಿಲ್ಲ. ಅದು ದುರ್ಬಲವಾದರೂ ಅದರ ದಾಯಾದಿ ಸಂಬಂಧಿಗಳಾದ ತಾಲಿಬಾನ್, ಲಷ್ಕರ್-ಎ-ತೊಯ್ಬಾ ಇತ್ಯಾದಿ ಇವೆ. ಭಯೋತ್ಪಾದಕತೆ ಸಾಯುವುದಿಲ್ಲ.

ಜೆಹಾದಿ ಭಯೋತ್ಪಾದಕತೆಯನ್ನು ಹುಟ್ಟು ಹಾಕಿ ಸಾಕಿದ್ದು ಅಮೆರಿಕನ್ ಸಾಮ್ರಾಜ್ಯಶಾಹಿ. ಅಮೆರಿಕ ಕಳೆದ ಎರಡು ದಶಕಗಳಲ್ಲಿ ಪ್ರದರ್ಶಿಸಿದ ಜಾಗತಿಕ ಮಿಲಿಟರಿ "ಪ್ರಭುತ್ವ ಭಯೋತ್ಪಾದಕತೆ", ಮುಸ್ಲಿಂ-ವಿರೋಧಿ ಅಪಪ್ರಚಾರ ಅದನ್ನು ಗಟ್ಟಿಗೊಳಿಸಿದೆ. ಅದನ್ನು ಬದಲಿಸುವವರೆಗೆ ಜೆಹಾದಿ ಭಯೋತ್ಪಾದಕತೆ ನಿಲ್ಲುವುದಿಲ್ಲ. ಅಂತಹ ಯಾವ ಲಕ್ಷಣಗಳೂ ಇಲ್ಲ. ಬದಲಾಗಿ ಅವು ತೀವ್ರವಾಗುವ ಎಲ್ಲಾ ಲಕ್ಷಣಗಳು ಇವೆ. ಲಿಬ್ಯಾದ ಮೇಲೆ ಅಮೆರಿಕನ್ ದಾಳಿ, ಬಹ್ರೈನ್-ಯೆಮೆನುಗಳಲ್ಲಿ ಅಲ್ಲಿನ ಸರ್ವಾಧಿಕಾರಿಗಳಿಗೆ ಮಿಲಿಟರಿ ಬೆಂಬಲ ಇದನ್ನು ಸ್ಪಷ್ಟವಾಗಿ ತೋರಿಸುತ್ತವೆ,

ಪಾಕಿಸ್ತಾನ ಮತ್ತು ಇತರ ಹಲವು ಮುಸ್ಲಿಂ ದೇಶಗಳಲ್ಲಿ ಅಮೆರಿಕ-ವಿರೋಧಿ ಭಾವನೆಗಳು ಗಟ್ಟಿಯಾಗಲಿವೆ. ಹೆಚ್ಚಿನ ದೇಶಗಳಲ್ಲಿ ಈಗಿನ ರಾಜಕೀಯ ಪರಿಸ್ಥಿತಿ ಗಮನಕ್ಕೆ ತೆಗೆದುಕೊಂಡರೆ ಇದು ಮೂಲಭೂತವಾದಿ ಭಯೋತ್ಪಾದಕ ಜೆಹಾದಿ ಶಕ್ತಿಗಳನ್ನು ಅಪಾರವಾಗಿ ಬಲಪಡಿಸಲಿದೆ. ಪಾಕಿಸ್ತಾನ, ಅಫ್ಘಾನಿಸ್ತಾನ ಮತ್ತು ಇತರ ಮುಸ್ಲಿಂ ದೇಶಗಳಲ್ಲಿ ಜೆಹಾದಿ ಶಕ್ತಿಗಳನ್ನು ಮೂಲೆಗುಂಪು ಮಾಡುವ ಶಕ್ತಿ ಇರುವ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ದುರ್ಬಲಗೊಳಿಸಲಿದೆ.

ಒಟ್ಟಾರೆಯಾಗಿ ಒಸಾಮಾ ಹತ್ಯೆ ಅಂತರ್ರಾಷ್ಟ್ರೀಯ ಕಾನೂನುಗಳು, ಪ್ರಾಥಮಿಕ ಮಾನವ ಹಕ್ಕುಗಳನ್ನು ಉಲ್ಲಂಘಿಸುವ ಜಘನ್ಯ ಅಪರಾಧ ಮಾತ್ರವಲ್ಲ. ಭಯೋತ್ಪಾದನೆಯ ವಿರುದ್ಧ ಹೋರಾಟಕ್ಕೂ ಕೆಡುಕನ್ನೇ ಉಂಟು ಮಾಡುತ್ತವೆ. ○

ವೃತ್ತಿ ಶಿಕ್ಷಣ ಬಿಕ್ಕಟ್ಟು

ಏನಿದು ಶೀರ್ಷಿಕೆ ತಪ್ಪಾಗಿದೆ ಎಂದು ಭಾವಿಸಿದಿರಾ.. ಇಲ್ಲ ಅದು ಸರಿಯಾಗಿದೆ ಸತ್ಯವಾಗಿರುವುದರಿಂದ ಸ್ವಲ್ಪ ಕಷ್ಟವಾಗಿದೆ!

ವೃತ್ತಿ ಶಿಕ್ಷಣ ಪ್ರವೇಶ ಪರೀಕ್ಷೆ ಮುಗಿಯಿತು (ಸಿಇಟಿ) ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ಪ್ರಕಟವಾಗಿದೆ. ಇಷ್ಟೆಲ್ಲಾ ಆದರೂ ರಾಜ್ಯದಲ್ಲಿ ಎಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಸೀಟು ಹಂಚಿಕೆಯಾಗಲೀ, ಶುಲ್ಕ ನಿಗದಿಯಾಗಲೀ ಇನ್ನು ಅಂತಿಮಗೊಳ್ಳದಿರುವುದು ರಾಜ್ಯದ ವಿದ್ಯಾರ್ಥಿ, ಪೋಷಕರು ಮತ್ತು ಶಿಕ್ಷಣ ಪ್ರೇಮಿಗಳಲ್ಲಿ ಆತಂಕ ಮೂಡಿಸಿದೆ. ಪ್ರತಿ ವರ್ಷ ಇಷ್ಟರೊಳಗಾಗಲೇ ಖಾಸಗೀ ಶಿಕ್ಷಣ ಸಂಸ್ಥೆಗಳೊಂದಿಗೆ ಮಾತುಕತೆಯ ಹೆಸರಿನಲ್ಲಿ ಒಳ ಒಪ್ಪಂದವನ್ನು ಮಾಡಿಕೊಂಡು ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಿ ಪ್ರವೇಶಾತಿಗೆ ಚಾಲನೆ ನೀಡುತ್ತಿತ್ತು. ಆದರೆ ಪ್ರಸಕ್ತ ವರ್ಷ ಮಾತ್ರ ಇದು ಇನ್ನೂ ಸಾಧ್ಯವಾಗಿಲ್ಲ.

ಶುಲ್ಕ ಹೆಚ್ಚಳಕ್ಕೆ ಖಾಸಗೀ ಶಿಕ್ಷಣ ಸಂಸ್ಥೆಗಳ ಪಟ್ಟು:

ಪ್ರಸಕ್ತ ಸಾಲಿನಲ್ಲಿ ಪ್ರವೇಶಾತಿಗೆ ಒಪ್ಪಬೇಕಾದರೆ ಎಂಜಿನಿಯರಿಂಗ್ ಶುಲ್ಕವನ್ನು 30 ಸಾವಿರದಿಂದ 50 ಸಾವಿರಕ್ಕೆ ಹೆಚ್ಚಿಸಬೇಕೆಂದು ಹಟ ಹಿಡಿದವು. ಎರಡು ಮೂರು ಸುತ್ತಿನ ಮಾತುಕತೆ ವಿಫಲವಾದ ಮೇಲೆ ರಾಜ್ಯ ಸರ್ಕಾರ ಎಂಜಿನಿಯರಿಂಗ್ ಶುಲ್ಕವನ್ನು 32,500 ಕ್ಕೆ ಹೆಚ್ಚಿಸಲು ಮತ್ತು ಶೇ. 5 ರಷ್ಟು ಸರ್ಕಾರಿ ಸೀಟುಗಳನ್ನು ಖಾಸಗಿಯವರಿಗೆ ಬಿಟ್ಟುಕೊಡಲು ಮುಂದಾಯಿತು. ಇದಕ್ಕೆ ಕಾಮೆಡ್-ಕೆ ಒಪ್ಪದಿದ್ದಾಗ ರಾಜ್ಯ ಸರ್ಕಾರ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಒಂದು ಸುವರ್ಣಾವಕಾಶವನ್ನು ಕಲ್ಪಿಸಿಕೊಟ್ಟಿತು. ಅದೇನೆಂದರೆ ನ್ಯಾಯಮೂರ್ತಿ ಪದ್ಮರಾಜ್ ಸಮಿತಿಯ ಶಿಫಾರಸ್ಸಿನಂತೆ ಶುಲ್ಕ ನಿಗದಿಪಡಿಸಲು ಒಪ್ಪಿಗೆ ನೀಡಿತ್ತು. ಇದೇ ಇಂದಿನ ಇಡೀ ಬಿಕ್ಕಟ್ಟಿಗೆ ಮೂಲ ಕಾರಣ ಇಂತಹ ಅವಕಾಶಕ್ಕಾಗಿ ಕಾಯುತ್ತಿದ್ದ ಖಾಸಗಿ ಶಿಕ್ಷಣ ಸಂಸ್ಥೆಗಳು ಪದ್ಮರಾಜ್ ಆಯೋಗದ ಶಿಫಾರಸ್ಸಿನಂತೆ ಶುಲ್ಕ ನಿಗದಿಗೆ ಪಟ್ಟು ಹಿಡಿದವು.

ನಾಯಿಬಾಲವನ್ನು ಅಲ್ಲಾಡಿಸಬೇಕು, ಆದರೆ ಬಿಜೆಪಿ ಸರ್ಕಾರದಲ್ಲಿ ಬಾಲವೇ ನಾಯಿಯನ್ನು ಅಲ್ಲಾಡಿಸುತ್ತಿದೆ. ಅಂದರೆ ಏನರ್ಥ?

ಹೆಚ್.ಆರ್.ನವೀನ್‌ಕುಮಾರ್


ಖಾಸಗೀ ಸಂಸ್ಥೆಗಳ ಹಿಡಿತದಲ್ಲಿ ರಾಜ್ಯ ಸರ್ಕಾರ

ನ್ಯಾ.ಪದ್ಮರಾಜ್ ಆಯೋಗದ ಶಿಫಾರಸ್ಸು ಅವೈಜ್ಞಾನಿಕ:

ರಾಜ್ಯದಲ್ಲಿರುವ ವೃತ್ತಿಶಿಕ್ಷಣ ಸಂಸ್ಥೆಗಳಿಗೆ ಶುಲ್ಕ ನಿಗದಿ ಮಾಡಲೆಂದು ಕಾಲೇಜುಗಳಿಗೂ ಭೇಟಿ ನೀಡಿ ಆಯಾಯ ಕಾಲೇಜುಗಳ ಸೌಲಭ್ಯಗಳಿಗೆ ಅನುಗುಣವಾಗಿ ಒಂದೊಂದು ರೀತಿಯ ಶುಲ್ಕಗಳನ್ನು ನಿಗದಿಗೊಳಿಸಿತು. ಇದು ಅತ್ಯಂತ ಅವೈಜ್ಞಾನಿಕವಾದ ಶಿಫಾರಸ್ಸಾಗಿದೆ. ಏಕೆಂದರೆ ಯಾವುದೇ ಒಂದು ಎಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಬೇಕಾದರೂ ಅಖಿಲ ಭಾರತ ತಾಂತ್ರಿಕ ಪರಿಷತ್ (ಎಐಸಿಟಿಇ) ನ ಮಾನದಂಡಗಳನ್ನು ಅನುಸರಿಸಿದರೆ ಮಾತ್ರ ಕಾಲೇಜು ಸ್ಥಾಪಿಸಲು ಮತ್ತು ನಡೆಸಲು ಸಾಧ್ಯ. ಅದೇ ರೀತಿ ವೈದ್ಯಕೀಯ ಕಾಲೇಜೊಂದನ್ನು ಸ್ಥಾಪಿಸಬೇಕಾದರೂ ಭಾರತೀಯ ವೈದ್ಯಕೀಯ ಪರಿಷತ್ತಿನ (ಎಂಸಿಐ) ನಿಯಮಗಳನ್ನು ಅನುಸರಿಸಿದರೆ ಮಾತ್ರ ಕಾಲೇಜು ಆರಂಭಕ್ಕೆ ಅನುಮತಿ ದೊರೆಯುತ್ತದೆ. ಹೀಗಿರುವಾಗ ಎಲ್ಲ ಕಾಲೇಜುಗಳು ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು. ಆದರೆ ಕೆಲವು ಕಾಲೇಜುಗಳು ಅನಗತ್ಯವಾಗಿ ಕಟ್ಟಡ, ಹವಾನಿಯಂತ್ರಿತ ಕೊಠಡಿ, ಅದ್ದೂರಿ ವೆಚ್ಚದ ಉದ್ಯಾನವನಗಳನ್ನು ನಿರ್ಮಿಸಿಕೊಂಡಿದ್ದಾರೆ. ಇಂತಹ ಕಾಲೇಜುಗಳಿಗೆ ನ್ಯಾ. ಪದ್ಮರಾಜ್ ಆಯೋಗದ ಶಿಫಾರಸ್ಸಿನಂತೆ ಅತ್ಯಧಿಕ ಶುಲ್ಕವನ್ನು ನಿಗದಿಗೊಳಿಸಲಾಗಿದೆ. ಉದಾ: ಎಂಜಿನಿಯರಿಂಗ್ ಶುಲ್ಕ ಕನಿಷ್ಠ 55 ಸಾವಿರದಿಂದ ಗರಿಷ್ಠ 1 ಲಕ್ಷ ಮೀರುವ ಸಾಧ್ಯತೆಗಳಿವೆ. ವೈದ್ಯಕೀಯಕ್ಕೆ ಸರಾಸರಿ 2.5ಲಕ್ಷದಿಂದ 3 ಲಕ್ಷವಾಗುವ ಅಂದಾಜಿದೆ.

ಹಾಗಾಗಿ ಇದೊಂದು ಅವೈಜ್ಞಾನಿಕವಾದಂತೆ ಶಿಫಾರಸ್ಸು ಮಾತ್ರವಲ್ಲದೆ ಖಾಸಗೀ ಶಿಕ್ಷಣ ಸಂಸ್ಥೆಗಳ ಪರವಾದಂತ ಬಡ ಪ್ರತಿಭಾನ್ವಿತ ವಿದ್ಯಾರ್ಥಿಗಳ ವಿರೋಧಿಯಾದ ಶಿಫಾರಸ್ಸಾಗಿದ್ದು ಇದನ್ನು ಎಲ್ಲರೂ ವಿರೋಧಿಸುತ್ತಿದ್ದಾರೆ.

ಆದರೆ ಇಂತಹ ಒಂದು ಸಮಿತಿಯನ್ನು ರಚಿಸಲು ಮತ್ತು ಶಿಫಾರಸ್ಸು ಅವೈಜ್ಞಾನಿಕ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳ ಪರವಾಗಿದೆ ಎಂದು ತಿಳಿದಿದ್ದರೂ ಇದಕ್ಕೆ ಅವಕಾಶ ಕಲ್ಪಿಸಿಕೊಟ್ಟಿರುವ ಬಿಜೆಪಿ ಸರ್ಕಾರದ ನೀತಿಗಳನ್ನು ಗಮನಿಸಿದ ಎಂಥವರಿಗೂ ರಾಜ್ಯ ಸರ್ಕಾರ ಬಡವರ ಪರ ಇಲ್ಲವೆಂಬುದು ಸ್ಪಷ್ಟವಾಗುತ್ತದೆ.



ರಾಜಧಾನಿಯಲ್ಲಿ ಪ್ರತಿಭಟನೆ

ಪ್ರಸಕ್ತ ಸಾಲಿನ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ:

ಅಂತಿಮಗೊಳ್ಳದ ಇದುವರೆಗಿನ ಮಾತುಕತೆಯ ಪ್ರಕಾರ ಸೀಟು ಹಂಚಿಕೆಯಲ್ಲಿ ಮೆಡಿಕಲ್ ಸರ್ಕಾರಿ ಶೇ.42, ಖಾಸಗಿ ಶೇ.58, ಎಂಜಿನಿಯರಿಂಗ್ ಸರ್ಕಾರಿ ಶೇ.45, ಖಾಸಗಿ ಶೇ.55, ಡೆಂಟಲ್ ಸರ್ಕಾರಿ ಶೇ.35, ಖಾಸಗಿ ಶೇ.65ರಂತೆ ಖಾಸಗಿಯವರಿಗೆ ಪ್ರಸಕ್ತ ವರ್ಷದ ಸರ್ಕಾರಿ ಸೀಟುಗಳನ್ನು ಶೇ.5 ರಷ್ಟು ಬಿಟ್ಟುಕೊಟ್ಟಿದೆ.

ಶುಲ್ಕ ಮೆಡಿಕಲ್ ಸರ್ಕಾರಿ ರೂ.42, 500, ಖಾಸಗಿ ರೂ.3,35,000, ಎಂಜಿನಿಯರಿಂಗ್ ಸರ್ಕಾರಿ ರೂ.32,000 ಖಾಸಗಿ ರೂ.2,35,000 ನಂತೆ ನಿಗದಿಯಾಗಿದೆ. ಶೇ.15 ರಷ್ಟು ಅನಿವಾಸಿ ಭಾರತೀಯರ ಸೀಟುಗಳಿಗೆ ಅನಿಯಂತ್ರಿತ ಸೀಟುಗಳನ್ನು ನಿಗದಿಗೊಳಿಸಲು ಸರ್ಕಾರ ಅವಕಾಶ ಕಲ್ಪಿಸಿಕೊಟ್ಟಿದೆ.

ವಿದ್ಯಾರ್ಥಿ ವಿರೋಧಿ ರಾಜ್ಯ ಸರ್ಕಾರದ ವಿರುದ್ಧ ವ್ಯಾಪಕ ಪ್ರತಿಭಟನೆ

ರಾಜ್ಯ ಸರ್ಕಾರದ ಇಂತಹ ಶಿಕ್ಷಣ ವಿರೋಧಿ ನೀತಿಗಳನ್ನು ವಿರೋಧಿಸಿ ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್‌ಎಫ್‌ಐ) ನೇತೃತ್ವದಲ್ಲಿ ವಿದ್ಯಾರ್ಥಿಗಳು ವ್ಯಾಪಕ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ. ಇದೇ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಬಾಲಂಗೋಚಿಯಾಗಿರುವ ಎಬಿವಿಪಿ ಪ್ರತಿಭಟನೆ ಎಂಬ ನಾಟಕವನ್ನಾಡಿ ರಾಜ್ಯ ಸರ್ಕಾರವನ್ನು ಬಚಾವ್ ಮಾಡಲು ಪ್ರಯತ್ನಿಸುತ್ತಿದೆ.

ವೃತ್ತಿ ಶಿಕ್ಷಣ ಬಿಕ್ಕಟ್ಟು ಪ್ರಾರಂಭವಾದಾಗಿನಿಂದ ಪ್ರಾಮಾಣಿಕವಾಗಿ ಹೋರಾಟಗಳನ್ನು ನಡೆಸಿಕೊಂಡು ಬರುತ್ತಿರುವ ಎಸ್‌ಎಫ್‌ಐ ಮತ್ತು ಶಿಕ್ಷಣ ತಜ್ಞ ಪ್ರಕಾರ ವೃತ್ತಿ ಶಿಕ್ಷಣ ಬಿಕ್ಕಟ್ಟಿಗೆ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬೇಕಾದರೆ ಮೊದಲಿಗೆ ಖಾಸಗೀ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರವಿರುವ ಕೇಂದ್ರೀಯ ಶಾಸನವನ್ನು ಜಾರಿಗೊಳಿಸಬೇಕು. (ಈ ಅಧಿಕಾರ ಸಿಕ್ಕರೂ ಬಿಜೆಪಿ ಸರ್ಕಾರ ಹೇಗೆ ಬಳಕೆ ಮಾಡುತ್ತದೆ ಎಂಬ ಅನುಮಾನ ಇದ್ದೇ ಇದೆ) ಸರ್ಕಾರವೇ ಹೆಚ್ಚು ಸರ್ಕಾರಿ ಎಂಜಿನಿಯರಿಂಗ್ ಮತ್ತು ಮೆಡಿಕಲ್ ಡೆಂಟಲ್ ಕಾಲೇಜುಗಳನ್ನು ಸ್ಥಾಪಿಸಬೇಕು ಮತ್ತು ದುಬಾರಿ ಶುಲ್ಕ ನಿಗದಿ ಮಾಡಬಾರದು ಮತ್ತು ನ್ಯಾಯಮೂರ್ತಿ ಪದ್ಮರಾಜ್ ಆಯೋಗ ದಂತಹ ಶಿಫಾರಸ್ಸುಗಳನ್ನು ತಿರಸ್ಕರಿಸಬೇಕು.

ಮೇಲಿನ ಎಲ್ಲ ಬೆಳವಣಿಗೆಗಳನ್ನು ಗಮನಿಸಿದರೆ ಸಾಮಾನ್ಯ ಜನರು ಮಾತನಾಡುವ ಮಾತು ನೆನಪಿಗೆ ಬರುತ್ತದೆ. ಅದೇನೆಂದರೆ "ನಾಯಿ ಬಾಲವನ್ನು ಅಲ್ಲಾಡಿಸಬೇಕು, ಆದರೆ ಬಾಲವೇ ನಾಯಿಯನ್ನು ಅಲ್ಲಾಡಿಸುತ್ತಿದೆ". ಅಂದರೆ ರಾಜ್ಯ ಸರ್ಕಾರ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಬೇಕು. ಆದರೆ ಖಾಸಗೀ ಶಿಕ್ಷಣ ಸಂಸ್ಥೆಗಳೇ ರಾಜ್ಯ ಸರ್ಕಾರವನ್ನು ನಿಯಂತ್ರಿಸುತ್ತಿವೆ.

ಗುಲ್ಬರ್ಗಾದಲ್ಲಿ ಪ್ರತಿಭಟನೆ....



'ಮರ್ಯಾದಾ ಹತ್ಯೆ' ನಮ್ಮ ದೇಶದ ಮೇಲೊಂದು ಕಳಂಕ - ಸುಪ್ರೀಂಕೋರ್ಟ್


ಇದು ಅನಾಗರಿಕ, ಪಾಳೆಯಗಾರೀ ಆಚರಣೆ, ಇದನ್ನು ಕಿತ್ತೊಗೆಯಬೇಕು, ನ್ಯಾಯಾಲಯಗಳು ಇದನ್ನು 'ಅಪರೂಪದಲ್ಲಿ ಅಪರೂಪವಾದ' ವಿಧದಲ್ಲಿ ಪರಿಗಣಿಸಿ ಮರಣದಂಡನೆ ವಿಧಿಸಬೇಕು ಎಂದು ದೇಶದ ಸರ್ವೋಚ್ಚ ನ್ಯಾಯಾಲಯ ಇನ್ನೊಮ್ಮೆ ನಿರ್ದೇಶನ ನೀಡಿದೆ. ತನ್ನಮಗಳನ್ನೇ ಕೊಂದ ಭಗವಾನ್ ದಾಸ್‌ಗೆ ಎಂಬಾತ ತನಗೆ ದಿಲ್ಲಿ ಸೇಶನ್ಸ್ ಕೋರ್ಟ್ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ವಜಾ ಮಾಡುತ್ತ ಸುಪ್ರಿಂ ಕೋರ್ಟ್ ಈ ನಿರ್ದೇಶನ ನೀಡಿದೆ. 'ಮರ್ಯಾದಾ' ಹತ್ಯೆಯ ಯೋಚನೆ ಮಾಡುತ್ತಿರುವವರೆಲ್ಲರೂ ತಮಗೆ ನೇಣು ಕಾದಿದೆ ಎಂಬುದನ್ನು ತಿಳಿದಿರಲಿ ಎಂದು ಸುಪ್ರಿಂ ಕೋರ್ಟ್ ಹೇಳಿದೆ.

ಈ ತೀರ್ಪು ಸರಕಾರದ ವಿಫಲತೆಯನ್ನು ಬಯಲಿಗೆಳೆದಿದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಈ ಬಗ್ಗೆ ಪ್ರತಿಕ್ರಿಯಿಸುತ್ತ ಹೇಳಿದೆ. ಇಂತಹ ಅಪರಾಧಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು, ಅಪರಾಧಿಗಳನ್ನು ಶಿಕ್ಷಿಸಲು ಒಂದು ಪ್ರತ್ಯೇಕ ಸಮಗ್ರ ಕಾನೂನು ತರಬೇಕು ಎಂದು ಎಐಡಿಡಬ್ಲ್ಯುಎ ಬಹಳ ವರ್ಷಗಳಿಂದ ಆಗ್ರಹಿಸುತ್ತ ಬಂದಿದೆ. ಈ ಶಾಸನ ಇಂತಹ ಕೊಲೆಗಳನ್ನು ಮತ್ತು ದಂಪತಿಗಳಿಗೆ ಮತ್ತು ಹುಡುಗನ ಕುಟುಂಬದವರಿಗೆ ಸಾಮಾಜಿಕ ಬಹಿಷ್ಕಾರದಂತಹ ಕಿರುಕುಳಗಳಿಗೂ ಶಿಕ್ಷೆ ವಿಧಿಸುವಂತಾಗಬೇಕು. ಯುಪಿಎ ಸರಕಾರ ಇನ್ನು ತಡಮಾಡದೆ ಈ ಮಹತ್ವದ ವಿಷಯದ ಮೇಲೆ ಕ್ರಮಗಳನ್ನು ಕೈಗೊಳ್ಳಬೇಕು, ಪೋಲೀಸರು ಇಂತಹ ಸಂದರ್ಭಗಳಲ್ಲಿ ಸರಿಯಾದ ರೀತಿಯಲ್ಲಿ ತನಿಖೆ ಮಾಡುವಂತೆ ನಿರ್ದೇಶಿಸಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ.

ಆದರೆ ಸುಪ್ರಿಂ ಕೋರ್ಟ್‌ನ ಇಂತಹ ತೀರ್ಪಿನ ಣಮತರವೂ ಯುಪಿಎ ಸರಕಾರಕ್ಕೆ ಇದಿನ್ನೂ ಮಹತ್ವದ ವಿಷಯ ಎಂದು ಅನ್ನಿಸಿದಂತಿಲ್ಲ.

★





ವೇದರಾಜ ಎನ್.ಕೆ.

ಕೇರ್ನ್-ವೇದಾಂತ ವ್ಯವಹಾರ: ಯುಪಿಎ ಸರಕಾರ ಒತ್ತಡಕ್ಕೆ ತಲೆಬಾಗುತ್ತಿದೆಯೇ?

9.6 ಬಿಲಿಯ ಡಾಲರ್ ಅಂದರೆ ಸುಮಾರು 43 ಸಾವಿರ ಕೋಟಿ ರೂ.ಗಳ ಈ ವ್ಯವಹಾರದಲ್ಲಿ ಬ್ರಿಟಿಶ್ ಸರಕಾರ ಒತ್ತಡ ತರುತ್ತಿದೆ, ಯುಪಿಎ-2 ಸರಕಾರ ಅದಕ್ಕೆ ತಲೆಬಾಗುತ್ತಿದೆ ಎಂದು ಸುದ್ದಿ ಬಂದಿದೆ. ರಾಜಸ್ತಾನದ ತೈಲ ನಿಕ್ಷೇಪಕ್ಕೆ ಸಂಬಂಧಪಟ್ಟ ಕಂಪನಿ ಕೇರ್ನ್ ಇಂಡಿಯ ಬ್ರಿಟನ್ನಿನ ಕಂಪನಿಯ ಭಾರತೀಯ ಅಂಗ ಕಂಪನಿ. ಭಾರತೀಯನೊಬ್ಬ (ಅನಿಲ್ ಅಗರವಾಲ್) ಬ್ರಿಟನ್ನಿನಲ್ಲಿ ಸ್ಥಾಪಿಸಿದ ಕಂಪನಿ ವೇದಾಂತ ರಿಸೋರ್ಸಸ್ ಈ ಕಂಪನಿಯನ್ನು ತನ್ನ ಒಡೆತನಕ್ಕೆ ಸೇರಿಸುವ ಬಗ್ಗೆ ಮಾತುಕತೆಗಳು ನಡೆದಿದ್ದು ವ್ಯವಹಾರ ಕುದುರಿದೆ. ಆದರೆ ಇದಕ್ಕೆ ಇನ್ನೂ ಸರಕಾರದ ಅನುಮತಿ ಸಿಕ್ಕಿಲ್ಲ. ಈ ವ್ಯವಹಾರದ ಬಗ್ಗೆ ಹಲವು ಪ್ರಶ್ನೆಗಳನ್ನು ಸಿಪಿಐ(ಎಂ) ಸಂಸತ್ ಸದಸ್ಯ ಮತ್ತು ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ರಾಜ್ಯ ಸಭೆಯಲ್ಲಿ ಎತ್ತಿದ್ದರು, ಮೂರು ಪತ್ರಗಳನ್ನು ಪ್ರಧಾನ ಮಂತ್ರಿಗಳಿಗೆ ಬರೆದಿದ್ದರು. ಆದರೆ ಅವುಗಳಿಗೆ ಉತ್ತರ ಸಿಕ್ಕಿಲ್ಲ.

ಎರಡು ತಿಂಗಳ ಹಿಂದೆ ತೈಲ ಇಲಾಖೆಯ ಕಾನೂನು ಅಧಿಕಾರಿಗಳು ಈ ವ್ಯವಹಾರಕ್ಕೆ ದೇಶದ ಸಾರ್ವಜನಿಕ ವಲಯದ ಒಎನ್‌ಜಿಸಿ ಅನುಮತಿ ಬೇಕಾಗಿದೆ, ರಾಜಸ್ತಾನದ ಈ ನಿಕ್ಷೇಪಗಳಿಗೆ ರಾಜಧನ ನೀಡುವ ಹೊರೆ ಒಎನ್‌ಜಿಸಿಯ ಮೇಲಿದ್ದು, ಈ ವ್ಯವಹಾರವನ್ನು ಕುದುರಿಸುವ ಮೊದಲು ಈ ಹೊರೆಯ ಪ್ರಶ್ನೆ ಇತ್ಯರ್ಥವಾಗಬೇಕು ಎಂದಿದ್ದರು. ಆದರೆ ಇದರ ಅಗತ್ಯವಿಲ್ಲ ಎಂದು ಈಗ ಅವರೇ ಹೇಳುತ್ತಿದ್ದಾರೆ ಎನ್ನಲಾಗುತ್ತಿದೆ.

ಒಎನ್‌ಜಿಸಿ(ತೈಲ ಮತ್ತು ನೈಸರ್ಗಿಕ ಅನಿಲ ನಿಗಮ) ಒಂದು 'ಮಹಾರತ್ನ'ವೆನಿಸಿದ್ದು ಈ ನಿಕ್ಷೇಪಗಳಲ್ಲಿ 30% ಆಸಕ್ತಿ ಹೊಂದಿದೆ. ಇವುಗಳಿಗೆ ರಾಜಧನ ಕೊಡುವ ಹೊರೆ ಇದರ ಮೇಲಿದೆ. ತೈಲ ಮತ್ತು ಅನಿಲ ಆಯಕಟ್ಟಿನ ನೈಸರ್ಗಿಕ ಸಂಪನ್ಮೂಲಗಳು. ಭಾರತೀಯ ಜನತೆ ಇದರ ಮೇಲೆ ಒಡೆತನ ಹೊಂದಿದ್ದಾರೆ. ಆದ್ದರಿಂದ ಈ ಉತ್ಪಾದಕ ಆಸ್ತಿಯನ್ನು ಖರೀದಿಸುವ ಮೊದಲ ಹಕ್ಕು ಇದರದ್ದು. ಆದರೆ ಇದಕ್ಕೆ ಅಡ್ಡಗಾಲು ಹಾಕಿ ಈ ಕ್ಷೇತ್ರದಲ್ಲಿ ಏನೂ ಅನುಭವವಿಲ್ಲದ, ಅಲ್ಲದೆ ಗಣಿಗಾರಿಕೆ ಮುಂತಾದವುಗಳಲ್ಲಿ ವಿವಾದಾತ್ಮಕ ಚಟುವಟಿಕೆಗಳ ದಾಖಲೆ ಮಾಡಿರುವ ಕಂಪನಿಗೆ ಅವಕಾಶ ಕಲ್ಪಿಸುವುದು ಸರಿಯಲ್ಲ ಎಂದು ತಪನ್ ಸೇನ್ ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ. ಈ ತೈಲ ಕ್ಷೇತ್ರದ ಮೌಲ್ಯ ಮಾಪನವನ್ನು ಸಿಎಜಿ ನಡೆಸಬೇಕು ಎಂದೂ ಅವರು ಹೇಳಿದ್ದಾರೆ.

ಜಾಗತಿಕ ಕಚ್ಚಾತೈಲ ಬೆಲೆ ಬ್ಯಾರಲ್ಲಿಗೆ 70 ರೂ.ಯಿಂದ 120 ರೂ. ಗೆ ಏರಿರುವಾಗ ಸಿಎಜಿ ಈ ನಿಕ್ಷೇಪದ ಸರಿಯಾದ ಮೌಲ್ಯಮಾಪನ ಮಾಡಿ ಇದು ಒಎನ್‌ಜಿಸಿ ಒಡೆತನಕ್ಕೆ ಬರುವಂತೆ ಮಾಡುವುದು ಏಕೈಕ ಆಯ್ಕೆ. ಆದರೆ ಯುಪಿಎ-2 ಸರಕಾರ ಈ ನೇರ ಆಯ್ಕೆಯನ್ನು ಬ್ರಿಟಿಶ್ ಸರಕಾರದ ಒತ್ತಡದಿಂದಾಗಿ ಮಾಡುತ್ತಿಲ್ಲ, ಬ್ರಿಟಿಶ್ ಸರಕಾರದ ಒತ್ತಡಕ್ಕೆ ತಲೆಬಾಗಲು ಮುಂದಾಗಿದೆ ಎಂದು ಹೇಳಲಾಗುತ್ತಿದೆ.

★

2ಜಿ ಹಗರಣ: ತರಂಗಾಂತರ ಕೊಡಿಸಲು ದೈಹಿಕ ಚುರುಕುತನವೇ ಆಧಾರ !

ಯುಪಿಎ-2 ಸರಕಾರದ ಮಾಜಿ ಮಂತ್ರಿ ತಮಗೆ ಬೇಕಾದವರಿಗೆ 2ಜಿ ತರಂಗಾಂತರವನ್ನು ಹಂಚಲು, 'ಮೊದಲು ಬಂದವರಿಗೆ ಮೊದಲು ಆದ್ಯತೆ' ಎಂಬ ಸೂತ್ರ 'ಸಂಚಾರ್ ಭವನ'ದಲ್ಲಿ ವಿಶೇಷವಾಗಿ ತೆರೆದ ನಾಲ್ಕು ಕೌಂಟರುಗಳಿಗನ್ನು ಮೊದಲು ಯಾರು ತಲುಪುತ್ತಾರೆ ಎಂಬ ಮಟ್ಟಕ್ಕೆ ಇಳಿಸಲಾಯಿತು ಎಂದು ಸಿಬಿಐ ವಕೀಲರು ಹೇಳಿದ್ದಾರೆ. ಸ್ವಾನ್ ಟೆಲಿಕಾಂನ ಶಾಹಿದ್ ಉಸ್ಮಾನ್ ಬಲ್ವ ಜಾಮೀನನ್ನು ವಿರೋಧಿಸುತ್ತ ಅವರು ಹಗರಣದ ಕಾರ್ಯವ್ಯೂಹವನ್ನು ವರ್ಣಿಸಿದ ರೀತಿಯಿದು. ಅರ್ಜಿ ಹಾಕುವ ಅರ್ಹತೆಯೂ ಇರದ ಕಂಪನಿಗೆ ತರಂಗಾಂತರವನ್ನು ಕೊಡಿಸಲು ಅದರ ಅರ್ಜಿಯ ಸೀನಿಯಾರಿಟಿ-ಸಾಧಿಸಲಿಕ್ಕೆ ದೈಹಿಕ ಚುರುಕುತನ ಆಧಾರವಾಯಿತು!

ಸ್ವಾನ್ ಮತ್ತು ಯುನಿಟೆಕ್‌ಗೆ ತರಂಗಾಂತರ

ಪುಟ 15 ಕ್ಕೆ

ಹಣವಿಲ್ಲದೆ ಚಿಕಿತ್ಸೆಗೆ ಹೋಗದವರು ಶೇ 30 !

ಭಾರತ ಸರಕಾರ ಸಾರ್ವಜನಿಕ ಆರೋಗ್ಯಕ್ಕೆ ಮಾಡುವ ಖರ್ಚು ಜಿಡಿಪಿಯ 0.94% ಮಾತ್ರ. 2004ರ ಯುಪಿಎ-1 ರ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಇದನ್ನು 3% ಕ್ಕೆ ಹೆಚ್ಚಿಸುವ ಭರವಸೆಯಿತ್ತು. ಇದನ್ನು ಎಡಪಕ್ಷಗಳ ಒತ್ತಡದಿಂದ ಸೇರಿಸಲಾಗಿತ್ತು. ಯುಪಿಎ-2 ಸರಕಾರ ಇಂತಹ ಭರವಸೆಯನ್ನೂ ಕೊಟ್ಟಿರಲಿಲ್ಲ. ಏಕೆಂದರೆ ಎಡಪಕ್ಷಗಳ ಬೆಂಬಲ ಬೇಕಾಗಿರಲಿಲ್ಲ. ಆದರೆ ಆರೋಗ್ಯ ಮಂತ್ರಿಗಳು ಈಗ ಇದನ್ನು 2ರಿಂದ 3% ಕ್ಕೆ ಏರಿಸುವ ಮಾತಾಡಿದ್ದಾರೆ. ಈ ಕುರಿತ ಅಂಕಿ-ಅಂಶಗಳು ಯುಪಿಎ-2 ಸರಕಾರವನ್ನೂ ದಿಕ್ಕೆಡಿಸಿರಬೇಕು.

ಲಾಂಸೆಟ್ ಎಂಬ ಪ್ರಸಿದ್ಧ ವೈದ್ಯಕೀಯ ಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖನದ ಪ್ರಕಾರ ಉಚಿತ ಅಥವ ಕಡಿಮೆ ಖರ್ಚಿನ ಸಾರ್ವಜನಿಕ ಆರೋಗ್ಯ ಸೇವೆಗಳ ಪ್ರಮಾಣ ಭಾರತದಲ್ಲಿ ಬಹಳ ಕಡಿಮೆಯಿದ್ದು, ಬಹುಪಾಲು ಭಾರತೀಯರು ಬಹಳ ವೆಚ್ಚದಾಯಕವಾದ, ಮತ್ತು ನಂಬಲರ್ಹವೂ ಅಲ್ಲದ ಖಾಸಗಿ ಆರೋಗ್ಯ ವ್ಯವಸ್ಥೆಯನ್ನು ಅವಲಂಬಿಸಬೇಕಾಗಿ ಬಂದಿದೆ. ಪ್ರತಿವರ್ಷ ಸುಮಾರು ನಾಲ್ಕು ಕೋಟಿ ಮಂದಿ ಅನಾರೋಗ್ಯದ ಸಮಸ್ಯೆಗಳಿಂದಾಗಿ ಬಡತನದ ಕೂಪದೊಳಕ್ಕೆ ನೂಕಲ್ಪಡುತ್ತಿದ್ದಾರೆ.

- ಹಣವಿಲ್ಲದ್ದರಿಂದ ಯಾವುದೇ ಔಷಧೋಪಚಾರಕ್ಕೆ ಹೋಗದ ಜನಗಳ ಪ್ರಮಾಣ ಗ್ರಾಮೀಣ ಪ್ರದೇಶಗಳಲ್ಲಿ 1995ರಲ್ಲಿ 15% ಇತ್ತು. ಅದೀಗ 2004ರಲ್ಲಿ 30% ಕ್ಕೇರಿದೆ, ನಗರ ಪ್ರದೇಶಗಳಲ್ಲಿ 10% ದಿಂದ 20%ಕ್ಕೇರಿದೆ.
- ಗ್ರಾಮೀಣ ಪ್ರದೇಶಗಳಲ್ಲಿ 47% ಮಂದಿ ಚಿಕಿತ್ಸೆಗಾಗಿ ಸಾಲ ಅಥವ ಆಸ್ತಿಗಳ ಮಾರಾಟ ಮಾಡಬೇಕಾಗಿ ಬಂದಿದೆ; ನಗರ ಪ್ರದೇಶಗಳಲ್ಲಿ ಈ ಪ್ರಮಾಣ ಸ್ವಲ್ಪ ಕಡಿಮೆಯಾದರೂ 31%.
- 1986ರಿಂದ 2004ರ ನಡುವೆ ಆಸ್ಪತ್ರೆ ಖರ್ಚುಗಳ ಪ್ರಮಾಣ ಮೂರು ಪಟ್ಟಾಗಿದೆ.

ಇದು ಲಾಂಸೆಟ್ ಪತ್ರಿಕೆಯಲ್ಲಿ ಡಾ. ಎ.ಕೆ. ಶಿವಕುಮಾರ್ ಕೊಟ್ಟಿರುವ ಅಂಕಿ-ಅಂಶಗಳು, 2004ರವು. ಆಮೇಲೆ ಖರ್ಚುಗಳ ಏರಿಕೆ ಇನ್ನಷ್ಟು ವೇಗವಾಗಿ ನಡೆದಿದೆ.

47% ಹೆಣ್ಣುಮಕ್ಕಳ ಮದುವೆ 18ರ ಮೊದಲೇ

ದಿನಬೆಳಗಾದರೆ ನಾವು ನಮ್ಮ ಆಳರಸರುಗಳಿಂದ ಕೇಳುವ ಮಾತು -ಭಾರತ ಈಗ ಆರ್ಥಿಕ ಶಕ್ತಿಯಾಗಿ ಮೂಡಿ ಬರುತ್ತಿದೆ. ಆದರೆ ಈಗಲೂ ಈ ದೇಶದ 47% ಹೆಣ್ಣುಮಕ್ಕಳನ್ನು ಅವರಿಗೆ 18 ವರ್ಷ ತಲುಪುವ ಮೊದಲೇ ಮದುವೆ ಮಾಡಿ 'ಕೈತೊಳೆದು' ಕೊಳ್ಳಲಾಗುತ್ತಿದೆ. ಇನ್ನೂ ಆಘಾತಕಾರೀ ಸಂಗತಿಯೆಂದರೆ ಈ ವರ್ಷದಲ್ಲಿ, ಜಗತ್ತಿನ ಅತಿ ಹಿಂದುಳಿದ ಸಹಾರ ಮರುಭೂಮಿ ಪ್ರದೇಶಕ್ಕಿಂತಲೂ ಭಾರತ ಕೆಳಗಿದೆ. ನಮಗಿಂತ ಹಿಂದುಳಿದವರು ಎಂದು ಹೀಯಾಳಿಸುವ, ಕೆಲವೊಮ್ಮೆ 'ಸಮಾಧಾನ' ಪಡುವ ಪಕ್ಕದ ಪಾಕಿಸ್ತಾನದಲ್ಲೂ ಇದು 24%. ವಾಶಿಂಗ್ಟನ್ನಿನ ಪಾಪ್ಯುಲೇಶನ್ ರೆಫರೆನ್ಸ್ ಬ್ಯೂರೋ ಪ್ರಕಟಿಸಿದ ಅಂಕಿ-ಅಂಶಗಳಿವು. ○



ಬಿಜೆಪಿ ದರ್ಬಾರ್

■ ಆರ್.ರಾಮಕೃಷ್ಣ

ಉದ್ಯೋಗ ಖಾತ್ರಿ ಎಷ್ಟು ಜನಕ್ಕೆಗೊತ್ತು?

ಕರ್ನಾಟಕ ರಾಜ್ಯದಲ್ಲಿ ಮಹತ್ವದ ಉದ್ಯೋಗ ಖಾತ್ರಿ ಯೋಜನೆಯ ಜಾರಿ ಬಗೆಗೆ ಈ ಅಂಕಣದಲ್ಲಿ ಹಲವಾರು ಬಾರಿ ಓದಿದ್ದೀರಿ. ಬರೆದಷ್ಟೂ ಓದಬೇಕಾದ ಹತ್ತಾರು ಮುಖ್ಯ ಸಂಗತಿಗಳು ದಿನೇ ದಿನೇ ಬಯಲಾಗುತ್ತಿರುವುದರಿಂದ ಈ ಬಗ್ಗೆ ಮತ್ತೆ ಬರೆಯಲೇ ಇರಬೇಕಾಗಿದೆ. ರಾಜ್ಯದಲ್ಲಿ ಉದ್ಯೋಗ ಖಾತ್ರಿ ಯೋಜನೆಯು ಅಧಿಕೃತವಾಗಿ 2006-07 ರಿಂದ ಜಾರಿಯಾಗುತ್ತಿದೆ. ಈ ಯೋಜನೆಯು 2008-09ರಿಂದ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಜಾರಿಯಾಗುತ್ತಿದೆ.

ಹೀಗೆ 'ಜಾರಿ'ಯಾಗುತ್ತಿರುವ ಈ ಯೋಜನೆಯ ಬಗೆಗೆ ನಮ್ಮ ನಾಡಿನ ಜನರಲ್ಲಿ ಅದರಲ್ಲೂ ಉದ್ಯೋಗ ಖಾತ್ರಿ ಯೋಜನೆ ತುರ್ತು ಅಗತ್ಯವಾಗಿರುವ ಗ್ರಾಮೀಣ ಭಾಗಗಳಲ್ಲಿ ಮತ್ತು ಉದ್ಯೋಗವಿಲ್ಲದೆ ಪ್ರತಿ ವರ್ಷ ಮುಂಬೈ, ಪುಣೆ, ಬೆಂಗಳೂರುಗಳಿಗೆ ಗುಳೆ ಹೋಗುವ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಇಂತಹದೊಂದು ಯೋಜನೆ ಇರುವ ಬಗೆಗೆ ಎಷ್ಟು ಜನಕ್ಕೆ ಗೊತ್ತು ?.....ಇಂತಹ ಹಲವು ಅಂಶಗಳ ಕುರಿತು ಅಧ್ಯಯನವೊಂದು ನಡೆದಿದೆ. ಫಲಿತಾಂಶ ನೀವೇ ನೋಡಿ ಹಾಗೂ ಯೋಜನೆಯ ಜಾರಿಯ ಕುರಿತು ಬಿಜೆಪಿ ಸರ್ಕಾರದ ಘನ ಕಾಳಜಿ-ಸಾಧನೆ ಕುರಿತು ನೀವೆ ತೀರ್ಮಾನಿಸಿ.

- ಉದ್ಯೋಗ ಖಾತ್ರಿ ಯೋಜನೆ ಜಾರಿಯಾಗಬೇಕಾದ ಜಿಲ್ಲೆಗಳ ಜನರಲ್ಲಿ ಸರಾಸರಿ ಶೇ. 56.33 ಜನರಿಗೆ ಮಾತ್ರ ಇಂತಹದ್ದೊಂದು ಯೋಜನೆ ಇರುವ ಬಗೆಗೆ ಗೊತ್ತಿದೆ.
- ಬೀದರ್, ಕೊಪ್ಪಳ, ಗುಲ್ಬರ್ಗಾ, ಬಿಜಾಪುರ, ಯಾದಗೀರ್ ಜಿಲ್ಲೆಗಳನ್ನೊಳಗೊಂಡ ವಲಯದಲ್ಲಿ ಯೋಜನೆ ಬಗ್ಗೆ ಗೊತ್ತಿರುವವರ ಸಂಖ್ಯೆ ಕೇವಲ ಶೇ. 19.27.
- ಹಾವೇರಿ, ಬೆಳಗಾಂ, ಗದಗ್, ಬಾಗಲಕೋಟೆ, ದಾವಣಗೆರೆ, ಧಾರವಾಡ ಮುಂತಾದ ಜಿಲ್ಲೆಗಳನ್ನೊಳಗೊಂಡ ವಲಯದಲ್ಲಿ ಶೇ. 25.75 ಜನರಿಗೆ ಮಾತ್ರ ಈ ಬಗ್ಗೆ ಗೊತ್ತಿದೆ.
- ರಾಯಚೂರು, ಚಿತ್ರದುರ್ಗ, ಬಳ್ಳಾರಿ, ಮುಂತಾದ ಪರಿಶಿಷ್ಟ ಪಂಗಡದ ಜನರು ಹೆಚ್ಚಿರುವ ಜಿಲ್ಲೆಗಳಲ್ಲಿ ಈ ಬಗ್ಗೆ ಶೇ. 51.20 ಜನರಿಗೆ ದಕ್ಷಿಣ ಕರ್ನಾಟಕದ ಜಿಲ್ಲೆಗಳಲ್ಲಿಶೇ. 75.29 ಜನರಿಗೆ ಗೊತ್ತಿದೆ. ಮಲೆನಾಡಿನಲ್ಲಿ ಮಾತ್ರ ಈ ಪ್ರಮಾಣ ತೃಪ್ತಿಕರ ಎನ್ನಬಹುದಾದ ಶೇ. 92.84 ಇದೆ.

ನೂರು ದಿನ ಎಂಬುದು......

ಉದ್ಯೋಗ ಖಾತ್ರಿ ಯೋಜನೆಯ ಬಗೆಗೆ ಕೇಳಿರುವವರಿಗೆಲ್ಲಾ ಅದರಲ್ಲಿ ವರ್ಷಕ್ಕೆ ನೂರು ದಿನಗಳ ಉದ್ಯೋಗ ಖಾತ್ರಿ ಇದೆ ಎಂದು ಗೊತ್ತಿರಲೇ ಬೇಕೆಂದಿಲ್ಲವಲ್ಲ.?!

ಈ ಬಹು ಮುಖ್ಯ ಮಾಹಿತಿ ಎಷ್ಟು ಜನಕ್ಕೆ ಗೊತ್ತಿದೆ ನೋಡೋಣ.

- ರಾಜ್ಯದ ಸರಾಸರಿ ಶೇ. 44.08 ಜನರಿಗೆ ಮಾತ್ರ ಸರ್ಕಾರ ಕನಿಷ್ಠ ವರ್ಷಕ್ಕೆ ನೂರು ದಿನ ಕೆಲಸ ಕೊಡಬೇಕೆಂಬುದು ಗೊತ್ತು.
- ರಾಜ್ಯದ ಈಶಾನ್ಯ ಜಿಲ್ಲೆಗಳು ಅಂದರೆ ಗುಲಬರ್ಗಾ ಭಾಗದಲ್ಲಿ ಈ ಬಗೆಗೆ ಶೇ.9.86 ಜನರಿಗೆ ಮಾತ್ರ ಗೊತ್ತಿದೆ. ಈ ಪ್ರಮಾಣ ನೈರುತ್ಯ ಜಿಲ್ಲೆಗಳಲ್ಲಿ ಅಂದರೆ ಬಿಜಾಪುರ ಭಾಗದಲ್ಲಿ ಶೇ. 10.25 ಮಾತ್ರ
- ಈ ಯೋಜನೆಯಲ್ಲಿ ಅರ್ಜಿ ಹಾಕಿಕೊಂಡ 15 ದಿನಗಳ ಒಳಗಾಗಿ ಕೆಲಸ ಒದಗಿಸದಿದ್ದರೆ ನಿರುದ್ಯೋಗ ಭತ್ಯೆ ನೀಡಬೇಕೆನ್ನುತ್ತದೆ ನಿಯಮ. ಆದರೆ ಸರ್ಕಾರ ರಾಜ್ಯದಲ್ಲಿ ಇಲ್ಲಿಯವರೆಗೆ ಒಬ್ಬರೇ ಒಬ್ಬರಿಗೆ ನಿರುದ್ಯೋಗ ಭತ್ಯೆ ನೀಡಿಲ್ಲ. 76,773 ಜನರಿಗೆ ಸರ್ಕಾರ ನೀಡಬೇಕಾದ ನಿರುದ್ಯೋಗ ಭತ್ಯೆ ನೀಡದೆ ಸತಾಯಿಸುತ್ತಿದೆ.
- ನಿಯಮದ ಪ್ರಕಾರ ಕೆಲಸ ಮಾಡಿದ 15 ದಿನಗಳೊಳಗಾಗಿ ವೇತನ ಪಾವತಿಯಾಗ ಬೇಕು. ಆದರೆ ರಾಜ್ಯದಲ್ಲಿ ಮಾಡಿದ ಕೆಲಸಕ್ಕೆ ವೇತನ ಪಾವತಿಯಾಗಲು ಸರಾಸರಿ ಏಳು ತಿಂಗಳು ಬೇಕು. ಅದೂ ಕೂಡ ರೈತರು, ಕೂಲಿಕಾರರು ಕೂಲಿಗಾಗಿ ವ್ಯಾಪಕವಾಗಿ ಹೋರಾಟ ನಡೆಸುತ್ತಿರುವುವಾಗಲೂ ಈ ಪರಿಸ್ಥಿತಿ.

ಇಷ್ಟೆ ಅಲ್ಲ, ನಿಯಮಕ್ಕೆ ವಿರುದ್ಧವಾಗಿ ಹೆಣ್ಣು, ಗಂಡುಗಳ ನಡುವೆ ಕೂಲಿ ಪ್ರಮಾಣದಲ್ಲಿ ತಾರತಮ್ಯ ಸೇರಿದಂತೆ ಎಷ್ಟೋ ಅಕ್ರಮಗಳು ನಡೆಯುತ್ತಿವೆ ಎನ್ನುತ್ತದೆ ಅಧ್ಯಯನ. ಅಂದಹಾಗೆ ಈ ಅಧ್ಯಯನ ಮಾಡಿರುವವರು ಯಾರೋ ಬಿಜೆಪಿ ವಿರೋಧಿಗಳು ಎಂದೇನು ಭಾವಿಸಬೇಕಾಗಿಲ್ಲ. ಯಾಕೆಂದರೆ ಈ ಅಧ್ಯಯನ ನಡೆಸಿರುವುದು 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಸ್ಟಡಿ (ಎನ್.ಐ.ಎ.ಎಸ್.) ಬೆಂಗಳೂರು' ಇವರು. ಅದೂ ಕೂಡ ರಾಜ್ಯ ಸರ್ಕಾರದ ಆದೇಶದ ಮೇರೆಗೆ.

★

ಕರ್ಮಠ ಮಠಾಧೀಶರು, ಜಾತಿವಾದಿಗಳ ಜಾತ್ರೆಯೂ, ಯಡಿಯೂರಪ್ಪನವರ ಮುರುಕಲು ಕುರ್ಚಿ ಬಲಪಡಿಸುವ ನಿರ್ಣಯವೂ

ರಾಜ್ಯದ ಪ್ರಪ್ರಥಮ ಬಿಜೆಪಿ ಸರ್ಕಾರವು ಬರೇ ಮೂರು ವರ್ಷಗಳ ಅವಧಿಯಲ್ಲಿ ಕಾಂಗ್ರೆಸ್ ಪಕ್ಷವು ಮೂವತ್ತು ವರ್ಷಗಳಲ್ಲಿಯೂ ಮಾಡಲಾಗದ 'ಸಾಧನೆ'ಯನ್ನು ಮಾಡಿದ್ದೇನೆಂದು ಬೀಗಬಹುದಾಗಿದ್ದರೂ ಕೂಡ ಈ ಸರ್ಕಾರಕ್ಕೆ ತನ್ನ ಉಳಿವಿನ ಬಗೆಗೆ ಅನುಮಾನ. ಅದರಲ್ಲೂ ಮುಖ್ಯಮಂತ್ರಿ ಡಾ।ಬಿ.ಎಸ್. ಯಡಿಯೂರಪ್ಪನವರಿಗಂತೂ ತಾವು ಕೂತ ಕುರ್ಚಿ ಎಲ್ಲಿ ಉರುಳಿ ಹೋಗುವುದೋ ಎಂಬುದೇ ಚಿಂತೆ. ಅದನ್ನು ಭದ್ರಪಡಿಸುವ ಕುರಿತು ಅವರಿಗೆ ಏನು



ಕಾಳಜಿ ಅಂತೀರಿ.

ಮೊನ್ನೆ ಮೊನ್ನೆ ಮೈಸೂರು ಜಿಲ್ಲೆಯ ಸುತ್ತೂರಿನಲ್ಲಿ ಭರ್ಜರಿ ಸಮಾವೇಶ ಸೇರಿಸಲಾಗಿತ್ತು ನೋಡಿ ಜಾತಿ ಬಾಂಧವರದ್ದು.

...ಕಳಬೇಡ, ಕೊಲಬೇಡ

ಹುಸಿಯ ನುಡಿಯಲು ಬೇಡ...

ತನ್ನ ಬಣ್ಣಿಸ ಬೇಡ, ಇದಿರ ಹಳಿಯಲು ಬೇಡ....

ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ

ಜಲವೊಂದೆ ಶೌಚಾಚಮನಕ್ಕೆ ....ಎಂದ ವಚನಕಾರರು, ಶರಣರ ಪರಂಪರೆಯವರು ಎಂದು ಹೇಳಿಕೊಳ್ಳುವವರು ಒಂದು ಜಾತಿಯ ಹೆಸರಿನಲ್ಲಿ ಜನರನ್ನು ಒಂದೆಡೆ ಸೇರುವುದು, ಸಮಾಜ(ಅಂದರೆ ಜಾತಿ) ಬಾಂಧವರಾದ ಶಾಸಕರು, ಸಚಿವರು ಯಾರೇ ಕಷ್ಟಕ್ಕೆ ಸಿಕ್ಕಿಕೊಂಡರೂ, ಏನೇ ಕಾರಣಕ್ಕೆ ಕಷ್ಟಕ್ಕೆ ಸಿಕ್ಕಿಕೊಂಡರೂ. ಅವರ ರಕ್ಷಣೆಗೆ 'ಸಮಾಜ' ಮುಂದಾಗಬೇಕೆಂದು ಕರೆ ನೀಡುವುದನ್ನು ನೋಡಲು ಬಸವಣ್ಣನವರು ಇಂದು ಬದುಕಿದ್ದರೆ... ಬೇಡ ಬಿಡಿ. ಇವೆಲ್ಲ ಆಗದ ಹೋಗದ ಬರಿ ಊಹಾಪೋಹ. ಈ ಸೊಗಸನ್ನು ನಾವೇ ನೋಡಿ ಆನಂದಿಸ ಬೇಕಷ್ಟೆ.

ಬಿಜೆಪಿ ಸರ್ಕಾರದಿಂದ ಕೋಟಿ ಕೋಟಿ ಉಂಬಳಿ ಪಡೆದು ಉಂಡ ಮಠಗಳು, ಜಾತಿವಾದಿ ಮಠಾಧೀಶರುಗಳು ಬೆಂಬಲಿಸಿದ್ಮಾತ್ರಕ್ಕೇ ಈ ಸರ್ಕಾರ ಉಳಿದು ಬಿಡಲು ಸಾಧ್ಯವೇ ? ಕಾದು ನೋಡೋಣ ಇರಿ.

ದಲಿತರಿಗೆ 'ಸಹನೆಯ ಪಾಠ' ಮಾಡುವ ಬಿಜೆಪಿ ಸರ್ಕಾರದ ದಲಿತ ಸಚಿವರ ಪರಿ

ಕರ್ನಾಟಕದ ಬಿಜೆಪಿ ಸರ್ಕಾರದಲ್ಲಿ ಕೆಲವು ದಲಿತ ಸಚಿವರಿದ್ದಾರೆ. ಅವರು ಇದ್ದಾರೆ. ಬಿಜೆಪಿ ಸರ್ಕಾರದಲ್ಲಿ ದಲಿತರು ಸಚಿವರಾಗಿದ್ದಾರೆಂಬುದು ಒಂದು ವಿಶೇಷ ಇರಲಿ, ಅವರು ಈಗ ಹೇಗಿದ್ದಾರೆ ನೋಡೋಣ. ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಜಾತಿವಾದಿ, ಶಕ್ತಿಗಳ ದೌರ್ಜನ್ಯ ಹೆಚ್ಚಿದೆ. ಜನಶಕ್ತಿ ಸಂಚಿಕೆ 20 ರಲ್ಲಿ ಹಾಸನ ಜಿಲ್ಲೆಯ ಕೆರಗೋಡಿನಲ್ಲಿ ದಲಿತರ ಮೇಲಿನ ದೌರ್ಜನ್ಯಗಳ ಬಗೆಗೆ ಓದಿದ್ದೀರಿ. ಈ ವಾರ ಮಂಡ್ಯ ಜಿಲ್ಲೆಯ ಬುಜವಳ್ಳಿಯಲ್ಲಿ ದಲಿತರ ಮೇಲಿನ ದೌರ್ಜನ್ಯದ ಬಗೆಗೆ ಒಂದು ವರದಿ ಇದೆ. ಭುಜವಳ್ಳಿಗೆ ಭೇಟಿ ನೀಡಿದ ಬಿಜೆಪಿ ಸರ್ಕಾರದ ಸಮಾಜ ಕಲ್ಯಾಣ ಸಚಿವ ದಲಿತ ಮಂತ್ರಿ ಎ.ನಾರಾಯಣಸ್ವಾಮಿ, ದೌರ್ಜನ್ಯದ ಕುರಿತು 'ಸಣ್ಣ ವಿಷಯ ದೊಡ್ಡದು ಮಾಡಬೇಡಿ' ಅಂದಿದ್ದಾರೆ. ಅಸ್ಪೃಶ್ಯತೆ ಆಚರಣೆಗಳ ಬಗೆಗೆ 'ಸರಿಹೋಗುವ ತನಕ ಸಹಿಸಿಕೊಂಡು ಇರಿ' ಎಂಬ ಉಪದೇಶ ಕೊಟ್ಟಿದ್ದಾರೆ. ಬಿಜೆಪಿ ಸರ್ಕಾರದಲ್ಲಿ ದಲಿತ ಸಚಿವರಿಗೆ 'ವಹಿಸಿ ಕೊಡಲಾದ ಕೆಲಸ' ಏನು ಅಂತ ಇದರಿಂದ ಎಲ್ಲರೂ ತಿಳಿದುಕೊಳ್ಳಬೇಕಾಗಿದೆ. ಬಿಜೆಪಿಯ ಸವರ್ಣೀಯ ಸಚಿವರದ್ದು ಇದೇ ರಾಗ. ಹಾಸನದ ಕೆರಗೋಡಿಗೆ ಭೇಟಿಕೊಟ್ಟಿದ್ದು ಸಚಿವ ವಿ.ಸೋಮಣ್ಣ. ಅವರು ದೌರ್ಜನ್ಯಕ್ಕೆ ಗುರಿಯಾದ ದಲಿತರನ್ನು ಕಂಡು ಸಾಂತ್ವನ ಹೇಳದೆ ಊರಿನ ಜಾತಿವಾದಿ ಸವರ್ಣೀಯರನ್ನು ಕಂಡು ಅವರಿಗೆ 'ಅಭಯ' ನೀಡಿ ವಾಪಸ್ಸಾಗಿದ್ದಾರೆ.


ಬಿಜೆಪಿ ಸರ್ಕಾರದ ಸಚಿವರು, ಬಿಜೆಪಿ ಸರ್ಕಾರ ಯಾರ ಪರ, ಯಾವ ಪರ ಎಂಬುದನ್ನು ಅರ್ಥ ಮಾಡಿಕೊಳ್ಳಲು ಇದಕ್ಕಿಂತ ಇನ್ನೇನು ಬೇಕು.

ಕೃಪೆ: ಪ್ರಜಾವಾಣಿ



ಏಪ್ರಿಲ್ 19 - ಭ್ರಷ್ಟಾಚಾರ, ಬೆಲೆ ಏರಿಕೆಗಳ ವಿರುದ್ಧ ಆಂದೋಲನ

ಕುಂದಾಪುರ ತಾಲ್ಲೂಕ ಕಛೇರಿ ಮುತ್ತಿಗೆ





ಭ್ರಷ್ಟಾಚಾರದಲ್ಲಿ ಮುಳುಗಿರುವ ರಾಜ್ಯ ಬಿಜೆಪಿ ಮತ್ತು ಕೇಂದ್ರ ಕಾಂಗ್ರೆಸ್ ಸರ್ಕಾರಗಳು ಜನರನ್ನು ಕಾಡುತ್ತಿರುವ ಸಮಸ್ಯೆಗಳಿಗೆ ಸ್ಪಂದಿಸದಿರುವುದನ್ನು ವಿರೋಧಿಸಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿಯು ತಾ:19.04.2011ರಂದು ಮಂಗಳವಾರ ರಾಜ್ಯದಾದ್ಯಂತ ತಾಲ್ಲೂಕು ತಹಶೀಲ್ದಾರ್‌ರವರ ಕಛೇರಿಗಳಿಗೆ ಮುತ್ತಿಗೆ ಹಾಕುವ ಚಳುವಳಿಯ ಅಂಗವಾಗಿ ಕುಂದಾರಪುದಲ್ಲಿ ತಾಲ್ಲೂಕು ಕಛೇರಿಯ ಎದುರು ಸುಮಾರು 4 ಸಾವಿರ ಮಂದಿ ಭಾಗವಹಿಸಿದರು. ರೈತರು, ಕೃಷಿ ಕೂಲಿಕಾರರು, ಹಂಚು ಕಾರ್ಮಿಕರು, ಬೀಡಿ ಕಾರ್ಮಿಕರು, ಕಟ್ಟಡ, ಅಂಗನವಾಡಿ, ಬಿಸಿಯೂಟ, ಆಟೋ ರಿಕ್ಷಾ ಚಾಲಕರು, ಮಹಿಳೆಯರು ದಲಿತರು, ವಿದ್ಯಾರ್ಥಿ ಮತ್ತು ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಮುತ್ತಿಗೆ ಚಳುವಳಿಯಲ್ಲಿ ಭಾಗವಹಿಸಿದರು. ತಾಲ್ಲೂಕು ಕಛೇರಿಯ ಮುಂಭಾಗದ ಗ್ರೌಂಡಿನಲ್ಲಿ ಹಾಗೂ ರಸ್ತೆಯ ಮೇಲೆ ಜನರು ನಿಂತು ಘೋಷಣೆ ಹಾಕಿದರು.

ಎಲ್ಲಾ ಕೈಗಾರಿಕೆಗಳ ಕಾರ್ಮಿಕರಿಗೆ ತಿಂಗಳಿಗೆ ರೂ.6,000/- ವೇತನ ನಿಗದಿಯಾಗಬೇಕು ಬೆಲೆ ಏರಿಕೆಯನ್ನು ತಡೆಗಟ್ಟಬೇಕು. ಎಲ್ಲಾ ಕುಟುಂಬಗಳಿಗೂ ಒಂದೇ ರೀತಿಯ ರೇಷನ್ ಕಾರ್ಡ್‌ಗಳನ್ನು ವಿತರಿಸಬೇಕು.ತಿಂಗಳಿಗೆ ಕನಿಷ್ಠ 35 ಕೆ.ಜಿ. ಅಕ್ಕಿ/ಗೋಧಿಯನ್ನು 2 ರೂ.ದರದಲ್ಲಿ ಒದಗಿಸಬೇಕು. ಉದ್ಯೋಗ ಖಾತ್ರಿ ಯೋಜನೆಯನ್ನು ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಭ್ರಷ್ಟಾಚಾರ ಮುಕ್ತವಾಗಿ ಜಾರಿಗೊಳಿಸಬೇಕು. ಕೇರಳ ಮಾದರಿಯಲ್ಲಿ ಕೃಷಿ ಕೂಲಿಕಾರರ ಸಮಗ್ರ ಶಾಸನವನ್ನು ರೂಪಿಸಿ ಜಾರಿಗೊಳಿಸಬೇಕು. ಸರ್ಕಾರಿ ಭೂಮಿಯಲ್ಲಿ ಅನಧಿಕೃತವಾಗಿ ಸಾಗುವಳಿ ಮಾಡಿಕೊಂಡು ಬಂದಿರುವ ಬಡವರಿಗೆ ಹಾಗೂ ಸರ್ಕಾರಿ ಭೂಮಿಯಲ್ಲಿ ಮನೆಕಟ್ಟಿಸಿಕೊಂಡು ನೆಲೆಸಿರುವ ನಿವೇಶನ ರಹಿತ ಬಡವರಿಗೆ ಹಕ್ಕು ಪತ್ರಗಳನ್ನು ನೀಡಬೇಕು. ಮನೆ ನಿವೇಶನಕ್ಕಾಗಿ ಸಲ್ಲಿಸಿರುವ ಅರ್ಜಿಗಳನ್ನು ಕೂಡಲೇ ಪರಿಶೀಲಿಸಿ ಅರ್ಹರಿಗೆ ಮನೆಗಳನ್ನು ಒದಗಿಸಲು ವ್ಯಾಪಕ ಕಾರ್ಯಕ್ರಮವನ್ನು ರೂಪಿಸಬೇಕೆಂದು, ಹೊಸ ಪಿಂಚಣಿ ಕಾಯಿದೆ ಬದಲಾಯಿಸಿ ಪಿಂಚಣಿ ಸಿಗುವ ಬಗ್ಗೆ ಒತ್ತಾಯಿಸಿ, ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯ ತನಕ ಕಛೇರಿ ಮುತ್ತಿಗೆ ಹಾಕಿ ಘೋಷಣೆಗಳನ್ನು ಹಾಕಲಾಯಿತು.

ಚಳುವಳಿಯಲ್ಲಿ ಭಾಗವಹಿಸಿ ದವರನ್ನುದ್ದೇಶಿಸಿ ಸಿಪಿಐ(ಎಂ) ಪಕ್ಷದ ಮುಖಂಡರಾದ ಕೆ.ಶಂಕರ್, ಮಹಾಬಲ ವಡೇರಹೋಬಳಿ, ಚಂದ್ರಶೇಖರ ವಿ. ಹೆಚ್.ನರಸಿಂಹ, ಸುರೇಶ ಕಲ್ಲಾಗರ್, ರಾಜುಪಡುಕೋಣೆ ಮತ್ತು ಸುಬ್ರಮಣ್ಯ ಆಚಾರ್ ಮಾತನಾಡಿಸಿದರು. ಮನವಿ ಸ್ವೀಕರಿಸಿದ ತಹಶೀಲ್ದಾರ್‌ರವರು ಬಂದು ತನ್ನ ಅಧಿಕಾರ ವ್ಯಾಪ್ತಿಯ ಕೆಲಸ ಮಾಡುವುದಾಗಿ, ಉಳಿದ ಬೇಡಿಕೆಗಳ ಬಗ್ಗೆ ಸರ್ಕಾರದ ಗಮನ ಹರಿಸುವುದಾಗಿ ಹೇಳಿದರು. ಅನಂತರ ಎಲ್ಲರನ್ನೂ ಬಂಧಿಸಿ, ಬಿಡುಗಡೆ ಮಾಡುವುದಾಗಿ ಪೋಲೀಸರು ಹೇಳಿದ ಬಳಿಕ ಮುತ್ತಿಗೆ ಚಳುವಳಿಯನ್ನು ಮುಕ್ತಾಯಗೊಳಿಸಲಾಯಿತು.

ವರದಿ:
ಮಹಾಬಲ ವಡೇರಹೋಬಳಿ

ಬಿಜಾಪುರ : ಪ್ರತಿಭಟನಾ ಮೆರವಣಿಗೆ, ಮುತ್ತಿಗೆ

ಸಿಪಿಐ(ಎಂ) ಪಕ್ಷದ ರಾಜ್ಯ ಸಮಿತಿಯ ಕರೆಯ ಮೇರೆಗೆ ಕರ್ನಾಟಕ ಪ್ರಾಂತ ರೈತ ಸಂಘ, ಅಂಗನವಾಡಿ ನೌಕರರ ಸಂಘ, ಗ್ರಾಮೀಣ ಕೃಪಾಂಕ ನೌಕರರ ಸಂಘ, ಗ್ರಾಮ ಪಂಚಾಯಿತಿ ನೌಕರರ ಸಂಘ, ಡಿವೈಎಫ್ಐ, ಸಿಐಟಿಯು ಬಿಸಿಯೂಟ ನೌಕರರ ಸಂಘ ಈ ಎಲ್ಲಾ ಸಂಘಟನೆಗಳು ತಾಲ್ಲೂಕು ಮಟ್ಟದಲ್ಲಿ ಸಭೆ ಸೇರಿ ಪ್ರಚಾರಾಂದೋಲನ ಮಾಡಲಾಯಿತು ಹಾಗೂ ಕರಪತ್ರಗಳನ್ನು ವಿತರಿಸಲಾಯಿತು. ಪ್ರಾಂತ ರೈತ ಸಂಘ, ಸಿಪಿಐ(ಎಂ) ಪಕ್ಷದ ಹಾಗೂ ಗ್ರಾಮ ಪಂಚಾಯಿತಿ ನೌಕರರ ಕರಪತ್ರಗಳನ್ನು ಹಂಚಲಾಯಿತು. ಬಿಜಾಪುರ ನಗರದಲ್ಲಿ ಆಟೋ ರಿಕ್ಷಾ ಮೂಲಕ ಸಿಪಿಐ(ಎಂ) ಶಾಖೆಗಳ ಸಭೆ ಸೇರಿ ಕರಪತ್ರ ವಿತರಿಸಿ ಪ್ರಚಾರಾಂದೋಲನ ಮಾಡಲಾಯಿತು. ಬಿಜಾಪುರ ನಗರದಿಂದ ಜೀಪ್ ಜಾಥಾ ಪ್ರಾರಂಭವಾಗಿ ಪ್ರಚಾರ ಮಾಡುತ್ತಾ ಇಂಡಿಯಲ್ಲಿ ತಾಲ್ಲೂಕು ಪಂಚಾಯಿತಿಯಲ್ಲಿ ಸಭೆ ಸೇರಿ 17-18 ರಂದು ಇಂಡಿ ತಾಲ್ಲೂಕಿನಾದ್ಯಂತ ಜೀಪ್ ಜಾಥಾ ಪ್ರಚಾರಾಂದೋಲನ ಮಾಡಲಾಯಿತು. ಇದರ ನೇತೃತ್ವವನ್ನು ಭೀಮಶಿ ಕಲಾದಗಿ, ಸುರೇಖಾ ರಜಪೂತ, ಎಂ.ಬಿ.ಕೊರಬಿ ವಹಿಸಿದ್ದರು.

ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ತಹಶೀಲ್ದಾರ್ ಕಛೇರಿಗೆ ಬಿಜಾಪುರ ನಗರದಲ್ಲಿ ಜಿಲ್ಲಾಧಿಕಾರಿಗಳ ಕಛೇರಿಗೆ 13.04.2011ರಂದು ಮುತ್ತಿಗೆ ಹಾಕಲಾಯಿತು. ಬಿಜಾಪುರ ನಗರದಲ್ಲಿ ಸಿದ್ದೇಶ್ವರ ದೇವಸ್ಥಾನದಿಂದ ಕೆಂಬಾವುಟದ ಜೊತೆಗೆ ಧ್ವಜಗಳು ಹಾಗೂ ಬ್ಯಾನರ್‌ಗಳು ರಾರಾಜಿಸಿದವು. ಹಲಗೆಯ ಸಪ್ಪಳ ಘೋಷಣೆಗಳು ಜನರ ಗಮನ ಸೆಳೆದವು. ಜಿಲ್ಲಾಧಿಕಾರಿಗಳ ಕಛೇರಿಯನ್ನು ಎರಡು ತಾಸು ಬಂದ್ ಮಾಡಿ ಮುತ್ತಿಗೆ ಹಾಕಲಾಯಿತು.



ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಭೀಮಶಿ ಕಲಾದಗಿ, ಮನ್ನುಸಾಬ ಕಲಾದಗಿ, ಸುರೇಖಾ ರಜಪೂತ, ವಿ.ಎಂ.ಸೊನ್ನದ, ಸೋಮಪ್ಪ ಆಯಟ್ಟಿ, ಸುನಂದಾ ನಾಯಕ ಬೆಲೆ ಏರಿಕೆ, ಭ್ರಷ್ಟಾಚಾರಗಳ ವಿರುದ್ಧ ಮಾತನಾಡಿದರು.

ಇಂಡಿ ತಾಲ್ಲೂಕಿನಲ್ಲಿ ರೈತ ಭವನದಿಂದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಹೊರಟು ತಹಶೀಲ್ದಾರ್ ಕಛೇರಿಗೆ ಎರಡುವರೆ ತಾಸು ಮುತ್ತಿಗೆ ಹಾಕಿ ಬಂದ್ ಮಾಡಲಾಯಿತು. ಇದರ ನೇತೃತ್ವವನ್ನು ಸೋಮಣ್ಣ ಮೇತ್ರಿ, ಭಾರತಿ, ವಾಲಿ ಎಂ.ಬಿ.ಕೊರಬು, ಬಿ.ಡಿ.ಪಾಟೀಲ ವಹಿಸಿದ್ದರು.

ಸಿಂದಗಿಯಲ್ಲಿ ಅಂಬೇಡ್ಕರ್ ಸರ್ಕಲ್‌ನಿಂದ ಮುಖ್ಯ ಬೀದಿಗಳಲ್ಲಿ ಮೆರವಣಿಗೆ ಹೊರಟು ತಹಶೀಲ್ದಾರ್ ಕಛೇರಿಗೆ ಮುತ್ತಿಗೆ ಹಾಕಲಾಯಿತು. ಇದರ ಉಸ್ತುವಾರಿಯನ್ನು ಅಣ್ಣಾರಾಯ ಈಶಗೇರ, ಸರಸ್ವತಿ ಮಠ, ಶಿವಶರಣ ಅಲ್ಲಾಪುರ ನೇತೃತ್ವ ವಹಿಸಿ ಭಾಷಣ ಮಾಡಿದರು.

ಬಿ.ಬಾಗೇವಾಡಿಯಲ್ಲಿ ಬಸವೇಶ್ವರ ದೇವಾಲಯದಿಂದ ತಹಶೀಲ್ದಾರ್‌ರವರ ಕಛೇರಿಗೆ ಮೆರವಣಿಗೆ ಹೊರಟು ತಹಶೀಲ್ದಾರ್ ಕಛೇರಿಗೆ ಮುತ್ತಿಗೆ ಹಾಕಲಾಯಿತು. ರಾಮನಗೌಡ ನರಸಲಗಿ ರಾಮಣ್ಣ ಶಿರೋಳ, ಖಾಜಾಸಾಬ ಕೋಲಾರ, ಇದರ ನೇತೃತ್ವ ವಹಿಸಿದ್ದರು.

ಮುದ್ದೆಬಿಹಾಳದಲ್ಲಿ ತಾಲ್ಲೂಕು ಪಂಚಾಯಿತಿಯಿಂದ ತಹಶೀಲ್ದಾರ್ ಕಛೇರಿಗೆ ಹೊರಟು ಮುತ್ತಿಗೆ ಹಾಕಿದರು. ಇದರ ನೇತೃತ್ವವನ್ನು ಬಸನಗೌಡ ಬಿರಾದಾರ್, ಜಿ.ಎಸ್. ಪಾಟೀಲ ವಹಿಸಿದ್ದರು.

ವರದಿ: ಸೋಮಪ್ಪ ಆಯಟ್ಟಿ



ಸರ್ಕಾರಿ ಭೂಮಿ ಸಾಗುವಳಿದಾರರಿಗೆ ಹಕ್ಕುಪತ್ರಕ್ಕಾಗಿ ಆಗ್ರಹಿಸಿ ಬಿಜಾಪುರದಲ್ಲಿ ಅನಿರ್ದಿಷ್ಟ ಧರಣಿ ಸತ್ಯಾಗ್ರಹ

ಜನಶಕ್ತಿ
ಕನ್ನಡ ವಾರಪತ್ರಿಕೆ

ಬಿ.ಎಸ್‌ಎನ್‌ಎಲ್ ಮುಚ್ಚಿ ಖಾಸಗಿ ಕಂಪನಿಗಳಿಗೆ ಲಾಭ ಮಾಡಿಕೊಡಲು ವ್ಯವಸ್ಥಿತ ಸಂಚು

-ವಿ.ಎ.ಎನ್.ನಂಬೂದಿರಿ

ಭಾರತ ಸರ್ಕಾರದ ಸ್ವಾಮ್ಯದಲ್ಲಿರುವ ಬಿಎಸ್‌ಎನ್‌ಎಲ್ ಸಂಸ್ಥೆ ಹಲವಾರು ವರ್ಷಗಳಿಂದ ಯಶಸ್ವಿಯಾಗಿ ಕಾರ್ಯಾಚರಿಸುತ್ತಿದ್ದರೂ, ಅದು ನಷ್ಟದಲ್ಲಿದೆ ಎಂಬ ತಪ್ಪು ಮಾಹಿತಿಯನ್ನು ಜನರಲ್ಲಿ ಬಿತ್ತಿ ಸಂಸ್ಥೆಯ ಘನತೆಗೆ ಕುಂದುತರಲಾಗುತ್ತಿದೆ. ಮಾತ್ರವಲ್ಲ ರೋಗಗ್ರಸ್ಥ ಕಂಪನಿ ಎಂದು ತೋರಿಸಿ ಅದನ್ನು ಮುಚ್ಚಿ ಖಾಸಗಿ ಕಂಪನಿಗಳಿಗೆ ಅನುಕೂಲ ಮಾಡಿಕೊಡುವ ವ್ಯವಸ್ಥಿತ ಸಂಚು ಸರ್ಕಾರದ ಮಟ್ಟದಲ್ಲಿಯೇ ನಡೆಯುತ್ತಿದೆ ಎಂದು ಬಿಎಸ್‌ಎನ್‌ಎಲ್ ನೌಕರರ ಸಂಘದ ರಾಷ್ಟ್ರೀಯ ಅಧ್ಯಕ್ಷ ವಿ.ಎ.ಎನ್ ನಂಬೂದಿರಿ ಹೇಳಿದರು. ಅವರು ಮೇ 4 ರಂದು ಮಂಗಳೂರು ಪುರಭವನದಲ್ಲಿ ನಡೆದ ದಕ್ಷಿಣ ಕನ್ನಡ ಟೆಲಿಕಾಂ ಜಿಲ್ಲೆಯ ಬಿಎಸ್‌ಎನ್‌ಎಲ್ ನೌಕರರ ಸಂಘದ ನಾಲ್ಕನೇ ಸಮಾವೇಶ ಹಾಗೂ 'ಬಿಎಸ್‌ಎನ್‌ಎಲ್‌ನ ಪ್ರಸಕ್ತ ಸ್ಥಿತಿಗತಿ ಹಾಗೂ ಅದನ್ನು ಸರಿಪಡಿಸುವ ಕ್ರಮಗಳು' ಎಂಬ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಬಿಎಸ್‌ಎನ್‌ಎಲ್ ನೌಕರರ ಸಂಘದ ಕರ್ನಾಟಕ ವಲಯದ ಕಾರ್ಯದರ್ಶಿ ಸಿ.ಕೆ.ಗುಂಡಣ್ಣ ಮಾತನಾಡಿ, ಸುಮಾರು 1 ರಿಂದ 2 ಲಕ್ಷ ನೌಕರರನ್ನು ಕಡ್ಡಾಯವಾಗಿ ನಿವೃತ್ತಿಗೊಳಿಸುವ ಸರ್ಕಾರದ ಪ್ರಸ್ತಾವವನ್ನು ಖಂಡಿಸಿದರು. ಖಾಸಗಿ ಕಂಪನಿಗಳ ದೂರವಾಣಿ ಸಂಪರ್ಕಕ್ಕೆ ರಸ್ತೆಗಳು ಹಾಗೂ ಇನ್ನಿತರ ಸ್ಥಳಗಳಲ್ಲಿ ಅಗೆತಕ್ಕೆ ಸ್ಥಳೀಯಾಡಳಿತ ಯಾವುದೇ ಮುಲಾಜಿಲ್ಲದೆ ಸಮ್ಮತಿ ಸೂಚಿಸಿದರೆ, ಬಿಎಸ್‌ಎನ್‌ಎಲ್‌ನಿಂದ ಈ ಕಾಮಗಾರಿಗೆ ಅಡ್ಡಿಪಡಿಸಲಾಗುತ್ತಿರುವುದು ಸರಿಯಲ್ಲ: ಕೆಲವು ಖಾಸಗಿ ಕಂಪನಿಗಳ ಪರ ಸರಕಾರವೇ ಕೆಲಸ ಮಾಡುತ್ತಿರುವ ಸಂಶಯ ಮೂಡುತ್ತಿದೆ ಎಂದು ದೂರಿದರು.

ರಾಷ್ಟ್ರೀಯ ಬಿಎಸ್‌ಎನ್‌ಎಲ್ ನೌಕರರ ಸಂಘದ ಸಹಾಯಕ ಪ್ರಧಾನ ಕಾರ್ಯದರ್ಶಿ ಪಿ.ಮುಕುಂದನ್, ದಕ್ಷಿಣ ಜಿಲ್ಲಾ ಸಂಘದ ಅಧ್ಯಕ್ಷ ಪಿ.ಸುರೇಂದ್ರನ್, ಕಾರ್ಯದರ್ಶಿ ಎಂ.ಪಿ. ವೇಣುಗೋಪಾಲನ್ ನಂಬಿಯಾರ್, ಖಜಾಂಚಿ ಎ.ತಿಮ್ಮಪ್ಪ, ಅಖಿಲ ಭಾರತ ವಿಮಾ ನೌಕರರ ಸಂಘದ ಹೇಮಲತಾ ಮೊದಲಾದವರು ಉಪಸ್ಥಿತರಿದ್ದರು. ವೇಣುಗೋಪಾಲ ನಂಬಿಯಾರ್ ಸ್ವಾಗತಿಸಿದರು.

ಚುನಾವಣಾ ಫಲಿತಾಂಶಗಳ ಕುರಿತು ...

ಪುಟ 9 ರಿಂದ

ಮತ್ತು ವಿಪರೀತ ಪ್ರತಿಕೂಲ ಸನ್ನಿವೇಶಗಳಿರುವಾಗಲೂ ಲಕ್ಷಾಂತರ ಜನತೆ ಸಿಪಿಐ(ಎಂ)ಗೆ ಹಾಗೂ ಎಡರಂಗಕ್ಕೆ ಮತ ನೀಡಿ ಬೆಂಬಲಿಸಿದ್ದಾರೆ. ಆ ಎಲ್ಲಾ ಮಹಾ ಜನತೆಗೆ ಪೊಲಿಟ್ ಬ್ಯೂರೋ ಕೃತಜ್ಞತೆ ಸಲ್ಲಿಸಿದೆ. ಸಿಪಿಐ(ಎಂ) ಹಾಗೂ ಎಡರಂಗವು ಜನತೆಯ ಹಾಗೂ ದುಡಿವ ಜನತೆಯ ಹಿತಾಸಕ್ತಿ ಎತ್ತಿ ಹಿಡಿಯಲು ಸದಾ ಬದ್ಧವೆಂದು ಈ ಸಂದರ್ಭದಲ್ಲಿ ಭರವಸೆ ನೀಡಿದೆ. ಇದೇ ಹೊತ್ತಿನಲ್ಲಿ 2009ರ ಲೋಕಸಭಾ ಚುನಾವಣೆಯ ಸಂದರ್ಭ ದಲ್ಲಾದಂತೆ ಸಿಪಿಐ(ಎಂ) ಮತ್ತು ಎಡರಂಗದ ಕಾರ್ಯಕರ್ತರು, ಕಛೇರಿಗಳ ಮೇಲೆ ಧಾಳಿಗಳ ಪುನರಾವರ್ತನೆಯಾಗದಂತೆ ಎಚ್ಚರಿಕೆ ನೀಡಿದೆ. ಜನತೆಯು ಶಾಂತಿ ಹಾಗೂ ನೆಮ್ಮದಿ ಕಾಪಾಡಲು ಶ್ರಮಿಸಬೇಕೆಂದು ಮನವಿ ಮಾಡಿದೆ.

ಕೇರಳ :

ಕಳೆದ ಐದು ವರ್ಷಗಳ ಎಡ ಪ್ರಜಾಸತ್ತಾತ್ಮಕ ರಂಗದ ಆಡಳಿತವನ್ನು ಬಹುತೇಕವಾಗಿ ಜನತೆ ಅಂಗೀಕರಿಸಿರುವುದು ಕೇರಳದ ಫಲಿತಾಂಶವು ತೋರಿಸಿದೆ. ಎಲ್.ಡಿ.ಎಫ್. ಅತ್ಯಂತ ಕಡಿಮೆ ಅಂತರದಲ್ಲಿ ಚುನಾವಣೆಯಲ್ಲಿ ಸೋತಿದೆ. ಯುಡಿಎಫ್ ಕೇವಲ ಎರಡು ಸ್ಥಾನಗಳ ಕಡಿಮೆ ಅಂತರದಲ್ಲಿ ಮುಂದಿದೆ.

ಸರ್ಕಾರ ವಿರೋಧಿ ಮನೋಭಾವವನ್ನು ಇದು ತೋರಿಸುವುದಿಲ್ಲ. ಕೆಲವು ಜಾತೀಯ ಮತ್ತು ಧಾರ್ಮಿಕ ಶಕ್ತಿಗಳು ಕಾರ್ಯಪ್ರವೃತ್ತವಾಗಿ ಚುನಾವಣೆಗಳನ್ನು ಪ್ರಭಾವಿಸಿವೆ.

ಕೇರಳದಲ್ಲಿ ಈ ವಿಶ್ವಾಸಾರ್ಹ ಫಲಿತಾಂಶವನ್ನು ಸಾಧ್ಯವಾಗಿಸಿದ ಪಕ್ಷದ ಮತ್ತು ಎಡ ಪ್ರಜಾಸತ್ತಾತ್ಮಕ ರಂಗದ ಸಾವಿರಾರು ಕಾರ್ಯಕರ್ತರಿಗೆ ಸಿಪಿಐ(ಎಂ) ಪಿ.ಬಿ. ತುಂಬು ಹೃದಯದ ಹಾರ್ದಿಕ ಕೃತಜ್ಞತೆ ತಿಳಿಸಿದೆ. ಸಿಪಿಐ(ಎಂ) ಮತ್ತು ಎಲ್‌ಡಿಎಫ್ ಜನಪರವಾದ ಪರ್ಯಾಯ ನೀತಿಗಳನ್ನು ಪ್ರತಿಪಾದಿಸುತ್ತಾ, ದುಡಿವ ಜನರ ಹಿತದ ರಕ್ಷಣೆಯನ್ನು ತೀವ್ರವಾಗಿ ಪ್ರತಿಪಾದಿಸಲಿದೆ.

ಎಡಶಕ್ತಿಗಳ ಪಾತ್ರ:

ಪಶ್ಚಿಮ ಬಂಗಾಳ ಮತ್ತು ಕೇರಳಗಳಲ್ಲಿನ ಫಲಿತಾಂಶಗಳು ದೇಶದ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ನಿರಾಶೆಯನ್ನು ತಂದಿವೆ. ಆದರೆ ಇದು ಎಡ ನೀತಿಗಳ ಮತ್ತು ಕಾರ್ಯಕ್ರಮಗಳನ್ನು ಅಪ್ರಸ್ತುತವನ್ನಾಗಿಸುತ್ತವೆ ಎಂದರ್ಥವಲ್ಲ. ಕೇರಳ-ಪಶ್ಚಿಮಬಂಗಾಳದಲ್ಲಿ ಸಿಪಿಐ(ಎಂ)-ಎಡಶಕ್ತಿಗಳು ಜನತೆಯ ನಡುವೆ ತನ್ನ ಕೆಲಸವನ್ನು ಮುಂದುವರೆಸುವುದು ಮಾತ್ರವಲ್ಲ ಉದಾರೀಕರಣದ ಆರ್ಥಿಕ ನೀತಿಗಳ ವಿರುದ್ಧ ತೀವ್ರವಾದ ಹೋರಾಟಗಳನ್ನು ನಡೆಸಲಿದೆ. ಜನರ ಬದುಕು, ದುಡಿವ ವರ್ಗದ ಹಿತಾಸಕ್ತಿಗಳು ಮತ್ತು ಕೋಮುವಾದದ ವಿರುದ್ಧ ಧರ್ಮ ನಿರಪೇಕ್ಷತೆಯ ನೀತಿಗಳನ್ನು ದೇಶದಲ್ಲಿ ರಕ್ಷಿಸಲು ತೊಡಗಲಿವೆ.

ತಮಿಳುನಾಡು :

ತಮಿಳುನಾಡಿಲ್ಲಿ ಎಐಎಡಿಎಂಕೆ ಮೈತ್ರಿಕೂಟದ ಭಾರೀ ಬಹುಮತದ ಗೆಲುವನ್ನು ಪಿ.ಬಿ. ಸ್ವಾಗತಿಸಿದೆ. ಈ ಮೈತ್ರಿಕೂಟ ವಿಧಾನಸಭೆಯ ಐದನೇ ನಾಲ್ಕು ಭಾಗಕ್ಕಿಂತ ಅಧಿಕವಾಗಿ ಪಡೆದಿವೆ. ಡಿಎಂಕೆಯ ಭ್ರಷ್ಟ ದುರಾಡಳಿತ ವಿರುದ್ಧ ನಿರ್ಣಾಯಕವಾಗಿ ಜನತೆ ತಿರಸ್ಕರಿಸಿರುವ ತೀರ್ಪು ಇದಾಗಿದೆ. ಹಾಗೆಯೇ ಕೇಂದ್ರದ ಯುಪಿಎ ಆಡಳಿತದಡಿಯಲ್ಲಿ ಬೆಳೆದು ನಿಂತಿರುವ ಭ್ರಷ್ಟಾಚಾರಕ್ಕೆ ತೀವ್ರ ತಿರಸ್ಕಾರವೂ ಆಗಿದೆ.

ಅಸ್ಸಾಂ:

ವಿಧಾನಸಭಾ ಚುನಾವಣೆಗಳನ್ನು ಕಾಂಗ್ರೆಸ್ ಪಕ್ಷ ಬಹುಮತ ಪಡೆದುಕೊಟ್ಟಿದೆ. 'ಉಲ್ಫಾ'ದೊಂದಿಗೆ ಶಾಂತಿ ಮಾತುಕತೆ ಮತ್ತು ವಿರೋಧ ಪಕ್ಷಗಳ ನಡುವಿನ ವಿಭಜನೆಯು ಕಾಂಗ್ರೆಸ್ ಗೆಲ್ಲುವಲ್ಲಿ ಕಾರಣವಾಗಿದೆ.

ಯುಪಿಎ ದರ್ಬಾರ್....

ಪುಟ 12 ರಿಂದ

ಕೊಡಿಸಲಿಕ್ಕಾಗಿಯೇ ಈ ತಂತ್ರ ಅಳವಡಿಸಲಾಯಿತು ಎಂದು ವಕೀಲರು ವಾದಿಸಿದರು. ಏಕೆಂದರೆ ಅವರ ಅನರ್ಹ ಅರ್ಜಿಯ ದಿನಾಂಕವನ್ನು ನೋಡಿದ್ದರೂ ಅತ್ಯಂತ ಫಲದಾಯಕವಾದ ದಿಲ್ಲಿ ವಲಯ ಬೇರೆ ಯಾರಿಗೋ ದಕ್ಕಬೇಕಾಗಿತ್ತು. ಕರ್ನಾಟಕ, ಆಂಧ್ರಪ್ರದೇಶ ವಲಯಗಳಂತಹ ಅಷ್ಟೇನೂ ಫಲದಾಯಕವಲ್ಲದ ವಲಯಗಳನ್ನು ಪಡೆಯಲು ಓಡಾಡುವ ಅಗತ್ಯವೇನೂ ಇರಲಿಲ್ಲ. ಸಿಹಿ-ಸಿಹಿ ಹಣ್ಣುಗಳನ್ನು ಆರಿಸಿಕೊಳ್ಳಬೇಕಾದರೆ ಕೌಂಟರ್‌ನಲ್ಲಿ ಮೊದಲಿಗನಾಗಿರಬೇಕು- ಇದು ವಕೀಲರು ಈ ತಂತ್ರವನ್ನು ನ್ಯಾಯಾಲಯದೆದುರು ಬಿಡಿಸಿಟ್ಟ ರೀತಿ. ಇದು ಯುಪಿಎ-2 ಮಾಜಿ ಮಂತ್ರಿಗಳು ಸ್ವಾನ್, ಯುನಿಟೆಕ್ ಮತ್ತಿತರ ತಮಗೆ 'ಪ್ರಯೋಜನ'ಕಾರಿಯಾದ ಕಂಪನಿಗಳಿಗೆ 2ಜಿ ಕೊಡಿಸಲು ರೂಪಿಸಿದ ಪಿತೂರಿ ಎಂದು ಸಿಬಿಐ ವಕೀಲರು ಹೇಳಿದರು.

★

ಸುದ್ದಿ ಬಿಂಬ

ಅಯೋಧ್ಯೆ: ಯಥಾಸ್ಥಿತಿಗೆ ನ್ಯಾಯಾಲಯದ ಆದೇಶ

'ನಿವೇಶನವನ್ನು ಮೂರು ವ್ಯಾಜ್ಯದಾರರಿಗೆ ಹಂಚಲು ಯಾವುದೇ ಅರ್ಜಿದಾರರು ಮನವಿ ಮಾಡದಿದ್ದರೂ, ಮೂರು ಭಾಗಗಳಾಗಿ ವಿಂಗಡಿಸಿದ ಹೈಕೋರ್ಟ್ ತೀರ್ಪು ನೀಡಿರುವುದು ಆಶ್ಚರ್ಯಕರವಾಗಿದೆ'. 'ಹೈಕೋರ್ಟ್ ತೀರ್ಪು ತುಂಬಾ ವಿಚಿತ್ರವಾಗಿದೆ'.

'ಕೇಂದ್ರ ಸರ್ಕಾರ ವಶಕ್ಕೆ ತೆಗೆದುಕೊಂಡಿರುವ ವಿವಾದಿತ ನಿವೇಶನ, ಕಟ್ಟಡ ಹಾಗೂ ಸುತ್ತಮುತ್ತಲಿನ ಸುಮಾರು 67 ಎಕರೆ ಭೂಮಿಯಲ್ಲಿ ಮುಂದಿನ ತೀರ್ಪಿನವರೆಗೆ ಯಾವುದೇ ಧಾರ್ಮಿಕ ಚಟುವಟಿಕೆ ನಡೆಸಬಾರದು'

ವಿವಾದಿತ ನಿವೇಶನ ವಿಭಜನೆಗೆ ಯಾರೂ ಕೋರದಿರುವಾಗ ಅದ್ಯಾವ ರೀತಿಯಲ್ಲಿ ತ್ರಿಪಕ್ಷಗಳಿಗೂ ವಿಂಗಡಿಸಲು ಆದೇಶ ನೀಡಲಾಯಿತು.

ಹೈಕೋರ್ಟ್ ತೀರ್ಪಿನಿಂದ ಹೊಸ ಸಮಸ್ಯೆ ಸೃಷ್ಟಿಯಾಗಿದ್ದು, ಅದನ್ನು ಬಗೆಹರಿಸುವುದು ಬಹಳ ಕಷ್ಟದ ಕೆಲಸ'.

ನ್ಯಾಯಮೂರ್ತಿಗಳಾದ ಅಫ್ತಾಬ್ ಆಲಂ ಮತ್ತು ಆರ್.ಎಂ.ಲೋಧಾ ನೇತೃತ್ವದ ಪೀಠ.

- ಅಯೋಧ್ಯಾ ವಿವಾದದ ಕುರಿತ ಅಲಹಾಬಾದ್ ಹೈಕೋರ್ಟ್‌ನ ತೀರ್ಪಿನ ಕುರಿತು

'ಆದರ್ಶ' ಹಗರಣ? : ಮಾಜಿ ಕಾಂಗ್ರೆಸ್ ಮು.ಮಂ.ಗಳಿಗೆ ಸಮನ್ಸ್

ಆದರ್ಶ ಹೌಸಿಂಗ್ ಸೊಸೈಟಿ ಹಗರಣದ ತನಿಖೆ ನಡೆಸುತ್ತಿರುವ ಆಯೋಗ ಮಹಾರಾಷ್ಟ್ರದ ಮಾಜೀ ಮುಖ್ಯಮಂತ್ರಿಗಳಾದ ವಿಲಾಸರಾವ್ ದೇಶಮುಖ್ ಮತ್ತು ಅಶೋಕ ಚವ್ಹಾಣ್‌ಗೆ ಸಾಕ್ಷಿಗಳಾಗಿ ಹಾಜರಾಗಲು ಸಮನ್ಸ್ ಕಳಿಸಿದೆ. ಕಳೆದ ವಾರ ಈಗ ಯುಪಿಎ-2 ಮಂತ್ರಿಯಾಗಿರುವ ಸುಶೀಲ್ ಕುಮಾರ ಶಿಂಧೆಯವರಿಗೆ ಕಳೆದ ವಾರ ಸಮನ್ಸ್ ಕಳಿಸಲಾಗಿತ್ತು. ಅಶೋಕ ಚವ್ಹಾಣ್ ಕೂಡ ಈ ಹಗರಣದ ಪರಿಣಾಮವಾಗಿ ಮುಖ್ಯಮಂತ್ರಿ ಸ್ಥಾನ ಬಿಟ್ಟ ಮೇಲೆ ಯುಪಿಎ ಸರಕಾರದಲ್ಲಿ ಗ್ರಾಮೀಣಾಭಿವೃದ್ಧಿ ಮಂತ್ರಿಗಳಾಗಿದ್ದಾರೆ. ಇವರು ಹಗರಣದ 14 ಆಪಾದಿರತಲ್ಲಿ ಒಬ್ಬರು. ಕಾರ್ಗಿಲ್ ಸಮರದಲ್ಲಿ ಮಡಿದ ಸೈನಿಕರ ಪತ್ನಿಯರ ಹೆಸರಿನ ಈ ವಸತಿ ಯೋಜನೆಯಲ್ಲಿ ಇತರರಿಗೆ ಅಪಾರ್ಟ್‌ಮೆಂಟ್‌ಗಳನ್ನು ಕೊಟ್ಟ ಹಗರಣವಿದು. ಇವುಗಳಲ್ಲಿ ಶೇ.40 ವನ್ನು ರೆವಿನ್ಯೂ ಮಂತ್ರಿಯಾಗಿ ಅಶೋಕ ಚವ್ಹಾಣ್ ಹಂಚಿದ್ದರಂತೆ. ಆಗ ಮುಖ್ಯ ಮಂತ್ರಿಗಳಾಗಿ ಕಡತವನ್ನು ವಿಲೇವಾರಿ ಮಾಡಿದವರು ದೇಶಮುಖ್.

JANASHAKTHI KANNADA VARA PATRIKE MAY 22, 2011 Price : Rs. 5/- RNI No. KARKAN /2006/17926 Posted on every Saturday Postal Reg. No. RNP/KA/BGS/2078/2010-12
Posted at MBC Bangalore GPO

ಸಮುದಾಯ ಜಾಥಾ

ಶೋಷಕ, ಸುಲಿಗೆಕೋರ, ಅಸಮಾನ ಆರ್ಥಿಕ, ಸಾಮಾಜಿಕ ವ್ಯವಸ್ಥೆಯನ್ನು ಸಂರಕ್ಷಿಸಿಕೊಂಡು, ಇನ್ನಷ್ಟು ಇನ್ನಷ್ಟು ಬಲಪಡಿಸಿಕೊಂಡು ಹೋಗುವ ಆಳುವ ವರ್ಗಗಳ ಹಾಗೂ ಸಾರ್ವಜನಿಕ, ನೈಸರ್ಗಿಕ ಸಂಪತ್ತನ್ನು ಖಾಸಗಿ ಲಾಭಕ್ಕಾಗಿ ಕೊಳ್ಳೆ ಹೊಡೆಯುವ ಹುನ್ನಾರವೇ ಭ್ರಷ್ಟಾಚಾರ ಮೂಲ. ಕೂಡಿಡುವ ಪ್ರವೃತ್ತಿ ಬೆಳೆದು ತಲೆತಲಾಂತರಕ್ಕೂ ಸಾಕಾಗುವಷ್ಟನ್ನೂ ಈಗಲೇ ಸಂಪಾದಿಸುವ ಆಸೆ ಭ್ರಷ್ಟಾಚಾರದ ಮತ್ತೊಂದು ಮೂಲ. ಇದು ಆರ್ಥಿಕ ಭ್ರಷ್ಟಾಚಾರ. ಇದಲ್ಲದೆ ಧಾರ್ಮಿಕ ಭ್ರಷ್ಟಾಚಾರ, ಸಾಮಾಜಿಕ ಭ್ರಷ್ಟಾಚಾರ, ಸಾಂಸ್ಕೃತಿಕ ಭ್ರಷ್ಟಾಚಾರ, ರಾಜಕೀಯ ಭ್ರಷ್ಟಾಚಾರ, ನೈತಿಕ ಭ್ರಷ್ಟಾಚಾರ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಈ ಎಲ್ಲವೂ ಸಂಪತ್ತಿನ ಆಸೆಗಾಗಿ.

ಭ್ರಷ್ಟಾಚಾರ ಇಂದು ಪ್ರಜಾಪ್ರಭುತ್ವ ವ್ಯವಸ್ಥೆಗೇ ಸವಾಲಾಗಿದೆ. ಪ್ರಜಾಪ್ರಭುತ್ವದ ಮುಖ್ಯ ಆಧಾರ ಸ್ಥಂಭಗಳಾದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗ ಇಂದು ಭ್ರಷ್ಟಾಚಾರದಿಂದ ನಲುಗುತ್ತಿವೆ. ಪ್ರಜಾಪ್ರಭುತ್ವದ ನಾಲ್ಕನೇ ಆಧಾರಸ್ಥಂಭವೆಂದು ಪರಿಗಣಿಸಲ್ಪಟ್ಟ ಮಾಧ್ಯಮ ಕೂಡ ಇಂದು ಭ್ರಷ್ಟಾಚಾರದಿಂದ ಮುಕ್ತವಾಗಿಲ್ಲ. ಒಂದು ಕಡೆ ಭ್ರಷ್ಟಾಚಾರ, ಮತ್ತೊಂದೆಡೆ ತೀವ್ರ ಬೆಲೆ ಏರಿಕೆ ಇವು ಜನಸಮುದಾಯದ ಬದುಕನ್ನು ಹಿಂಡಿ ಹಿಪ್ಪೆ ಮಾಡುತ್ತಿವೆ. ಕಳೆದ ಹಲವಾರು ವರ್ಷಗಳಿಂದ ಜನರ ನೋವು ನಲಿವುಗಳಿಗೆ ಸ್ಪಂದಿಸುತ್ತಾ ಬಂದಿರುವ 'ಸಮುದಾಯ' ಭ್ರಷ್ಟಾಚಾರ ಮತ್ತು ಬೆಲೆಏರಿಕೆ ವಿರುದ್ಧ ರಾಜ್ಯವ್ಯಾಪೀ ಸಾಂಸ್ಕೃತಿಕ ಜಾತಾವನ್ನು ಯೋಜಿಸಿದೆ.


ಮೇ 15, 2011 ಭಾನುವಾರದಂದು ಏಕಕಾಲದಲ್ಲಿ ಧಾರವಾಡ ಹಾಗೂ ಬೀದರ್‌ನಲ್ಲಿ ಉದ್ಘಾಟನೆಯಾಗುವ ಸಾಂಸ್ಕೃತಿಕ ಜಾಥಾ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಸಂಚರಿಸಿ ಮೇ 28, 2011 ಶನಿವಾರದಂದು ಬೆಂಗಳೂರಿನಲ್ಲಿ ಸಮಾರೋಪಗೊಳ್ಳಲಿದೆ. ವ್ಯಂಗ್ಯಚಿತ್ರ ಪ್ರದರ್ಶನ, ಕಿರುಹೊತ್ತಿಗೆ ಮಾರಾಟ, ಬೀದಿನಾಟಕ, ಹಾಡುಗಳು, ಕವಿಗೋಷ್ಠಿ, ವಿಚಾರ ಸಂಕಿರಣ ಮುಂತಾದವು ಜಾಥಾದ ಪ್ರಮುಖ ಆಕರ್ಷಣೆಯಾಗಲಿವೆ.

ಈ ಜನಜಾಗೃತಿ ಕಾರ್ಯಕ್ರಮಕ್ಕೆ ಎಲ್ಲಾ ರೀತಿಯ ಬೆಂಬಲ, ಸಹಾಯ ಹಾಗೂ ಸಹಕಾರ ಅಗತ್ಯವಾಗಿದೆ.

ಬೀದರ್ ಜಾಥಾ : ಬೀದರ್, ಗುಲ್ಬರ್ಗಾ, ಯಾದಗೀರ್, ರಾಯಚೂರ್, ಸಿಂಧನೂರ್, ಹೊಸಪೇಟೆ, ಕೊಪ್ಪಳ, ಗಜೇಂದ್ರಗಡ, ಹಾವೇರಿ, ಹರಪನಹಳ್ಳಿ, ಚಿತ್ರದುರ್ಗ, ತುಮಕೂರು, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ಮಾಲೂರು, ಹೊಸಕೋಟೆ, ಕೆ.ಆರ್.ಪುರಂ, ಅನೇಕಲ್, ಬೆಂಗಳೂರು.

ಧಾರವಾಡ ಜಾಥಾ : ಧಾರವಾಡ, ರಾಮದುರ್ಗ, ಶಿರಸಿ, ಕುಂದಾಪುರ, ಮಂಗಳೂರು, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ವಿರಾಜಪೇಟೆ, ಮೈಸೂರು, ಚಾಮರಾಜನಗರ, ಮಳವಳ್ಳಿ, ಮಂಡ್ಯ, ರಾಮನಗರ, ಮಾಗಡಿ, ನೆಲಮಂಗಲ, ದಾಸರಹಳ್ಳಿ, ಬೆಂಗಳೂರು.

ಕರ್ನಾಟಕದ 'ಹೆಮ್ಮೆ'- ಭ್ರಷ್ಟಾಚಾರದಲ್ಲಿ ನಂಬರ್ ಒನ್ ಸ್ಥಾನದತ್ತ



[illegible]





ಕನಸುಗಳ ಹೆತ್ತರು 'ಮೇ ದಿನ' ಇತ್ತರು



ಕವನ

ಬಸಿದ ಬೆವರು
ಬಿಸಿ ರಕ್ತ ಕೊತಕೊತ ಕುದಿಕುದಿದು
ಆವಿಯಾಗಿ ಮುಗಿಲೇತ್ತರಕ್ಕೆ ಬುಗಿಲೆದ್ದು
ಎದೆಯ ಗೂಡೊಳಗೆ
ಮೊಡವಾಗಿ ಹೆಪ್ಪುಗಟ್ಟಿದ ರೋಷ
ಬಡಬಡ ಗುಡುಗು ಸಿಡಿಲು
ಕಗ್ಗತ್ತಲೆ ಬಸಿರ ಸೀಳಿ
ಧೋ... ಎಂದು ಸುರಿಯಿತು ಕ್ರಾಂತಿಯ ಮಳೆ
ಉಕ್ಕಿ ಹರಿದು ರಕ್ತದ ಹೊಳೆ
ಅಸಹನೆ ಕಡಲು ಮೊರೆದು ಕೋಪಾಗ್ನಿಯ ಜ್ವಾಲೆ
ಘೋಷಣೆಗಳ ಅಲೆ
ರೊಚ್ಚಿಗೆದ್ದ ಕಾಡ್ಗಿಚ್ಚಿನ ಕೆಚ್ಚೆದೆಯ
ಕೆಂಗಣ್ಣಿನ ಬಿರುಗಾಳಿಯ ಲೀಲೆ
ರಕ್ತ ತೊಯ್ದು ಕೆಂಪಾದ ಕಾಂಪೊಂಡು
ಅರಮನೆಯ ಕೋಟೆ ಬಂಗಲೆ
ಚಿಕಾಗೋ... ಗಲ್ಲಿಗಲ್ಲಿಯ
ಹಸಿ ಹಸಿ ಗೋಡೆಗಳ ಮೇಲೆ
ನೆತ್ತರು ಬಿಡಿಸಿದ ಶ್ರಮಿಕನ ಆಯುಧ
ಸುತ್ತಿಗೆಯ ಚಿತ್ತಾರ
ಮಾಲೀಕರ ಅಟ್ಟಹಾಸದ ಎದೆ ಮೆಟ್ಟಿನಿಂತ
ಕೆಂಬಾವುಟದ ಚೆಲ್ಲಿದ ನೆತ್ತರಿನ ಉತ್ತರ
ಹಸಿದ ಹೊಟ್ಟೆಯ ಸಂಕಟ
ಸ್ಫೋಟಗೊಂಡ ಅಗ್ನಿ ಪರ್ವತ
ರಕ್ತದೊಕುಳಿ ಹೆಪ್ಪುಗಟ್ಟಿ
ರೂಪತಾಳಿದ ಕೆಂಬಾವುಟ
ಗುಲಾಮಗಿರಿಯ ಮೆಟ್ಟಿನಿಂತ
ಇತಿಹಾಸದ ಸಂಪುಟ
ಮಾಲೀಕರ ನಿದ್ದೆಗೆಡಿಸಿದ ಸುತ್ತಿಗೆ
ಕಂಗೆಟ್ಟ ಶ್ರೀಮಂತರ ಸುಪ್ಪತ್ತಿಗೆ
ದಿಕ್ಪಾಪಾಲು ದೂಳಿಪಟ ಅರಸೊತ್ತಿಗೆ
'ಕೊಡೋದು ಮೂರುಕಾಸು
ಕೋಣೆ ತುಂಬ ಹಾಸು'
ಬಸಿದು ಬಸಿದು ಬೆವರು
ಸಿರಿಯಹೊಳೆ ಹರಿಸಿದರು.
ಹಸಿದ ಹೊಟ್ಟೆ ಬೆನ್ನು ಹತ್ತಿ
ತಲೆಯ ಮೇಲೆ ಶೋಷಣೆಯ ತೂಗು ಗತ್ತಿ
ಸಿಟ್ಟು ಸಿಡಿಲಾಗಿ
ಒಗ್ಗಟ್ಟು ಕಡಲಾಗಿ
ಬಾನಂಗಳದಿ ಮಿನುಗಿದ ಕೆಂಪು ಚುಕ್ಕಿ
ಬೆಂಕಿ ಆರಿ ಬೆಳಕಾಗಿ
ಐಕ್ಯತೆ ಚಿರಾಯುಗೊಂಡ
ಆ ದಿನ ಮೇ ದಿನ
ಅನ್ಯಾಯದ ಮುಳ್ಳನ್ನು ಕಿತ್ತರು
ಕಂಗೆಟ್ಟ ಕೈಗಳಿಗೆ ಕೆಂಬಾವುಟ ಕೊಟ್ಟರು
ಹರಿಸಿ ನೆತ್ತರು ಪ್ರಾಣ ತೆತ್ತರು
ನಮ್ಮ ಸಂಗಾತಿ ಹುತಾತ್ಮರು
ನಮಗಾಗಿ ಕನಸುಗಳ ಹೆತ್ತರು
ನನಸಾಗಿ ಮೇ ದಿನ ಇತ್ತರು

ರಚನೆ: ಮಹೇಶ್ ಉಗಿನಹಳ್ಳಿ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH